MYSORE LEGISLATIVE ASSEMBLY.

FIFTY-NINTH DAY.

Wednesday, 25th September 1963.

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

PAPERS LAID ON THE TABLE.

Sri M V. RAMA RAO (Minister for Law).—Sir, I beg to lay on the Table of the House Notification No. PHS 171 EPS 62, dated 2nd May, 1963 (The Mysore Prohibition (Appeal) Rules, 1963); as required under Section 125 of the Mysore Prohibition Act, 1961.

Sri R. M. PATIL (Minister for Home)—Sir, I beg to lay on the Table of the House Notification No. HD 39 TMT 63, dated 24th August, 1963 (Reduction of Tax payable under the Mysore Motor Vehicles Taxation Act, 1957 in respect of stage carriages plying in the Katcha Routes in the Hyderabad Area for the periods specified thereof); as required under sub-section (2) of Section 16 of the Mysore Motor Vehicles Taxation Act, 1957.

Sri R. M. PATIL (Minister for Home).—Sir, on behalf of Sri Ramakrishna Hegde, Minister for Co-operation and Development, I beg to lay on the Table of the House Notification No. DRL 8 REP 62, dated 3rd September 1963 (The No Confidence Motion against the Chairman or the Vice-Chairman of a Panchayat (Procedure) Second Amendment Rules, 1963); as required under section 246 of the Mysore Village Panchayats and Local Boards Act, 1959.

MOTION *re*: SCARCITY CONDITIONS IN THE STATE

Debate continued.

Mr. SPEAKER.—I wish to inform the House that 33 Members have already spoken and the 34th Member is to conclude to-day. Still, I have got a very large number of names. As I had mentioned yesterday, this being a very important matter, I propose to give chance to everybody and in return I am asking them to co-operate by being brief and to the point, omitting nothing which is important.

I, now, call upon Sri K. V. Byre Gowda to continue his speech. As the Member is absent, I suppose he has finished his speech.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಕ್ಷಾಮ ಪರಿಸ್ಥಿತಿ ಬಂದಿರುವುದು ಈಗಿನ ಕಾಲದಲ್ಲಿ ಮಾತ್ರ ಅಲ್ಲ. ಚರಿತ್ರೆ ಬರೆದಿರುವ ಕಾಲದಿಂದಲೂ ಬ್ರಿಟಿಷರ ಕಾಲದಲ್ಲಿಯೂ ಕ್ಷಾಮ ಬದ್ದಿದೆ. ಅಂದಿಗೂ ಇಂದಿಗೂ ಅದರಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಅದೇನೆಂದರೆ ಕ್ಷಾಮದ ಪರಿಣಾಮ ಈಗ ಜಾಸ್ತಿಯಾಗಿದೆ, ಅಷ್ಟೆ. ಹಿಂದಕ್ಕೆ ಬೇರೆ ತರಹ ಇತ್ತು. ಇಂದು ಬೇರೆ ತರಹ ಇದೆ. ಅದಕ್ಕೆ ಕಾರಣ ಏನೆಂದರೆ ಇದು ಯಂತ್ರಯುಗ, ತಾಂತ್ರಿಕ ಯುಗ. ತಾಂತ್ರಿಕ ಯುಗದ ಕಾಲದಲ್ಲಿಯೂ ಒಂದು ಶಾಶ್ವತವಾದ ಪರಿಹಾರ ಕ್ಷಾಮನಿವಾರಣೆಗೆ ಹುಡುಕದೇ ಇರುವುದಕ್ಕೆ ಕಾರಣವೇನು ಎಂಬುದನ್ನು ನಾವು ಇಂದು ಯೋಚನೆ ಮಾಡಬೇಕಾಗಿದೆ.

Mr. SPEAKER.—Let him kindly omit the process of thinking. I do not want travails of the thought which ultimately resulted in the expression. Let him give me the expression.

ಶ್ರೀ ವಿ. ಎಂ. ದೇವ್.—ಆಮೇಲೆ ಇನ್ನೊಂದು ಏನು ಎಂದರೆ, ಏತಕ್ಕೆ ಹೀಗೆ ಆಯಿತು ಎಂದು ಯೋಚನೆ ಮಾಡಿದರೆ ಸಾಮಾನ್ಯವಾಗಿ ರೈತನ ಜೀವನದ ಬಗ್ಗೆ ಕೇಳುವವರೇ ಇಲ್ಲ. ಇದನ್ನು ಬುದ್ಧಿಪೂರ್ವಕ ಮಾಡದೇ ಇದ್ದರೂ ಅಭ್ಯಾಸ ಬಲದಿಂದ ಮಾಡುತ್ತಿದ್ದಾರೆ. ಎಷ್ಟು ಮಂತ್ರಿಮಂಡಳ ಕಳೆದರೂ ಏನೂ ಆಗುವುದಿಲ್ಲ. ನಾನು ಪಂಚಾಯಿತಿ ಛೇರಮನ್ ಇದ್ದೆ. ನನಗೆ ಅನುಭವ ಇದೆ. ಬುದ್ಧಿಪೂರ್ವಕವಾಗಿ ಅಲ್ಲದಿದ್ದರೂ ನಮ್ಮ ಅಧ್ಯಕ್ಷರು ನಮಗೆ ರಕ್ಷಣೆ ಕೊಡುವುದರ ಬದಲು ಆಕ್ರಮಣ ಮಾಡುತ್ತಾರೆ. ಅಹವಾಲನ್ನು ಪೂರ್ತಿ ಕೇಳದೆ, ನಾನು ರೈತನಾಗಿರುವುದರಿಂದ, ತೀರ್ಪಿತ್ತ ಸಂದರ್ಭವಿದೆ.

Mr. SPEAKER.—My mind gets confused. The Hon'ble Member said that he became Chairman of the Panchayat twice. Did he become Chairman twice ?

ಶ್ರೀ ವಿ. ಎಂ. ದೇವ್.—ಇಲ್ಲ ಸ್ವಾಮಿ, ಇದನ್ನು ಏತಕ್ಕೆ ಹೇಳುತ್ತೇನಪ್ಪಾ ಎಂದರೆ ಎಷ್ಟೋ ಸಾರಿ ಒಂದು ಕ್ರಿಯಾಲೋಪ ಎತ್ತಿದಾಗ ಅದನ್ನು ಪೂರ್ತಿ ಕೇಳದೆ ಜಡ್ಜ್‌ಮೆಂಟ್ ಕೊಡುವ ಸಂದರ್ಭ ಇತ್ತು ; ಆ ದೃಷ್ಟಿಯಿಂದ ಹೇಳಿದೆ. ಇನ್ನೊಂದು ಏನಪ್ಪಾ ಅಂದರೆ ಸ್ಪೀಕರ್‌ಷಿಪ್, ಮಂತ್ರಿ ಮಂಡಳ ಅಂದರೆ ಏನು ?

What is Speakership ? What is Ministership ? It is a developing process. By inference there is a reference. Page 19 —Para 37 of the Third Five Year Plan Book of the Government of India :

> "Planning is a continuous process and cannot be isolated for short periods. Thus, the Third Five Year Plan is a projection and a continuation of the First and the Second Plans, and it will lead to the Fourth and subsequent Plans. Planning is a continuous movement towards desired goals and, because of this, all major decisions have to be made by agencies informed of these goals and the social purpose behind them. Even in considering a five-year period, forward and long-term planning has always to be kept in view."

ಒಟ್ಟಿನಲ್ಲಿ ಇದರ ಅಭಿಪ್ರಾಯ ಏನೆಂದರೆ ಶ್ರಮಿಸುವ ಮನುಷ್ಯನ ನಡವಳಿಕೆಯಲ್ಲಿ ಬದಲಾವಣೆ ಮಾಡುವ ಸಾಧನವಾಗಿದೆ. ಈ ದೃಷ್ಟಿಯಿಂದ ಮೂರನೇ ಪಂಚವಾರ್ಷಿಕ ಯೋಜನೆ ಕಾರ್ಯರಂಗದಲ್ಲಿ ಬರಬೇಕು. ನಮ್ಮ ಮಾನ್ಯ ಅಧ್ಯಕ್ಷರಿಗೆ ವಂದನೆ ಮಾಡಬೇಕಾಗುತ್ತದೆ. ಯು. ಪಿ. ಅಸೆಂಬ್ಲಿಯಲ್ಲಿ ಸದಸ್ಯರು ತುಂಬಾ ದೊಂಬರದಾಳು ಮಾಡಿ ಸ್ಪೀಕರ್‌ಅನ್ನೇ ಹೊರದೂಡಿದರು. ಇಲ್ಲಿ ಹಾಗಾಗಿಲ್ಲ. ಸರಿಯಾದ ರೀತಿಯಲ್ಲಿ develop ಆಗುತ್ತಿದೆ. ಈ ದೃಷ್ಟಿಯಿಂದ ನಮ್ಮ ಸ್ಪೀಕರ್ ಅವರ ವಿಷಯದಲ್ಲಿ ನಾವು ಹೆಮ್ಮೆಪಡಲು ಕಾರಣವಿದೆ.

Mr. SPEAKER.—Is it part of the famine ?

ಶ್ರೀ ವಿ. ಎಂ. ದೇವ್.—ಒಟ್ಟಿನಲ್ಲಿ ಒಂದು ತರಹ ಡೆವಲಪಿಂಗ್ ಪ್ರೋಸೆಸ್ ಬಂದಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಕ್ಷಾಮ ಪರಿಹಾರ ನೀತಿ ಏನು ಮಾಡಬೇಕು ಎಂಬುದಕ್ಕೆ ಸ್ಟಾಚ್ಯೂಟ್ ಬುಕ್ಕಿನಲ್ಲಿರಬೇಕು. ಒಂದು ಫಂಡ್ ಮಾಡಬೇಕು. ಹಳೇ ಮೈಸೂರಿನಲ್ಲಿ ಕೊಡಗಿನಲ್ಲಿ ಇರಲಿಲ್ಲ ಎಂದು ಕಾಣುತ್ತದೆ. ಈ ಫಂಡ್ ಬೆಳೆಸುವುದರ ಬಗ್ಗೆ ಈ ರೀತಿ ಹೇಳಲಾಗಿದೆ—

Clause 5 —

"The State Government shall, from time to time invest or re-invest in securities of Government all sums to be credited to the fund which may not be immediately required for any of the purposes mentioned in section 4."

ಅಂದರೆ ಇದರಲ್ಲಿ ದುಡ್ಡು ಉಳಿಯುತ್ತದೆ. ರೀ-ಇನ್‌ವೆಸ್ಟ್ ಮಾಡುವಾಗ್ಗೆ ಯಾವ ಫಂಡಿನಲ್ಲಿ ಹಾಕಬೇಕು ? ರೈತನ ದೃಷ್ಟಿಯಲ್ಲಿ ಹೇಳುವುದಾದರೆ ರೈತನ ಹತ್ತಿರ ದುಡ್ಡು ಇದ್ದರೆ ಎರಡರಲ್ಲಿ ಒಂದು ಕೆಲಸ ಮಾಡುತ್ತಾನೆ. ಆದಾಯ ಕೊಡುವ ಒಳ್ಳೇ ಜಮೀನು ಕೊಂಡುಕೊಳ್ಳುತ್ತಾನೆ, ಇಲ್ಲವೆ ಇರುವ ಜಮೀನಿನಲ್ಲಿ ಬಾವಿ ತೆಗೆಯಿಸುತ್ತಾನೆ. ಮತ್ತು ತಾನು ಹಾಕಿದ ಹಣವನ್ನು ನಾಲ್ಕೈದು ವರ್ಷಗಳಲ್ಲಿ ಹಿಂತೆಗೆದುಕೊಳ್ಳುತ್ತಾನೆ. ಈ ದೃಷ್ಟಿಯಿಂದ clause 5—ಸಮಂಜಸವಲ್ಲ.

ಮೂರು ವರ್ಷ ಎಂದರೆ ಇನ್‌ವೆಸ್ಟ್‌ಮೆಂಟ್ ಮತ್ತು ರೀ-ಇನ್‌ವೆಸ್ಟ್‌ಮೆಂಟ್ ಯಾವ ರೀತಿ ಮಾಡಬೇಕೆನ್ನುವುದನ್ನು ವಿಚಾರ ಮಾಡಬೇಕು. ಅಧ್ಯಕ್ಷರು ಒಂದು ಪುಸ್ತಕ ಕೊಟ್ಟಿದ್ದರು. ಅದರಲ್ಲಿ ಬ್ರಿಟಿಷರ ಕಾಲದಿಂದಲೂ ಇದು ಬರುತ್ತಾ ಇದೆ ಎಂದು ಹೇಳಿದ್ದಾರೆ. ಬಹಳ ಸಣ್ಣ ಹಿಡುವಳಿಗಳಾದರೂ ಅದರಿಂದ ಪ್ರಯೋಜನವಿಲ್ಲ. ಶಾಶ್ವತ ಕ್ಷಾಮ ಪರಿಹಾರ ಸಾಧ್ಯ, ಅಧಿಕ ಪ್ರಮಾಣದ ಹೆಚ್ಚುವರಿ ಬೆಳೆ ಬೆಳೆಯುವುದು ಈ ತಾಂತ್ರಿಕ ಕಾಲದಲ್ಲಿ ಸಾಧ್ಯ ಮತ್ತು ಈ ಒಳಗಾಗಿ ಆಗಬೇಕಿತ್ತು. ಈಗಿನ ಕಾಲದ ಪರಿಸ್ಥಿತಿ ಏನೆಂಬುದನ್ನು ಯೋಚನೆ ಮಾಡಿ ಮಾತನಾಡೋಣ. ಉತ್ತರ ಇಂಡಿಯಾದಲ್ಲಿ ಟೀ ತೋಟಗಳು ಇವೆ ; ಸಾಗರದ ಆಚೆಯ ಜನರು ಎಂದರೆ ಇಂಗ್ಲೀಷ್‌ನವರು ಆ ತೋಟಗಳನ್ನು ಮಾಡುತ್ತಾ ಇದ್ದಾರೆ, ಅವರಿಗೆ ಆದಾಯ ತೆರಿಗೆ ಹಾಕಿದ್ದೇವೆ. ನಿಮ್ಮ ಅಕೌಂಟ್ ಬುಕ್‌ಗಳನ್ನು ಕೊಡಿ ಎಂದರೆ ಅವರು ಕೊಡುವುದಿಲ್ಲ. ಅದೇ ನಿಮ್ಮ ಜನರಾದರೆ ಅವರ ಕುತ್ತಿಗೆ ಮೇಲೆ ಕಾಲು ಹಾಕುತ್ತೀರಿ, ಅವರು ಕೊಡದಿದ್ದರೆ. ಅದೇ ಸ್ಥಿತಿ ಕಾಫಿ ತೋಟದವರಿಗೂ ಬಂದಿದೆ. ಆದ್ದರಿಂದ ವ್ಯವಸಾಯ ಮಾಡುವ ಮನುಷ್ಯನಿಗೆ ನವೀನ ಉಪಕರಣಗಳು ಮತ್ತು ಅವನ್ನು ಸರಿಯಾಗಿ ಪ್ರಯೋಗ ಮಾಡುವಂತಹ ಬುದ್ಧಿ ಇಲ್ಲದೇ ಇದ್ದಮೇಲೆ ಎಷ್ಟು ದುಡ್ಡು ಕೊಟ್ಟರೂ ಪ್ರಯೋಜನವಿಲ್ಲ. ಇದೇ ಮುಖ್ಯವಾದ ಪ್ರಶ್ನೆ ಇಲ್ಲಿ ಇರುವುದು. ಇಂಥಾ ದಿವಾಳಿ ಜಮೀನನ್ನು ಸಾರ್ವಜನಿಕ ಕ್ಷೇತ್ರದಲ್ಲಿ N. E. S.ನ Agriculture Extention ಅಧಿಕಾರಿಗಳು ಊರ್ಜಿತಪಡಿಸಬೇಕು. ಕಾಲಸ್ಥಿತಿ ಹೇಗೆ ಹೋಗುತ್ತಾ ಇದೆ ನೋಡಿ. ಪಂಚವಾರ್ಷಿಕ ಯೋಜನೆ ಎಂದು ಹೇಳಿ 1956ರಲ್ಲಿ ಬಹಳ ದೊಡ್ಡ ಪುಸ್ತಕ ಬರೆದಿದ್ದಾರೆ, ಸೋಷಿಯಲಿಸ್ಟಿಕ್ ಪ್ಯಾಟ್ರನ್ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿ ಒಪ್ಪಿಕೊಂಡಿದ್ದೀರಿ, ಅದೇ ರೀತಿ ದೇಶ ಮುಂದುವರಿಯುತ್ತಾ ಇದೆ. ಆದರೆ ಎಡವಿರುವುದು ಎಲ್ಲಿ? ಈಗ ನಮ್ಮ ಗುರಿ ಏನು ? ಇದರಲ್ಲಿ ಅಡಗಿರುವುದೇನೆಂಬ ತಿರುಳು, ಪೂರ್ಣ ಮಾಹಿತಿ ನಮ್ಮಲ್ಲಿ ಇಲ್ಲ ಮತ್ತು ಸರಿಯಾದ ಅನುಷ್ಠಾನ ಕಾರ್ಯರಂಗದಲ್ಲಿ ಇಲ್ಲ. ಇವೆರಡೂ ಇಲ್ಲ. ಚರಮಗುರಿ ಯಾವುದು ? ಆ ಚರಮ ಗುರಿಯಿಂದ ವಿಚಲಿತರಾಗದೆ ಏನು ಕಾರ್ಯ ಮಾಡಬೇಕು. ಎಲ್ಲರ ಹಿತಾಸಕ್ತಿ ಇದೆ ಎಂದರೆ ಕಾರ್ಮಿಕ, ಶ್ರೀಮಂತವರ್ಗ, ಬ್ರಾಹ್ಮಣರು, ಒಕ್ಕಲಿಗರು, ಅಂತ್ಯಜರು ಇವರೆಲ್ಲರ ಹಿತಾಸಕ್ತಿಗಳ ಸಂಗಮಸ್ಥಾನದಲ್ಲಿ ಉಳಿಯುವುದು ಮಾನವಕುಲ ಮಾತ್ರ. ಹಾಗಾಗಲು ಅದಕ್ಕನುಗುಣವಾದ ಕಾರ್ಯವನ್ನು ಕಾರ್ಯರಂಗಕ್ಕಿಳವಡಿಸಿದಾಗ ಮಾತ್ರ ಸಾಧ್ಯ. ಅದನ್ನು ಸುಗಮ ಮಾಡಬೇಕಾದರೆ ಇರತಕ್ಕ ಒಂದೇ ಮಾರ್ಗ ಎಂದರೆ ಸೋಷಿಯಲಿಸ್ಟಿಕ್ ಪ್ಯಾಟ್ರನ್ ಎಂದು ನೀವು ಸಹ ಹೇಳುತ್ತೀರಿ. ಕಾಫಿ ಪ್ಲ್ಯಾಂಟೇಷನ್ ಮಾಡಿ ಎಂದು ಹೇಳಿ ಜಮೀನು ಹಣ ಕೊಟ್ಟರೆ ಯಾರೇ ಆಗಲಿ ಈಗಿನ ಕಾಲದಲ್ಲಿ ತನ್ನ ಮಗನನ್ನು ವಿದೇಶಕ್ಕೆ ಕಳುಹಿಸುತ್ತಾನೆಯೇ ಹೊರತು ವ್ಯವಸಾಯ ಮಾಡುವುದಕ್ಕೆ ಹಚ್ಚುವುದಿಲ್ಲ. ಇದು ನಿತ್ಯ ಜೀವನದಲ್ಲಿ ಇದುವರೆಗೂ ನಮಗೆ ಬಂದಿರುವ ಅನುಭವ, ಆ ದೃಷ್ಟಿಯಿಂದ ಏನು ಮಾಡಬೇಕು ?

'In promoting socialism and national development plan, complete emphasis has to be laid on the community development and not on the individual.'

ಎಂದು ಪಂಚವಾರ್ಷಿಕ ಯೋಜನೆಯಲ್ಲಿ ಹೇಳಿದ್ದಾರೆ. ಅಂತೂ ನನ್ನ ಮಾತಿನಲ್ಲ ಇದು ಸಾರಾಂಶ. ಎಷ್ಟು ಹೆಜ್ಜೆ ಮುಂದೆ ಹೋಗಬಹುದು ಎಂದರೆ ಬಿಲ್ಲು ಇದೆ ಕ್ಲಾಸ್ ಮೇಲೆ ಮಾತನಾಡಿ ಎಂದು ಹೇಳುತ್ತೀರಿ, ಇದು ನಿಮ್ಮ ಘನತೆಗೆ ತಕ್ಕುದಲ್ಲ ಎಂದು ತಮ್ಮಲ್ಲಿ ವಿನಯದಿಂದ ಹೇಳುತ್ತೇನೆ. ದೇವಸ್ಥಾನಗಳು ನಿಮ್ಮ ಆಡಳಿತಕ್ಕೆ ಬರುತ್ತವೆ, ಲ್ಯಾಂಡ್ ರಿಫಾರಂಸ್ ಮಾಡುತ್ತಾ ಇದ್ದೀರಿ. ಇದನ್ನೆಲ್ಲಾ ಯಾರ ಕೈಗೆ ಕೊಡಬೇಕು ? ಪಂಚಾಯಿತಿಗಳ ಕೈಗೆ ಕೊಟ್ಟು ಆ ಕೆಲಸ ಕಾರ್ಯಗಳನ್ನೆಲ್ಲಾ ಮಾಡಿಸಬೇಕಾಗುತ್ತದೆ. ಈಗ ಒಂದು ತಾಲ್ಲೂಕನ್ನು ನೋಡಿ ; ತಾಲ್ಲೂಕು ಆಫೀಸು

(ಶ್ರೀ ಎಂ. ವಿ. ದೇವ್)

ಪೋಲೀಸ್ ಸ್ಟೇಷನ್ ಇರುತ್ತದೆ. ಪ್ರತಿಯೊಂದು ಪಂಚಾಯ್ತಿಯೂ ಈ ಅಧಿಕಾರಗಳನ್ನು ಚಲಾಯಿಸುವವರೆಗೂ ಅದು ನಿಜವಾದ ಪಂಚಾಯಿತಿ ಆಗುವುದಿಲ್ಲ. ಪಂಚಾಯ್ತಿಗೆ ಕೊಟ್ಟು ಅವರೆಲ್ಲರೂ ಅವಿದ್ಯಾವಂತರು ಎಂದು ಬಯ್ದರೆ ಅದು ಒಪ್ಪುವ ಮಾತಲ್ಲ. ವಂಚಕರ ಮಾತಾಗುತ್ತದೆ. ಏಕೆಂದರೆ, ಪಂಚಾಯ್ತಿಯಲ್ಲಿ ಶಿಕ್ಷಣ ಪಡೆದ ವಿದ್ಯಾವಂತ ಸೆಕ್ರೆಟರಿ ಇರುತ್ತಾರೆ. ಖಡಾಖಂಡಿತವಾಗಿ ಪ್ರಾಮಾಣಿಕವಾಗಿ ನಾನು ಚೆನ್ನಾಗಿ ಯೋಚನೆ ಮಾಡಿ ಹೇಳುತ್ತಾ ಇರತಕ್ಕ ಮಾತು ಇದು. ನಿಜ ಯಾವಾಗಲೂ ಕೂಡ ಸರಿಯಾದ ಹೆಜ್ಜೆಯನ್ನೆ ನೀವು ಇಡುತ್ತಿಲ್ಲ ಎಂದು ನಾನು ಹೇಳುವುದಿಲ್ಲ. ಒಂದು ಉದಾಹರಣೆಯನ್ನು ಹೇಳುವುದಾದರೆ ಈ ಮನೆಯ ಯಜಮಾನರು ದೇಹಲಿಯಿಂದ ಹಿಂದಕ್ಕೆ ಬಂದಾಗ......

Mr. SPEAKER.—The Hon'ble Member must conclude within five minutes. He is developing new points. I have not given 20 minutes to any other member.

ಶ್ರೀ ವಿ. ಎಂ. ದೇವ್.—ನನ್ನದು ಗುಬ್ಬಿ ತಾಲ್ಲೂಕು. ಅಲ್ಲಿನ ವಿಷಯ ಯಾವುದಾಗಬೇಕೆಂದು ಹೇಳುವುದಾದರೆ ಹೇಮಾವತಿ ಅಣೆಕಟ್ಟು ಎತ್ತರ ಮಾಡಿಲ್ಲ. ದೃಷ್ಟಿಕೋಣ ಆ ಕಡೆ ಬದಲಾಯಿಸಿ ಎತ್ತರ ಮಾಡಿದ್ದೇ ಆದರೆ ಅದರಿಂದ ನನ್ನ ತಾಲ್ಲೂಕಿನ ರೈತರಿಗೆ ಒಳ್ಳೆಯದಾಗುವ ಸಂಭವವಿರುತ್ತದೆ. ಬೇಕಾದರೆ ಪ್ಲಾನ್ ಕೊಡುತ್ತೇನೆ ಸರಿಯಾಗಿದ್ದರೆ ಮಾಡಿ ಇಲ್ಲದೇ ಇದ್ದರೆ ಬಿಡಿ ಅದು ಬೇರೆ. ಇನ್ನೊಂದು ವಿಷಯ: ಯಾವುದಾದರೂ ಒಂದು ಕಾರ್ಯವನ್ನು ಸಾಧನೆ ಮಾಡಬೇಕಾದರೆ ಎರಡು ಬಹಳ ಮುಖ್ಯವಾದದ್ದು ಒಂದು ಆಡಳಿತರಂಗ, ಇನ್ನೊಂದು ಕಾರ್ಯರಂಗ, ಈ ಎರಡೂ ಸರಿಯಾಗಿರಬೇಕು. ಪಂಚಾಯ್ತಿ ಮಾಡಿದ್ದೀರಿ, ತಾಲ್ಲೂಕು ಬೋರ್ಡ್ ಎಂದು ಮಾಡಿದ್ದೀರಿ ತಾಲ್ಲೂಕು ಆಫೀಸು ಇದೆ. ಈ ಜೋಡು ಆಡಳಿತ ಏಕೆ? ಇದು ಸರಿಹೋಗುವುದಿಲ್ಲ. ಅಲ್ಲಿ ಏಜೆನ್ಸಿ ಇದೆ ತಾಲ್ಲೂಕು ಬೋರ್ಡಿಗೆ ಅಧಿಕಾರ ಕೊಡಿ ಎನ್ನುವುದು ಒಂದು ಅಂಶ. ವ್ಯವಸಾಯದಲ್ಲಿ ಬರುವ ಆದಾಯ ಅದು ಅಪ್ರತ್ಯಕ್ಷ ಆದ್ದರಿಂದ ಕೈಗಾರಿಕೆಯನ್ನು ಬೆಳೆಸಿಕೊಳ್ಳಿ. ಬದಲಾಗಿ ಒಂದು ಲಕ್ಷ ರೂಪಾಯಿ ಸ್ಕೈಕಲ್ ಫ್ಯಾಕ್ಟರಿಯಲ್ಲಿ ಡಿಸ್‌ಮ್ಯಾಂಟಲ್ ಮಾಡುತ್ತಿರುವಾಗ ಆಗುವ ಹಾಗೆ ಕಾಣುತ್ತದೆ. ನಾನು ಕಾಂಗ್ರೆಸ್ ಸೇರಿರುವುದೇ ಪಬ್ಲಿಕ್ ಸೆಕ್ಟರ್ ಹಾಳುಮಾಡುವುದಕ್ಕೆ ಎಂದು 19 2ರಲ್ಲಿ 19ನೇ ಮಾರ್ಚ್‌ನಲ್ಲಿ ಶ್ರೀಮಾನ್ ಮಲ್ಲಪ್ಪನವರು ಹೇಳಿದ್ದಾರೆ. ಆ ದೃಷ್ಟಿಯಿಂದ ಸ್ವಲ್ಪ ಯೋಚನೆ ಮಾಡಬೇಕು. ಇನ್ನು ಕೊನೇ ಅಂಶ ಎಂದರೆ ಕಾಮರಾಜ್ ಪ್ಲಾನ್ ಎನ್ನುವುದನ್ನು ಎಲ್ಲರೂ ಕೇಳಿದ್ದೀರಿ. Let us give a free hand to the leader ಎನ್ನುವ ದೃಷ್ಟಿಯಿಂದ ಪಾಶ್ಚಾತ್ಯ ದೇಶದಲ್ಲಿ ಪ್ರತಿಯೊಬ್ಬರೂ ರಾಜೀನಾಮೆ ಕೊಡುತ್ತಾರೆ. ಸರಿಯಾಗಿ ಯೋಚನೆ ಮಾಡಿದರೆ ಕಾಮರಾಜ್ ಪ್ಲ್ಯಾನ್ ಏನು ಅಂದರೆ ಜೊತೆಗೆ ನೀವು ಜನತೆಯ ಜೊತೆಗೆ ಹೋಗಿ ನಿಮ್ಮ ನ್ಯೂನತೆಗಳನ್ನು ಕಾರ್ಯರಂಗದಲ್ಲಿ ತಿಳಿದು ಪ್ರತಿಭಾವಂತರಾದಾಗ ಹಿಂದಕ್ಕೆ ಬರಬಹುದಾದ ಒಂದು ದಾರಿ......

Mr. SPEAKER.—I do not want the member to mention the Kamraj Plan on the floor of the House.

Sri V. M. DEO.—The Chair has already carricatured me, for want of time.

Mr. SPEAKER.—I must have unconsciously carricatured the Hon'ble Member but let him conclude early.

ಶ್ರೀ ವಿ. ಎಂ. ದೇವ್.—ನೀವುಗಳೆಲ್ಲರೂ ಆ ತಾಲ್ಲೂಕ್ ಬೋರ್ಡ್ ಮತ್ತು ಜಿಲ್ಲಾ ಪರಿಷತ್ತಿಗಳಿಗೆ ಮೆಂಬರುಗಳಾಗಿದ್ದೀರಿ. 'The wearer knows where the shoe pinches' ಎಂದು ಹೇಳುವಂತೆ ನಿಮಗೆಲ್ಲಾ ಗೊತ್ತಿದೆ. ಆದುದರಿಂದ ನೀವುಗಳೆಲ್ಲರೂ ಈಗ ಆ ಕಾಮರಾಜ ಸೂತ್ರಕ್ಕನುಸಾರವಾಗಿ ಹೊರಗೆ ಬಂದು ನೀವೇ ಅಗ್ನಿಪರೀಕ್ಷೆಯಾಗಿ ನೀವು ಚೊಕ್ಕವಾದ ಚಿನ್ನದಂತಾಗಿ–ಅದಕ್ಕೆ ಈ ಪ್ಲಾನು ಬಹಳ ಚೆನ್ನಾಗಿದೆ. ಜೊತೆಗೆ ತುರ್ತು ಪರಿಸ್ಥಿತಿ ಬೇರೆ ಬಂದಿದೆ. ಚೈನಾ–ಪಾಕೀಸ್ತಾನಗಳು ಕಾಲು ಕೆರೆಯುತ್ತಿವೆ. ಅವರನ್ನು ಗೆಲ್ಲುವಂಥ ಧೀಮಂತರು ಮಂತ್ರಿಮಂಡಲದಲ್ಲಿರಬೇಕು ಅಂಥ ಎದೆಗಾರಿಕೆ ನಿಮ್ಮಲ್ಲಿ ಯಾರಿಗೆ ಇದೆ ಎಂಬುದನ್ನು ನಿರ್ಧರಿಸಲು ಈ ಕಾಮರಾಜ ಪ್ಲಾನು ಚೆನ್ನಾಗಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಚ್. ಬಸಣ್ಣ (ಮೊಳಕಾಲ್ಮುರು).—ಮಾನ್ಯ ಸಭಾಪತಿಗಳೇ, ನಮ್ಮ ಶ್ರೀ ಎಚ್. ಹುಚ್ಚಮಾಸ್ತಿಗೌಡರು ತಂದಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತ, ನನ್ನ ಕ್ಷೇತ್ರದ ಪರವಾಗಿ ಎರಡು ಮಾತುಗಳನ್ನಾಡಬಯಸುತ್ತೇನೆ.

ಮೊಳಕಾಲ್ಮುರು ತಾಲ್ಲೂಕು ಬಹಳ ಹಿಂದಿನ ಕಾಲದಿಂದಲೂ ಬಹಳ ಹಿಂದುಳಿದ ಪ್ರದೇಶವಾಗಿದೆ. ಮೊಳಕಾಲ್ಮುರು ಮತ್ತು ಚಳ್ಳಕೆರೆ ತಾಲ್ಲೂಕುಗಳೆರಡೂ ಅಣ್ಣ ತಮ್ಮಂದಿರಂತೆ ಬಹಳ ಹಿಂದುಳಿದ ಪ್ರದೇಶಗಳಾಗಿವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ಕ್ಷೇತ್ರದಲ್ಲಿ ವ್ಯವಸಾಯದ ವಿಚಾರವಾಗಿ ಹೇಳುವುದಾದರೆ ಕಳೆದ ನಾಲ್ಕೈದು ವರ್ಷಗಳಿಂದ 8-10 ಇಂಚು ಮಳೆಗಿಂತ ಜಾಸ್ತಿ ಮಳೆಯಾಗಿಲ್ಲ. ಅಲ್ಲಿಯ ರೈತರ ಗೋಳು ನಾಯಿಗೋಳಿಗಿಂತಲೂ ಹೀನಾಯವಾಗಿದೆಯೆಂಬುದಾಗಿ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ. ಮೊಳಕಾಲ್ಮುರು ತಾಲ್ಲೂಕಿನಲ್ಲಿ ಕೇವಲ 8-10 ಕೆರೆಗಳು ಮಾತ್ರ ಇವೆ. ಅವುಗಳಿಗೆ ಕಳೆದ 4–5 ವರ್ಷಗಳಿಂದ ನೀರುಬಾರದೆ ಅಲ್ಲಿಯ ರೈತರು ಬಹಳ ಹೀನಾವಸ್ಥೆಗೊಳಗಾಗಿದ್ದಾರೆ. ನಮ್ಮ ಪ್ರಾಂತ್ಯ ಈ ಫಸಲುಗಳಿಗೆ ರೋಗಾದಿಗಳು ಬೇರೆ ಬಂದು ರೈತನನ್ನು ಬಹಳ ತೊಂದರೆಗೀಡು ಮಾಡಿವೆ. ನಮ್ಮಲ್ಲಿ ನೀರುಳ್ಳಿಗೆ ಕ್ರಿಪ್ಸ್ ಎಂಬ ಒಂದು ರೋಗ ಬಂದು ರೈತನ ರಕ್ತವನ್ನೆಲ್ಲಾ ಹೀರಿಬಿಟ್ಟಿದೆ. ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ ಎಷ್ಟೋ ಸಾರಿ ಅರಿಕೆ ಮಾಡಿಕೊಂಡೆವು. ಆದರೂ ಸರ್ಕಾರದವರು ಇದರ ಕಡೆಗೆ ಗಮನವನ್ನೇ ಕೊಟ್ಟಿಲ್ಲ. ಹೀಗೆ ಸರ್ಕಾರದವರು ಈ ವಿಚಾರದಲ್ಲಿ ತಾತ್ಸಾರ ಮಾಡಿದ್ದಾರೆಂದು ಹೇಳಬೇಕಾಗಿದೆ. ಈಗಲಾದರೂ ಅಲ್ಲಿ ಒಂದು ಸಂಶೋಧನಾಲಯವನ್ನು ತೆರೆದು ಆ ರೋಗಾದಿಗಳು ಬಾರದ ಹಾಗೆ ಮಾಡಲು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ನಾನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬರುಬರುತ್ತ ಇತ್ತೀಚೆಗೆ ಈ ರೋಗಾದಿಗಳು ಪ್ರತಿಯೊಂದು ಬೆಳೆಗೂ ಆವರಿಸಿಕೊಳ್ಳುತ್ತಾ ಬರುತ್ತಿವೆ. ಆದುದರಿಂದ ನಮಗೆ ಈಗ ಈ ಅಭಾವ ಪರಿಸ್ಥಿತಿಗಿಂತ ಈ ರೋಗಾದಿಗಳನ್ನು ಕಳೆಯಬೇಕಾದ್ದೇ ಅತಿ ಮುಖ್ಯವಾದ ಸಮಸ್ಯೆಯಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಆದುದರಿಂದ ಮೊದಲು ಈ ರೋಗಾದಿಗಳು ಬಾರದಂತೆ ತಡೆಗಟ್ಟಬೇಕೆಂದು–ರೈತರಿಗೆ ಅನುಕೂಲ ಕಲ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 1960-61 ಮತ್ತು 6 ನೇ ಸಾಲುಗಳಲ್ಲಿ ಲಿಬರಲ್ ಸ್ಕೀಂಗಳ ಪ್ರಕಾರ 150 ಬಾವಿಗಳಿಗೆ ಮಾತ್ರ ಹಣವನ್ನು ಮಂಜೂರು ಮಾಡಿದರು. ಆ ಪೈಕಿ ಕೆಲವಕ್ಕೆ ಬಾವಿ ಒಂದಕ್ಕೆ 1,200 ರೂ. ಗಳಂತೆಯೂ ಕೆಲವಕ್ಕೆ 1,500 ರೂ. ಗಳಂತೆಯೂ, ಇನ್ನು ಕೆಲವಕ್ಕೆ ಮಾತ್ರ 3,000 ರೂಪಾಯಿಗಳಂತೆಯೂ ಹಣವನ್ನು ಮಂಜೂರು ಮಾಡಿದರು. ಆದರೆ 1,200–1,500 ರೂ. ಗಳಂತೆ ಮಂಜೂರಾದ ಬಾವಿಗಳಲ್ಲಿ ಕೆಲಸ ಅರ್ಧಮರ್ಧ ಆಗಿ ಅವುಗಳು ಇನ್ನೂ ಹಾಗೆ ಉಳಿದಿರುತ್ತವೆ. ಈ ಬಾವಿಗಳಿಂದ ರೈತರು ಯಾವ ಫಸಲನ್ನೂ ತೆಗೆದುಕೊಳ್ಳುವಹಾಗಿಲ್ಲ. ಇತ್ತ ಸರ್ಕಾರಕ್ಕೂ ಅವರು ಕಂತನ್ನು ಕೊಡುವಹಾಗಿಲ್ಲ. ಹೀಗೆ ರೈತ ಅಲ್ಲಿ ಬಹಳ ಸಂಕಟಕ್ಕೊಳಗಾಗಿದ್ದಾನೆ. ಹೀಗೆ ಯಾವ ಯಾವ ಬಾವಿಗಳ ಕೆಲಸ ಅರ್ಧಮರ್ಧವಾಗಿದೆಯೋ ಅಂಥ ಬಾವಿಗಳಿಗೆ ಆ ಕೆಲಸ ಮುಗಿಯಲು ಎಷ್ಟು ಹಣ ಬೇಕೋ ಅಷ್ಟನ್ನು ಜಾಗ್ರತೆಯಾಗಿ ಒದಗಿಸಿ ಆ ಇನ್‌ಕಂಪ್ಲೀಟಾಗಿರುವ ಬಾವಿಗಳ ಕೆಲಸವನ್ನು ಬೇಗ ಕಂಪ್ಲೀಟ್ ಮಾಡಿಸಿಕೊಡಬೇಕೆಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಯಾವ ಒಂದು ಕೈಗಾರಿಕೆಯೂ ಇರುವುದಿಲ್ಲ. ಮೊಳಕಾಲ್ಮುರು ಟೌನಿನಲ್ಲಿ ನೇಯಿಗೆಯವರ ಜನಸಂಖ್ಯೆ ಜಾಸ್ತಿಯಾಗಿದೆ. ಅವರಿಗೆ ಈಗ ಸಾಕಷ್ಟು ಕೆಲಸವಿಲ್ಲದೆ ಅವರು ಬಹಳ ತೊಂದರೆಗೊಳಗಾಗಿದ್ದಾರೆ. ಆದುದರಿಂದ ಅಲ್ಲಿ ಒಂದು ಪವರ್‌ಲೂಂ ಸ್ಪಿನ್ನಿಂಗ್ ಮಿಲ್ಲನ್ನು ಹಾಕಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಅಡಮಾನದ ಬ್ಯಾಂಕ್ 1948ರಲ್ಲೇ ಪ್ರಾರಂಭವಾಯಿತು. ಅದರ ಮೂಲಕ ಇಲ್ಲಿಯವರೆಗೆ ರೈತ ಭಾಂಧವರಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು. ಆದ್ದರಿಂದ ಅಲ್ಲಿಯ ರೈತ ಬಾಂಧವರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈಗ ಈ ಅಡಮಾನದ ಬ್ಯಾಂಕಿನ ಹಣವನ್ನು 15 ಕಂತುಗಳಲ್ಲಿ ತೀರಿಸಬೇಕೆಂಬ ನೇಮವಿದೆ. ಈ ಅವಧಿಯನ್ನು ಇನ್ನೂ 5–10 ವರ್ಷಗಳ ಕಾಲ ಜಾಸ್ತಿ ಮಾಡಿಕೊಟ್ಟು ರೈತಬಾಂಧವರಿಗೆ ಅನುಕೂಲ ಮಾಡಿಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿಗೆ ಇಲ್ಲಿಯವರೆಗೂ ಸೊಸೈಟಿಗಳಿಗಾಗಲೀ ವರ್ತಕರುಗಳಿಗಾಗಲೀ ಕಬ್ಬಿಣ-ಸಿಮೆಂಟ್ ಜಿಂಕ್‌ಷೀಟ್ ಇವುಗಳ ಮಾರಾಟದ ಲೈಸೆನ್ಸನ್ನು ಕೊಟ್ಟಿರುವುದಿಲ್ಲ. ಹೀಗಾದರೆ ಅಲ್ಲಿಯ ಜನ ಇವುಗಳನ್ನು ಹೇಗೆ, ಎಲ್ಲಿಂದ ತಂದು ತಮ್ಮ ಕೆಲಸಗಳನ್ನು ಪೂರೈಸಿಕೊಳ್ಳಬೇಕು ಎಂಬ ವಿಚಾರವನ್ನು ಸರ್ಕಾರದವರು ಸ್ವಲ್ಪ ಆಲೋಚಿಸಬೇಕಾಗಿದೆ. ನಾವು ಸೊಸೈಟಿಗಳಿಗಾದರೂ ಈ ಸಾಮಾನುಗಳನ್ನು ಸರಬರಾಯಿ ಮಾಡಿ ಎಂದು ಸರ್ಕಾರದವರಲ್ಲಿ ಕೇಳಿಕೊಂಡೆವು. ಆದರೆ ಇದುವರೆಗೂ ಸರ್ಕಾರದವರು ಯಾವುದನ್ನೂ ಕೊಟ್ಟಿಲ್ಲ. ಈಗಲಾದರೂ ಜರೂರಾಗಿ ಕಬ್ಬಿಣ, ಸಿಮೆಂಟು ಮತ್ತು ಜಿಂಕ್‌ಷೀಟ್ ನಮ್ಮ ತಾಲ್ಲೂಕಿಗೆ ಒದಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

(ಶ್ರೀ ಎಸ್. ಎಚ್. ಬಸಣ್ಣ)

ಇನ್ನು ಕಳೆದ 5-6 ತಿಂಗಳಲ್ಲಿ ನಮ್ಮಲ್ಲಿ 50 ಪಂಪ್‌ಸೆಟ್ಟುಗಳನ್ನು ಸರ್ಕಾರದವರು ಹಂಚಿದ್ದಾರೆ. ಆದರೆ ಅವು ಆ ಹಂಚಿದ ಕಾಲದಿಂದಲೂ ರೈತರ ಮನೆಯಲ್ಲೇ ಕುಳಿತಿವೆ. ಸರ್ಕಾರದವರು ಅವುಗಳನ್ನು ಇನ್‌ಸ್ಟಾಲ್ ಮಾಡಲು ಅಗತ್ಯವಾಗಿ ಬೇಕಾದ ಕೆಲವು ವೈರಿಂಗ್ ಮತ್ತು ಪೋಲು ಇತ್ಯಾದಿ ಸಾಮಾನುಗಳನ್ನು ಕೊಡದೆ ಇರುವುದರಿಂದ—ಆ ಪಂಪ್ ಸೆಟ್ಟುಗಳು ರೈತನ ಮನೆಯಲ್ಲೇ ಕುಳಿತು—ಆ ರೈತಬಾಂಧವರಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಅತಿ ಜರೂರಾಗಿ ಆ ಎಲೆಕ್ಟ್ರಿಕ್ ವೈರು ಮತ್ತು ಪೋಲುಗಳನ್ನು ಒದಗಿಸಿಕೊಟ್ಟು ಆ ಪಂಪ್‌ಸೆಟ್ಟುಗಳಿಗೆ ಸರ್ವೀಸ್ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ

ಇನ್ನೊಂದು ವಿಚಾರ. ಪಂಪುಸೆಟ್ಟುಗಳನ್ನು ಕೊಡುವಾಗ, ವೈರಿಂಗು ಸಾಮಾನು ನಮ್ಮಲ್ಲಿಲ್ಲ ಅದರಿಂದ ಹಾಕಿಸಿಕೊಡಲು ಆಗುವುದಿಲ್ಲ ಎಂದು ಡಿಪಾರ್ಟುಮೆಂಟಿನವರು ಹೇಳುತ್ತಿದ್ದಾರೆ. ಆದರೆ ರೈತ 2,000 ರೂಪಾಯಿಗಳಿಗೆ ತನ್ನ ಒಪ್ಪಿಗೆಯನ್ನು ಕೊಟ್ಟು ತನ್ನಲ್ಲಿ ಹಣವಿಲ್ಲ ಎಂದು ಹೇಳುತ್ತಿರುವಾಗ ಈ ಪಂಪು ಸೆಟ್ಟುಗಳನ್ನು ನೀವೇ ಹಾಕಿಸಿಕೊಳ್ಳಬೇಕು ಎಂದರೆ ಹೇಗೆ? ಅವರಿಗೆ ಹಣವನ್ನು ಕೊಡುವಾಗ ಅದರ ಜೊತೆಗೆ ಮೋಟಾರುಗಳನ್ನೂ ಜರೂರಾಗಿ ಕೊಟ್ಟು ಸರ್ವಿಸ್ಸಿಗೆ ಅನುಕೂಲ ಮಾಡಿ ಕೊಡಬೇಕೆಂದು ಇಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

1-00 P.M.

ನಮ್ಮ ಪ್ರದೇಶದಲ್ಲಿ ಕೆರೆಗಳು ಬಹಳ ಕಡಿಮೆ ಇವೆ ಎಂದು ಈ ಮೊದಲೇ ತಿಳಿಸಿದ್ದೆ. ಅನೇಕ ಕೆರೆಗಳ ಕೆಲಸ ಮಂಜೂರಾಗಿದ್ದರೂ ಇನ್ನೂ ಯಾವ ಕೆಲಸಗಳನ್ನೂ ತೆಗೆದುಕೊಳ್ಳದೇ ಅವೆಲ್ಲ ಹಾಗೇ ಉಳಿದಿವೆ. ಇಲ್ಲಿರುವ ಜನ ಕೂಲಿ ಕೆಲಸವಿಲ್ಲದೇ ಬಹಳ ತೊಂದರೆಗೆ ಈಡಾಗಿದ್ದಾರೆ. ಕೆರೆ ಕೆಲಸಗಳನ್ನಾದರೂ ಇಲ್ಲಿ ತೆಗೆದುಕೊಂಡರೆ ಒಂದು, ಎರಡು, ಮೂರು ದಿನಗಳ ಕಾಲದವರೆಗಾದರೂ ಕೂಲಿ ಪಡೆದು ಜೀವನ ನಡೆಸಲು ಅನುಕೂಲವಾಗುತ್ತದೆ. ಅಭಾವದ ಪರಿಸ್ಥಿತಿಯಲ್ಲಿ ಕೆರೆಗಳ ಕೆಲಸವನ್ನು ತೆಗೆದುಕೊಂಡರೆ ಜನಗಳಿಗೆ ಕೂಲಿ ಸಿಕ್ಕಿದಂತಾಗುತ್ತದೆ, ಹಾಗೆ ಕೂಲಿ ಸಿಕ್ಕುವಂತೆ ಸರಕಾರ ವ್ಯವಸ್ಥೆ ಮಾಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಜಿನುಗೆಹಳ್ಳದ ಬಳಿ ಹರಿಯುತ್ತಿರುವ ನೀರಿಗೆ ತಿಪ್ಪೆಹಳ್ಳದ ಹತ್ತಿರ ಒಂದು ಜಲಾಶಯವನ್ನು ಮಾಡಿದರೆ ನಮ್ಮಭಾಗದ ಮೂರು ತಾಲ್ಲೂಕುಗಳು ಎಂದರೆ, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಕೂಡಲಿಗಿ ಭಾಗಗಳಿಗೆ ನೀರು ಸಿಕ್ಕಲು ಅನುಕೂಲವಾಗುತ್ತದೆ ಮತ್ತು ಇದರಿಂದ ಸುಮಾರು ಎಂಟು, ಹತ್ತು ಸಾವಿರ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಸಿಕ್ಕುತ್ತದೆ. ಹಾಗೇ ಜನುಗೆಹಳ್ಳ ದಿಂದದೇವಸಮುದ್ರದ ಕೆರೆಗೆ ಫೀಡರ್ ಚಾನಲ್ ಮಾಡಿಸಿ ಕೊಟ್ಟರೆ, ಮಧ್ಯದಲ್ಲಿ ಚಿಕ್ಕನಹಳ್ಳಿ ಕೆರೆ ಮೂಲಕ ಇದನ್ನು ಮಾಡಿದರೆ ಸಾವಿರಾರು ಎಕರೆಯಷ್ಟು ಭೂಮಿಗೆ ನೀರು ಸಿಕ್ಕುತ್ತದೆ ಮತ್ತು ಸಣ್ಣ ರೈತರಿಗೂ ತುಂಬಾ ಅನುಕೂಲವಾಗುತ್ತದೆ; ಇಂತಹ ಸಣ್ಣ ನೀರಾವರಿ ಕೆಲಸಗಳನ್ನು ಸರಕಾರ ಜಾಗ್ರತೆ ತೆಗೆದುಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಅಲೂರು ಹನುಮಂತಪ್ಪನವರು ಹೋದ ವರ್ಷ ನಮ್ಮ ತಾಲ್ಲೂಕಿಗೆ ಬಂದಿದಾಗ ಸಿದ್ದಯ್ಯನ ಕಟ್ಟೆಯ ಹತ್ತಿರ ಲಿಫ್ಟ್ ಇರಿಗೇಷನ್ನು ಮಾಡಿಕೊಳ್ಳಲು ಇಲ್ಲಿನ ರೈತರಿಗೆ ಸಹಾಯ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಬಂದರೂ ಇದುವರೆಗೆ ಅಲ್ಲಿಯ ಜನ ಲಿಫ್ಟ್ ಇರಿಗೇಷನ್ನನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ಇಲ್ಲಿನ ರೈತರು ಇದನ್ನು ಮಾಡಿ ಕೊಳ್ಳಲು ಬಹಳ ಆಸೆಯಿಂದ ಇದ್ದಾರೆ, ಅಲ್ಲದೆ ಇದನ್ನು ಇಲ್ಲಿ ತೆಗೆದುಕೊಳ್ಳಬೇಕೇ ಬೇಡವೇ ಎನ್ನುವ ಪ್ರಶ್ನೆ ಇತ್ಯರ್ಥವಾಗಿಬಿಟ್ಟರೆ ಮುಂದಕ್ಕೆ ಬೇರೆ ತರಹದ ಯೋಜನೆ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಜರೂರಾಗಿ ಈಗಲಾದರೂ ಸರಕಾರ ಸಿದ್ದಯ್ಯನ ಕಟ್ಟೆಯ ಹತ್ತಿರ ಲಿಫ್ಟ್ ಇರಿಗೇಷನ್ನು ಮಾಡಲು ಅನುಕೂಲ ಮಾಡಿಸಿಕೊಟ್ಟರೆ ರೈತರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ನಾನು ಹೇಳುತ್ತೇನೆ.

ಇನ್ನು ಕಾಂಟೂರ್‌ಬಂಡಿಂಗು ಕೆಲಸಗಳು ನಮ್ಮ ಭಾಗಗಳಲ್ಲಿ ಮಾತ್ರ ಸುಮಾರು 400—500 ಎಕರೆಗಳಲ್ಲಿ ನಡೆದಿದೆ. ಇತರ ಭಾಗಗಳಲ್ಲಿಯೂ ಮಾಡಿದ ಪಕ್ಷದಲ್ಲಿ ಜನಗಳಿಗೆ ಇದರಿಂದ ಅನುಕೂಲವಾಗುತ್ತದೆ. ಮತ್ತು ರೈತರು ಕೂಡ ಬೆಳೆ ತೆಗೆದುಕೊಳ್ಳಲು ಬಹಳ ಅನುಕೂಲವಾಗುತ್ತದೆ. ಜರೂರಾಗಿ ಕಾಂಟೂರ್ ಬಂಡಿಂಗು ಕೆಲಸಗಳನ್ನು ದೇಶದ ಎಲ್ಲಾ ಭಾಗಗಳಲ್ಲಿಯೂ ಮಾಡುವಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಹೇಳಿ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಸ್ವಾಮಿ, ನಮ್ಮ ದೇಶದಲ್ಲಿ ಅನಾವೃಷ್ಟಿಯಿಂದಾಗಿ ಬೆಳೆಗಳ ಪರಿಸ್ಥಿತಿ ಹದಗೆಟ್ಟು ನಿಂತಿದೆ. ಇದರಿಂದಾಗಿ ರೈತರುಗಳೂ ಬೆಳೆಮಾಡಿಕೊಳ್ಳುವುದೂ ಅಸಾಧ್ಯವಾಗಿದೆ. ಇಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈ ಒಂದು ನಿರ್ಣಯವನ್ನು ತಂದು ನಮಗೂ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಸಾಸಲು ಹೋಬಳಿಯಲ್ಲಿ ಕೇವಲ ಮೂರು ಇಂಚು ಮಳೆ ಆಗುತ್ತಿಲ್ಲ. ಹೀಗಾಗಿ ಹಾಕಿದ ಬೆಳೆಗಳೂ ಕೂಡ ಹದಗೆಡುತ್ತಿರುವ ಪರಿಸ್ಥಿತಿ ಬಂದಿದೆ. ಕೆಲವು ಕಡೆ ಬಿತ್ತನೆ ಹಾಕಲು ಕೂಡ ಅವಕಾಶವಿಲ್ಲದಂತಾಗಿದೆ. ದೊಡ್ಡ ಬೆಳವಂಗಲದ ಹೋಬಳಿ, ಹಾಗೂ ತೂಬುಗೆರೆ ಹೋಬಳಿಗಳಲ್ಲಿ ಸ್ವಲ್ಪ ಭಾಗ ಬಹಳ ಕನಿಷ್ಟವಾದ ಬೆಳೆಗಳು ಬಂದಿವೆ ಎನ್ನುವುದು ಮಾನ್ಯ ರೆವೆನ್ಯೂ ಮಂತ್ರಿಗಳಿಗೂ ಇದು ಬಹಳ ಚೆನ್ನಾಗಿ ಅರಿವಾಗಿದೆ. ಆದರೆ ತಾವು ಸರಕಾರದಿಂದ ಈಗಾಗಲೇ ಪಿ. ಡಬ್ಲ್ಯು. ಡಿ. ಕಳುಹಿಸಿರತಕ್ಕ ಪಟ್ಟಿಯಲ್ಲಿ ಈ ಮೂರು ಹೋಬಳಿಗಳ ವಿಷಯವನ್ನೂ ಅಲ್ಲಿ ನಮೂದಿಸದೆ ಇರತಕ್ಕದ್ದನ್ನು ನೋಡಿ ತುಂಬಾ ವಿಷಾದವಾಗಿದೆ. ಬಹಳ ದುಃಖದಿಂದ ಸಾಸಲು ಹೋಬಳಿಯ ಪರಿಸ್ಥಿತಿ ಇದರಲ್ಲಿ ಏಕೆ ಬಾರದಂತಾಯಿತು ಎಂದು ನಾನು ಇಲ್ಲಿ ಹೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಈ ವರ್ಷ ಸಾಸಲಿನಲ್ಲಿ ಮಳೆಯಾಗಿದೆ.

ಶ್ರೀ ಜಿ. ರಾಮೇಗೌಡ.—ಗೋರಿಬಿದನೂರು ಕಡೆಯ ಮೂರು ಹಳ್ಳಿಗಳನ್ನು ಬಿಟ್ಟರೆ ಮತ್ತಿತರ ಭಾಗಗಳಲ್ಲಿ ಬೆಳೆಯಾಗದೆ ಬಹಳ ಹಿಂದುಳಿದಿದೆ. ನಮ್ಮ ಸರಕಾರದವರು ಕೆಲವು ತಾತ್ಕಾಲಿಕವಾದ ಪರಿಹಾರಗಳನ್ನು ಕೊಡಲು ಉದ್ದೇಶಿಸಿದ್ದಾರೆ. ತಾತ್ಕಾಲಿಕವಾದ ಪರಿಹಾರಗಳನ್ನು ಕೊಡುವಾಗ ಕುಡಿಯುವ ನೀರಿನ ಬಾವಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು, ಸಾಸಲು ಹೋಬಳಿಯಲ್ಲಿ ಪ್ರತಿಯೊಂದು ಗ್ರಾಮಕ್ಕೂ ಒಂದು ಬಾವಿ ಇಲ್ಲ, ಇಲ್ಲಿ ಹತ್ತು ಗ್ರಾಮಕ್ಕೆ ಒಂದು ಬಾವಿಯೂ ಇಲ್ಲದ ಪರಿಸ್ಥಿತಿ ಇದೆ. ನಾವು ತಾಲ್ಲೂಕು ಬೋರ್ಡುಗಳಿಂದ ಬಾವಿಗಳನ್ನು ತೆಗೆಯುವ ಪ್ರಯತ್ನ ಮಾಡಿದಾಗ ಹಣದ ಅಭಾವದಿಂದಾಗಿ ಅರ್ಧದಷ್ಟು ಬಾವಿಯ ಕೆಲಸಗಳಾಗಿ ಅದು ಹಾಗೇ ನಿಂತ ಹೋಗಿದೆ ಹೀಗೆ ಅರ್ಧದಷ್ಟು ಕೆಲಸವಾಗಿ ನಿಂತಿರುವ ಬಾವಿಗಳನ್ನಾದರೂ ಪೂರೈಸಿಕೊಟ್ಟರೆ ಜನಗಳಿಗೂ ದನಕರುಗಳಿಗೂ ನೀರು ಕುಡಿಯಲು ಅನುಕೂಲವಾಗುತ್ತದೆ. ಈ ಕಾರ್ಯವನ್ನು ಸರಕಾರದವರು ಕೂಡಲೇ ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ. ಸಾಸಲು ಹೋಬಳಿ, ತೂಬುಗೆರೆ ಹಾಗೂ ದೊಡ್ಡಬೆಳವಂಗಲ ಕೆಲವು ಭಾಗಗಳಿಗೆ ವಿದ್ಯುಚ್ಛಕ್ತಿಯ ಸೌಕರ್ಯ ಇಲ್ಲ. ಗುಂಡನಗೆರೆ ಅಣೆಕಟ್ಟಿನ ಬಳಿ ಇಲ್ಲ. ಇಲ್ಲಿ ವಿದ್ಯುಚ್ಛಕ್ತಿ ಸಿಕ್ಕದೆ ಹೋದರೆ ಪಂಪುಸೆಟ್ಟುಗಳ ಕಾಮಗಾರಿಗಳೊಂದನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ಮೇಲೆ ಹೇಳಿದ ಮೂರು ಪ್ರದೇಶಗಳಿಗೂ ಪೂರ್ತಿಯಾಗಿ ವಿದ್ಯುಚ್ಛಕ್ತಿಯ ಸೌಕರ್ಯವನ್ನು ಕಲ್ಪಿಸಿಕೊಡಬೇಕು ಎಂದು ನನ್ನ ಸಲಹೆ.

ಕಳೆದ ವರ್ಷ Draught Area ದಲ್ಲಿ ಯಾವ ಯಾವ ಭಾಗಗಳು ಬರುತ್ತವೆ ಎನ್ನುವುದನ್ನು ಯೋಚಿಸಿ ಬೆಂಗಳೂರು ಜಿಲ್ಲೆ ಮತ್ತು ಇತರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಒಂದು ಯೋಜನೆಯನ್ನು ತಯಾರು ಮಾಡಲಾಗಿತ್ತು. ಆ ಯೋಜನೆಯನ್ನು ಕಾರ್ಯಗತ ಮಾಡಿದ್ದರೆ ಶೇಕಡಾ ಹತ್ತರಷ್ಟು ಜನಕ್ಕಾದರೂ ಅನುಕೂಲವಾಗುತ್ತಿತ್ತು. ಅದೇ ರೀತಿ ಇವೊತ್ತು ನಾವು ಏನು ಸಲಹೆಗಳನ್ನು ಕೊಟರೂ ಅದು ಕಾರ್ಯರೂಪಕ್ಕೆ ಬರುವಂತೆ ಮಾಡಿದರೆ ಮುಂದೆ ಅದೇ ರೀತಿಯಾದ ಸಲಹೆಗಳನ್ನು ಮಾಡುವದಕ್ಕೆ ಅವಕಾಶವಿರುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಈಗಲಾದರೂ ಕಳೆದ ಸಾಲಿನಲ್ಲಿ ಮಾಡಿರತಕ್ಕ ಯೋಜನೆಗೆ ಸ್ವಲ್ಪ ಪ್ರಾಶಸ್ತ್ಯವನ್ನು ಕೊಟ್ಟು ಅದನ್ನು ಕಾರ್ಯರೂಪಕ್ಕೆ ತಂದರೆ ಈ ಎಲ್ಲಾ ತಾಲ್ಲೂಕುಗಳಿಗೂ ಅನುಕೂಲವಾಗುತ್ತದೆ ಮತ್ತು ಸರಕಾರದವರು ಆ ರೀತಿ ಮಾಡುತ್ತಾರೆ ಎನ್ನುವ ಭಾವನೆಯೂ ಜನರಲ್ಲಿದೆ. ಶಾಶ್ವತವಾದ ಪರಿಹಾರಗಳನ್ನು ಕೊಡುವಾಗ ಮೊದಲು ಬಾವಿಗಳನ್ನು ಸರಕಾರ ಆದಷ್ಟು ಹೆಚ್ಚಾಗಿ ತೆಗೆಸಬೇಕು, ಬಾವಿಗಳ ಕಡೆಗೆ ಹೆಚ್ಚಿನ ನಿಗಾ ಕೊಟ್ಟರೆ ಅದರಿಂದ ರೈತರಿಗೂ ಸಹಾಯವಾಗುತ್ತದೆ. ಬಾವಿಗಳಿಲ್ಲದೆ ಎಷ್ಟೋ ಕಡೆ ಜನ ಬಹಳ ತೊಂದರೆ ಪಡುತ್ತಿದ್ದಾರೆಂದು ಸರಕಾರಕ್ಕೂ ಗೊತ್ತಾಗಿದೆ. ಬಾವಿಗಳಿಗಾಗಿ ಯಾರಿಂದಲೇ ಆಗಲೀ ಅರ್ಜಿಗಳು ಬಂದಿದ್ದರೆ ಅಂತಹ ಅರ್ಜಿ ನಿರಾಕರಿಸದೆ ಅವರಿಗೆ ಹಣ ಒದಗಿಸಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕು. ಅಲ್ಲದೆ ಕೆಲವು ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದರೂ ಅವನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ 24 ಇಂಚಿಗಿಂತ ಕಡಮೆ ಮಳೆ ಬೀಳುವಂತಹ ಸ್ಥಳಗಳಲ್ಲಿ ಒಂದು ಎಕರೆಯಷ್ಟು ನೀರಾವರಿ ಏರ್ಪಾಡು ಮಾಡಬೇಕಾಗಿದ್ದರೆ ಎಕರೆ ಒಂದಕ್ಕೆ ಸಾವಿರ ರೂಪಾಯಿಗಳಷ್ಟು ಖರ್ಚಾಗಬಾರದು ಎನ್ನುವ ಒಂದು ಸರ್ಕ್ಯುಲರ್ ಸರಕಾರದಲ್ಲಿದೆ, ಎಂದು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ. ಆದರೆ ಸರಕಾರಕ್ಕೆ ಸ್ಕೇರ್ಸಿಟಿ ಏರಿಯಾ ಇದೆ ಎಂದು ಮನವರಿಕೆಯಾದರೆ ಅಂತಹ ಕಡೆಗಳಲ್ಲಿ ಎಕರೆಯೊಂದಕ್ಕೆ ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಾದರೂ ಅಂತಹ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಕೂಡದು

(ಶ್ರೀ ಜಿ. ರಾಮೇಗೌಡ)

ಎಂದರೆ ಅದರಿಂದ ಜನಕ್ಕೆ ಬಹಳ ತೊಂದರೆಯಾಗುತ್ತದೆ. ಇದನ್ನು ಸರಕಾರ ಪರಿಶೀಲಿಸಿ ಇದಕ್ಕೆ ತಕ್ಕಹಾಗೆ ಸೂಕ್ತವಾದ ಒಂದು ಸಕ್ಯುಲರನ್ನು ಕಳುಹಿಸಿಕೊಡಬೇಕು ಎಂದು ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅರಣ್ಯ ಇಲಾಖೆಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ತೂಬುಗೆರೆಹೋಬಳಿ ಸೇರಿ, ಹಿಂದೊಂದು ಸಾರಿ ಲೆಕ್ಕಾಚಾರ ಹಾಕಿದ್ದಂತೆ ತಾಲ್ಲೂಕಿನಲ್ಲಿ 10,000 ಎಕರೆಯಷ್ಟು ಪ್ರದೇಶದಲ್ಲಿ ಅರಣ್ಯವನ್ನು ಅಭಿವೃದ್ಧಿ ಮಾಡಬಹುದು ಎಂದಿತ್ತು. ಈಗ ಜನಕ್ಕೆ ಕೆಲಸವಿಲ್ಲದೇ ಇರುವುದರಿಂದ ಈ ಕಷ್ಟ ಪರಿಸ್ಥಿತಿಯಲ್ಲಿ ಟ್ರೆಂಚಸ್‌ಗಳನ್ನು ತೆಗೆಯುವ ಕೆಲಸಗಳನ್ನು ಒದಗಿಸಿಕೊಟ್ಟರೆ ರೈತರಿಗೂ ಅನುಕೂಲ ವಾಗುತ್ತದೆ. ಒಂದೆರಡು ತಿಂಗಳು ಕಾಲ ಅವರು ತಮ್ಮ ಜೀವನವನ್ನೂ ನಡೆಸಿಕೊಂಡು ಹೋಗಲು ಅನುಕೂಲವಾಗುತ್ತದೆ. ಇದನ್ನು ಸರಕಾರ ಕೂಡಲೇ ಗಮನಿಸಿ ಅರಣ್ಯಗಳನ್ನು ಅಭಿವೃದ್ಧಿ ಮಾಡು ವುದಕೋಸ್ಕರ ಟ್ರೆಂಚುಗಳನ್ನು ತೋಡಿಸುವ ಕೆಲಸವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈಗ ಕಾಂಟೂರ್ ಬಂಡಿಂಗ್ ಅನ್ನುತಕ್ಕಂಥ ಒಂದು ಯೋಜನೆ ಕಾಣಿಸುತ್ತಿದೆಯೇ ಹೊರತು, ಅದು ಕಾರ್ಯರೂಪಕ್ಕೆ ಬಂದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಡಿವಿಜನಲ್ ಆಫೀಸಾಗಿದೆ ಆದರೂ ಒಂದು ಕಡೆಯಲ್ಲಿಯೂ ಆ ಯೋಜನೆ ಇನ್ನೂ ನಡೆದಿಲ್ಲ. ಸ್ಕೇರ್ಸಿಟಿ ಏರಿಯಾಗಳಲ್ಲಿ ಈ ಕೆಲಸಗಳನ್ನು ಹೆಚ್ಚಾಗಿ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆಕೊಟ್ಟರೆ, ಅವರು ಮಾಡಿದ್ದೂ ಸಾರ್ಥಕವಾಗುತ್ತದೆ. ಜನಗಳ ಉತ್ಸಾಹವನ್ನು ಸದುಪಯೋಗ ಪಡಿಸಿಕೊಂಡು ಈ ಸಮಯದಲ್ಲಿ ರೈತರಿಗೆ ಸಹಾಯ ಮಾಡಿಕೊಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಈಗ ಕೆರೆ ರಿಪೇರಿಗಳಿಗೆ ಕೆಲವು ಕಡೆ ಕೆಲವು ಎಸ್ಟಿಮೇಟ್ ತಯಾರಾಗಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಆ ಕೆಲಸಗಳು ಸರಿಯಾಗಿ ನಡೆಯುತ್ತಾ ಇಲ್ಲ. ಕೆಲವು ಕಂಟ್ರಾಕ್ಟರುಗಳು ಕೆಲಸ ಮಾಡ ತ್ತಲೇ ಇಲ್ಲ. ಕೆಲಸಗಳನ್ನು ಕೂಡಲೆ ತೆಗೆದುಕೊಳ್ಳುವ ಹಾಗೆ ಏರ್ಪಾಡು ಮಾಡಿದ್ದರೆ ಅಲ್ಲಿನ ಜನಗಳಿಗೆ ಕೆಲಸ ಸಿಗುತ್ತದೆ. ಈ ಕಾರ್ಯ ಜಾಗ್ರತೆ ಮುಗಿದರೆ, ಅಲ್ಲಿ ಸಿಕ್ಕಬಹುದಾದ ಸ್ವಲ್ಪ ನೀರಿನಿಂದ ವ್ಯವಸಾಯ ಮಾಡತಕ್ಕವರಿಗೆ ಅನುಕೂಲತೆಗಳು ದೊರೆತಾವು. ಒಂದು ವರ್ಷ, ಎರಡು ವರ್ಷಗಳಿಂದ ಹಾಗೆಯೇ ನಿಂತಿರತಕ್ಕಂಥ ಕೆರೆಗಳ ಕೆಲಸವನ್ನು ಕೂಡಲೆ ತೆಗೆದುಕೊಂಡು, ಬೇಗ ಮುಗಿಸಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಈಗ ಹೊಸ ಕೆರೆಗಳು ಮತ್ತು ಪಿಕಪ್ಪುಗಳ ನಿರ್ಮಾಣ ಕಾರ್ಯವನ್ನು ಸರ್ಕಾರದವರು ಮಾಡುತ್ತಾ ಇದ್ದಾರೆ. ಇದರಲ್ಲಿ ಕೇಳಿಕೊಳ್ಳುವ ಒಂದು ಅಂಶವಿದೆ. ಈಗ 10 ಎಕರೆಗೆ ಕಡಮೆ ಇರತಕ್ಕಂಥಾದ್ದನ್ನು ತಾಲ್ಲೂಕು ಬೋರ್ಡಿಗೆ ಕೊಟ್ಟಿದ್ದಾರೆ. ಸ್ಕೇರ್ಸಿಟಿ ಏರಿಯಾದಲ್ಲಿ ಇಲಾಖೆಯವರೇ ವಹಿಸಿಕೊಂಡು, ಈ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾಲ್ಲೂಕು ಬೋರ್ಡಿನಲ್ಲಿ ಹಣ ವಿಲ್ಲದ್ದರಿಂದ, ತಾವು ಏನು ಅಧಿಕಾರವನ್ನು ಅವುಗಳಿಗೆ ಕೊಟ್ಟಿದ್ದೀರೋ ಅದರಿಂದ ಏನೂ ಪ್ರಯೋ ಜನವಿಲ್ಲ. ಸ್ಕೇರ್ಸಿಟಿ ಇರುವ ಕಡೆ, 10 ಎಕರೆ ಯಾಗಲಿ, 20 ಎಕರೆ ಯಾಗಲಿ, ಎಲ್ಲೆಲ್ಲಿ ಈ ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲತೆ ಇದೆಯೋ, ಅಲ್ಲಿ ಸರಕಾರ ನೇರವಾಗಿ ವಹಿಸಿಕೊಂಡು ಕೆಲಸ ಗಳನ್ನು ಪೂರೈಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ 20 ಎಕರೆಗೆ ಒಳಪಟ್ಟಿರು ವುದಕ್ಕೆ ಮಾತ್ರ ಸಬ್‌ಡಿವಿಜನ್ನಿನವರು ಸರ್ವೆಮಾಡಿ ಎಸ್ಟಿಮೇಟುಗಳನ್ನು ಕಳುಹಿಸತಕ್ಕಂಥಾದ್ದು ಎಂಬ ಒಂದು ಸಲಹೆ ಇದೆ. ಇದು ಸರಿಯಿಲ್ಲ: ಏಕೆಂದರೆ ಮೈನರ್ ಇರಿಗೇಷನ್ ಇಲಾಖೆಯವರೇ ಎಲ್ಲ ಕಾರ್ಯಗಳನ್ನು ತೆಗೆದುಕೊಂಡು ಆದಷ್ಟು ಜಾಗ್ರತೆ ಅವುಗಳನ್ನು ಕಾರ್ಯರೂಪಕ್ಕೆ ತರ ಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಎಲ್ಲಕ್ಕಿಂತಲೂ ಹೆಚ್ಚಾಗಿ ಈಗ ಸರಕಾರದವರು ನಡೆಸುತ್ತಾ ಇರತಕ್ಕಂಥ ರೇನ್‌ಗಾಜ್ ಪದ್ಧತಿ ಯನ್ನು ಬದಲಾಯಿಸಿ, ಮಾಡರ್ನ್ ಮೆಥಡ್ಡಿನಲ್ಲಿ ಅವುಗಳನ್ನು ಪ್ರತಿಯೊಂದು ಹೋಬಳಿಗೂ ಎರಡ ರಂತೆ ನಿರ್ಮಿಸುವಂತೆ ಏರ್ಪಾಡು ಮಾಡಬೇಕು. ಒಂದು ವರ್ಷದಲ್ಲಿ 20", 25" ಮಳೆ ಬರುತ್ತದೆಂದು ಹೇಳುವುದರ ಜೊತೆಗೆ ಒಂದು ವರ್ಷದಲ್ಲಿ ಎಷ್ಟು ಸಲ ಮಳೆ ಬಂತು. ಮಳೆಗಾಲದಲ್ಲಿ ಎಷ್ಟು ಮಳೆಯಾಯಿತು, ಅನಾವಶ್ಯಕವಾಗಿ ಎಷ್ಟು ಮಳೆಯಾಯಿತು, ಮುಂತಾದ ವಿವರಣೆಯನ್ನು ಶೇಖರಣೆ ಮಾಡಲು ಸರಕಾರ ತಕ್ಕ ಏರ್ಪಾಡು ಮಾಡಬೇಕು. ಇಷ್ಟು ಸಲಹೆಗಳನ್ನುಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Next Sri B. H. Lakshmaiah is not here. The Hon'ble Member should be present. Next speaker Sri Lakshmikanthappa.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ (ಸಾಗರ).—ಮಾನ್ಯ ಸಭಾಪತಿಗಳೆ, ಈ ಎರಡು ದಿನಗಳಿಂದ ನಮ್ಮ ರಾಜ್ಯದಲ್ಲಿ ಉಂಟಾಗಿರುವ ಅಭಾವಪರಿಸ್ಥಿತಿಯ ಬಗ್ಗೆ ಎಲ್ಲ ಭಾಗಗಳಿಂದಲೂ ಅನೇಕ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ನಾನು ಮಲೆನಾಡಿನಿಂದ ಬಂದವನಾಗಿ, ಇದರಲ್ಲಿ ಮಲೆನಾಡಿನ ಪರಿಸ್ಥಿತಿಯಲ್ಲಿಯೂ ಈ ವರ್ಷ ಏನಾಗಿದೆ ಎನ್ನುವುದನ್ನು ನಾನು ಮಾತನಾಡುವ ಒಂದು ಸನ್ನಿವೇಶ ಬಂದಿರತಕ್ಕಂಥಾದ್ದು ದುರದೃಷ್ಟಕರ. ಮಲೆನಾಡಿನಲ್ಲಿ ಯಾವಾಗಲೂ ಸುಭಿಕ್ಷವಿದ್ದು, ಯಾವಾಗಲೂ ಅಭಾವಪರಿಸ್ಥಿತಿ ಬಾರದೆ, ಮಳೆ ಹೆಚ್ಚಾಗಿ ಬಂದು ತೊಂದರೆಯಾಗುವ ಒಂದು ಸನ್ನಿವೇಶವಿರುತ್ತಿತ್ತು. ಆದರೆ ಈ ವರ್ಷ ನೋಡಿದ್ದೇ ಆದರೆ, ನಮ್ಮಲ್ಲಿ ಮಳೆ ಬೆಳೆ ಕಡಮೆಯಾಗಿ ಎಷ್ಟರ ಮಟ್ಟಿಗೆ ಅನಾಹುತವಾಗಿದೆ ಎನ್ನುವುದು ಗೊತ್ತಾಗುತ್ತದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶಿವಮೊಗ್ಗ ಜಿಲ್ಲೆ ಪೂರ್ಣ ಮಲೆನಾಡಾಗದೆ, ಅದರಲ್ಲಿ ಕೆಲಭಾಗ ಮೈದಾನವೂ ಇದೆ ಎನ್ನತಕ್ಕಂಥಾದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಮಲೆನಾಡಿನಲ್ಲಿಯೂ ಮಳೆ ಎಷ್ಟು ಪ್ರಮಾಣದಲ್ಲಿ ಆಗಬೇಕೋ ಅಷ್ಟು ಪ್ರಮಾಣದಲ್ಲಿ ಆಗದೆ ಇದ್ದುದರಿಂದ, ಅದು ಆ ಭಾಗದಲ್ಲಿರತಕ್ಕಂಥ ಭೂಗುಣಕ್ಕೆ ಸರಿ ಹೋಗದೆ, ಅಲ್ಲಿಯ ಬೆಳೆಗೆ ತೊಂದರೆಯಾಗಿದೆ. ಹೀಗೆ ನೀರಿನ ಒಂದು ಶೇಖರಣೆಗೂ ತೊಂದರೆಯಾಗುತ್ತಿದೆ. ಈ ವರ್ಷ ಅಲ್ಲಿಯ ಜನತೆ ಕಷ್ಟಪಡುತ್ತಾ ಇರತಕ್ಕಂಥಾದ್ದನ್ನು ನೋಡಿದರೆ ಅದು ಅನುಭವಕ್ಕೆ ಬರುತ್ತದೆ.

ಈಗ ಮಲೆನಾಡಿನಲ್ಲಿ ಮಳೆ ಇಲ್ಲ. ಅದು ಮುಂದೆ ಹೋಗಿರುವುದರಿಂದ ಅಭಾವಸ್ಥಿತಿ ತಲೆದೋರುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡುತ್ತಾ ಇಲ್ಲ. ಮಲೆನಾಡಿನಲ್ಲಿ ಈ ವರ್ಷ ಪ್ರಾರಂಭದಿಂದಲೂ, ಸರಿಯಾಗಿ ಸಕಾಲಕ್ಕೆ ಮಳೆ ಬರದೆ, ಬಿತ್ತನೆ ಸಹ ಸರಿಯಾಗಿ ಆಗಲಿಲ್ಲ. ಬಿತ್ತನೆ ಆದ ಮೇಲೆ ಮಳೆ ಚೆನ್ನಾಗಿ ಬರಬೇಕು; ಚೆನ್ನಾಗಿ ಬಾರದೆ ಇದ್ದಾಗ ಅಲ್ಲಿ ಭೂಗುಣ ಅನುಸರಿಸಿ ಮೊಳಕೆ ಬರುವುದಕ್ಕೆ ಅವಕಾಶವಿರುವುದಿಲ್ಲ. ನೀರು ಹೆಚ್ಚಾಗಿದ್ದರೆ ಮಾತ್ರ ಬೆಳೆ ಬರುತ್ತದೆ. ಇಂಥ ಒಂದು ಸನ್ನಿವೇಶದಲ್ಲಿ ಮಳೆ ಬಹಳ ಕಡಮೆ ಯಾವಾಗ ಅಲ್ಲಿಯ ಪರಿಸ್ಥಿಯನ್ನು ಊಹಿಸಬಹುದು. 100-150 ಇಂಚು ಮಳೆ ಬರುವ ಕಡೆ, 15-20 ಇಂಚು ಮಾತ್ರ ಮಳೆಯಾಗಿದೆ. ಮಳೆ ಬಾರದೆ, ಪೈರು ಒಣಗಿ ಬೆಂಕಿಕಡ್ಡಿಗೀರಿದರೆ ಬೆಂಕಿ ಹೊತ್ತುವ ಒಂದು ಪರಿಸ್ಥಿತಿ ಅಲ್ಲ ಎಂದರೆ ಭತ್ತದ ಜಮೀನುಗಳಲ್ಲಿ ಉಂಟಾಗಿದೆ. ಇದು ಬಹಳ ಶೋಚನೀಯವಾಗಿದೆ. ನಮ್ಮ ಜಿಲ್ಲೆಯಲ್ಲಿ ಯಾವಾಗಲೂ ಹೆಚ್ಚಿಗೆ ಬತ್ತವನ್ನೇ ಬೆಳೆಯುತ್ತೇವೆಂದು ತಮಗೆ ಗೊತ್ತಿದೆ. ಈ ಅಭಾವ ಪರಿಸ್ಥಿತಿಗೆ ಕೆರೆಗಳಲ್ಲಿ ನೀರು ನಿಲ್ಲದಿರುವುದು ಮತ್ತು ಬಾವಿ ಅವ ವಸ್ಥೆ, ಇವೇ ಕಾರಣವಲ್ಲವೇ ಎಂದು ಯೋಚನೆ ಮಾಡಬೇಕಾಗಿದೆ. ಎರಡು ವರ್ಷಗಳ ಹಿಂದೆ ಹೆಚ್ಚಿಗೆ ಮಳೆ ಬಂದು ಪ್ರವಾಹದಿಂದ ನೊಂದಿರತಕ್ಕಂಥ ಜನ, ಈಗ ಮಳೆ ಇಲ್ಲದೆ ಅದಕ್ಕಿಂತಲೂ ಹೆಚ್ಚಿನ ಪೀಡೆಗೆ ಒಳಗಾಗಿದ್ದಾರೆ. ಹೆಚ್ಚಿನ ಪ್ರವಾಹ ಬರುತ್ತಾ ಇವೆ, ಹತೋಟಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾವು ಕೇಳುತ್ತಾ ಇದ್ದೇವೆ. ಈಗ ಹತೋಟಿ ಕ್ರಮಕ್ಕಿಂತ ನಮಗೆ ನೀರು ಇಲ್ಲದಿದ್ದರೆ ಎಷ್ಟು ಪ್ರಮಾಣದಲ್ಲಿ ತೊಂದರೆಯಾಗುತ್ತದೆ ಎನ್ನುವುದನ್ನು ನೋಡಿ ಅನುಭವಿಸಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಎಲ್ಲ ತಾಲ್ಲೂಕುಗಳಲ್ಲಿಯೂ ಹೆಚ್ಚಾಗಿ ಮಳೆ ಬರುವ ಸನ್ನಿವೇಶವಿದೆ. ಆದರೆ ಇದುವರೆಗೂ ಫೀಡರ್ ಚಾನಲ್‌ಗಳ ಕಡೆಗೆ ಗಮನ ಕೊಡದಿದ್ದ ಕಾರಣ ನಮ್ಮ ಜನರು ಈ ವರ್ಷ ಕಷ್ಟ ಅನುಭವಿಸಬೇಕಾಗಿದೆ. ಒಂದು ವೇಳೆ ಸರಿಯಾದ ಫೀಡರ್ ಚಾನಲ್ಲುಗಳು ಎಲ್ಲಾ ಕೆರೆಗಳಿಗೂ ಇದ್ದಿದ್ದರೆ ಸ್ವಲ್ಪ ಮಳೆ ಬಂದರೂ ಕೆರೆಗಳು ತುಂಬಿ ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶವಾಗುತ್ತಿತ್ತು. ಅವು ಸರಿಯಾಗಿ ಇಲ್ಲದಿರುವುದರಿಂದ, ಕೆರೆಗಳಲ್ಲಿ ನೀರು ನಿಲ್ಲುತ್ತಿಲ್ಲ. ಈ ಕೆರೆ ಕೆಲಸ ಕಾರ್ಯಗಳನ್ನು ನೋಡಿದರೆ, ಅವು ಸರಿಯಾಗಿ ನಡೆದಿಲ್ಲ. ತೂಬು ಮಾಡಿದ್ದು ಸರಿಯಿಲ್ಲ; ಕೋಡಿ ಮಾಡಿದ್ದು ಸರಿಯಿಲ್ಲ. ಸರಿಯಾದ ಬಂಡುಗಳಿಲ್ಲ. ಇಂಥ ಕಾರ್ಯಗಳನ್ನು ಇಲಾಖೆಯವರು ಸರಿಯಾಗಿ ಮಾಡದೆ ಇರುವುದರಿಂದ, ಇವತ್ತಿನ ದಿವಸ ಮಳೆ ಕಡಮೆಯಾಗಿರುವ ಪರಿಸ್ಥಿತಿಯಿಂದ ತೊಂದರೆಯಾಗುತ್ತಿದೆ. ಈ ವರ್ಷ ಕೆರೆಗಳಲ್ಲಿ ಸಾಕಷ್ಟು ನೀರಿದ್ದಿದ್ದರೆ ನಮ್ಮ ಜನ ಪೈರು ಚೆನ್ನಾಗಿ ಬೆಳೆಯುತ್ತಿದ್ದರು. ಈ ವರ್ಷ ಒದಗಿರುವ ಒಂದು ಸನ್ನಿವೇಶ ನಮ್ಮ ಮಲೆನಾಡಿಗೆ ಹೊಸದು. ಪ್ರಕೃತಿ ವಿಕೋಪ ಈಚೆಗೆ ಮೇಲಿಂದ ಮೇಲೆ ಕಾಣುತ್ತಿದೆ, ಒಂದು ಸಾರಿ ಮಳೆ ಹೆಚ್ಚು, ಒಂದು ಸಾರಿ ಮಳೆ ಇಲ್ಲ. ಇಂಥ ಒಂದು ಸನ್ನಿವೇಶ ಜನತೆಗೆ ಬಹಳ ತೊಂದರೆಯನ್ನು ಉಂಟುಮಾಡಿದೆ. ಅದರಲ್ಲಿಯೂ ಮಲೆನಾಡಿನ ಭಾಗದಲ್ಲಿ ಜನತೆ ಒಂದೇ ಬೆಳೆಯನ್ನು ನಂಬಿಕೊಂಡಿರತಕ್ಕಂಥವರು. ಏನಾದರೂ ಆ ಒಂದು ಬೆಳೆ ಹೋಗಿದ್ದೇ ಆದರೆ, ಮುಂದೆ ಅವರು ಪುನಃ ಯಾವ ಪ್ರಯತ್ನ ಮಾಡಿದರೂ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಅದೇ

(ಶ್ರೀ ಪಿ. ಎಸ್. ಲಕ್ಷ್ಮೀಕಾಂತಪ್ಪ)

ಮೈದಾನ ಪ್ರದೇಶದಲ್ಲಿ, ಮುಂಗಾರು ಬೆಳೆ ಕೆಟ್ಟರೆ ಹಿಂಗಾರು ಬೆಳೆಯನ್ನು ತೆಗೆದು ಜೀವನ ಮಾಡಬಹುದು. ಜೀವನಕ್ಕೆ ಏನೂ ಅವಕಾಶವಿಲ್ಲದಂತೆ ಆಗುವ ಒಂದು ಸನ್ನಿವೇಶ ನಮ್ಮ ಮಲೆನಾಡಿಗೆ ಬಂದಿರತಕ್ಕಂಥಾದ್ದು ದುರದೃಷ್ಟಕರ.

ಇದಕ್ಕೆ ಸರ್ಕಾರದವರು ಸಾಕಷ್ಟು ಗಮನಕೊಡುತ್ತಾ ಇಲ್ಲ. ಯಾವ ತಾಲ್ಲೂಕು ಬೋರ್ಡ್ ಆಗಲಿ ಅವರಿಗೆ ವಹಿಸಿರತಕ್ಕಂಥ 10 ಎಕರೆ ಒಳಗಿರತಕ್ಕಂಥ ಕೆರೆಗಳನ್ನು ಮಾಡಲೂ ಕೂಡ ಸಾಕಷ್ಟು ಹಣವಿಲ್ಲ. ಅವರನ್ನು ಕೇಳಿದರೆ ತಮಗೆ ಹಣವಿಲ್ಲವೆಂದು ಹೇಳುತ್ತಾರೆ. ಇದೇ ಸರಕಾರದವರು ಹಣ ಕೊಟ್ಟಿದ್ದೇವೆಂದು ಹೇಳುತ್ತಾರೆ. ತಾಲ್ಲೂಕು ಬೋರ್ಡಿಗೆ ಹಣ ಕೊಡದೆ ಬರೀ ಒಂದು ಕೆಲಸದ ಜವಾಬ್ದಾರಿ ವಹಿಸಿಕೊಟ್ಟರೆ ಇಂಥ ಒಂದು ಸನ್ನಿವೇಶವನ್ನು ಎದುರಿಸುವುದಕ್ಕಾಗುವುದಿಲ್ಲ. ನಾನು ಪ್ರತಿನಿಧಿಸುತ್ತಿರುವ ಸೊರಬ ಮತ್ತು ಸಾಗರ ತಾಲ್ಲೂಕುಗಳ ಒಂದು ಉದಾಹರಣೆಯನ್ನು ತೆಗೆದುಕೊಂಡರೆ, ತಾಲ್ಲೂಕು ಬೋರ್ಡಿಗೆ ಸಂಬಂಧಪಟ್ಟ, ಅದರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರತಕ್ಕಂಥ ಕೆರೆಗಳ ಸಂಖ್ಯೆ ಎರಡು ಸಾವಿರ ಇದ್ದರೆ, ಅವರಿಗೆ ವರ್ಷಕ್ಕೆ 15 ಸಾವಿರ ಗ್ರಾಂಟ್ ಇವೆಯೆಂದು ಹೇಳಿದರೆ, ಎಷ್ಟು ಪ್ರಮಾಣದಲ್ಲಿ ಅವರು ಕೆರೆಗಳನ್ನು ದುರಸ್ತುಪಡಿಸಬಹುದು! ಅದೇ ರೀತಿಯಲ್ಲಿ ಇಲಾಖೆಯವರು ಯಾವ ರೀತಿಯಲ್ಲಿ ತಮಗೆ ಇರತಕ್ಕ ಹಣವನ್ನು ಉಪಯೋಗ ಮಾಡಬೇಕು ಎನ್ನುವುದನ್ನು ನಿರ್ದಿಷ್ಟಪಡಿಸದೆ ಇರುವುದರಿಂದ ಅವರು ಈಗ ಅನುಸರಿಸುತ್ತಿರುವ ರೀತಿಯಲ್ಲಿ ಎಂದರೆ ಬರೀ ಮಣ್ಣಿನ ಕಾಮಗಾರಿಯನ್ನು ಮಾಡಿಕೊಂಡು ತೂಬನ್ನು ಸರಿಪಡಿಸದೆ ಬಂದ ನೀರು ಬಂತು, ಹೋದ ನೀರು ಹೋಯಿತು ಎಂದು ಮಾಡುವುದಾದರೆ ಹಣ ವ್ಯಯವಾಗಿದರೂ ಉಪಯೋಗವಾಗಿರುವುದಿಲ್ಲ. ಇದಕ್ಕಾಗಿ ಸೂಕ್ತ ಕ್ರಮ ಸೂಕ್ತ ತಿಳುವಳಿಕೆ ಇಲಾಖೆಯವರಿಗೆ ಕೊಡಬೇಕು. ಅದಕ್ಕೆ ಅವಕಾಶವನ್ನು ಕಲ್ಪಿಸಿ ನೀರಿನ ತೊಂದರೆಯಾಗದಂತೆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಈ ಸನ್ನಿವೇಶದಲ್ಲಿ ಒತ್ತಾಯಪೂರ್ವಕವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಸಣ್ಣ ನೀರಾವರಿ ಯೋಜನೆಗಳಲ್ಲಿ ಎಷ್ಟರಮಟ್ಟಿಗೆ ಕಾರ್ಯಕ್ರಮ ಯಶಸ್ವಿಯಾಗಿದೆ ಎನ್ನುವುದನ್ನು ಯೋಚನೆ ಮಾಡುವುದಾದರೆ ಒಂದು ಉದಾಹರಣೆ ನಮಗೆ ಸಿಕ್ಕುತ್ತದೆ. ಲಕ್ಕವಳ್ಳಿಯಲ್ಲಿ ಲಿಫ್ಟ್ ಇರ್ರಿಗೇಷನ್ ಸೊಸೈಟಿ ಎಂದು ಒಂಬತ್ತು ವರ್ಷಗಳ ಹಿಂದೆ ಒಂದು ಸೊಸೈಟಿಯನ್ನು ಮಾಡಿ ರೈತರು 48 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಅದರ ಉಪಯೋಗವನ್ನು ಇವತ್ತಿಗೂ ಪಡೆಯುತ್ತಿಲ್ಲ. ವಿದ್ಯುಚ್ಛಕ್ತಿ ಇಲಾಖೆಯವರ ಮತ್ತು ಪಬ್ಲಿಕ್ ವರ್ಕ್ಸ್ ಇಲಾಖೆಯವರ ವಹಿವಾಟಿನಲ್ಲಿ ಆ ಕೆಲಸವಾಗದೆ ಅವರು ನಿರಾಶರಾಗಿದ್ದಾರೆ. ಈ ಒಂದು ಯೋಜನೆ ಸರಿಹೋದರೆ ಅನೇಕ ಕಡೆ ಅದರಂತೆಯೇ ರೈತರು ಮಾಡುವುದಕ್ಕೆ ಅವಕಾಶವಾಗುತ್ತದೆ. ಇಂಥ ಮಾದರಿಯಾಗಿರುವ ಯೋಜನೆಯನ್ನು ಕಾರ್ಯಗತ ಮಾಡದೆ 8-10 ವರ್ಷಗಳಿಂದ ಇದ್ದಾರೆ. ಇದನ್ನು ಸಹ ಸರಿಪಡಿಸಬೇಕೆಂದು ಹೇಳುತ್ತೇನೆ.

ದಂಡಾವತಿ ಪ್ರಾಜೆಕ್ಟ್ ಸರ್ವೆ ಮಾಡಿ ಅಲ್ಲಿ ನೀರಾವರಿ ಪ್ರಾಜೆಕ್ಟಿಗೆ ಅವಕಾಶವಿಲ್ಲ ಕೆಳಗಡೆಯಲ್ಲಿ ನದಿ ಹರಿಯುತ್ತದೆ. ದಂಡಾವತಿ ಪ್ರಾಜೆಕ್ಟಿನ ಸರ್ವೆ ಮಾಡಬೇಕೆಂದು ಬೇಡಿಕೆ ಬಂದನಂತರ ಮಾಡಿದ್ದಾರೆ. ಅದು ಅಷ್ಟು ಸಮರ್ಪಕವಾಗಿಲ್ಲ, ಇನ್ನೂ ಸ್ವಲ್ಪ ಎತ್ತರದ ಸ್ಥಳದಲ್ಲಿ ಕಟ್ಟಿ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಲ್ಲಿಸುವುದಕ್ಕೆ ಅವಕಾಶ ಮಾಡಿದರೆ 8-10 ಸಾವಿರ ಎಕರೆ ಜಮೀನಿಗೆ ನೀರಾವರಿಗೆ ಅವಕಾಶವಾಗುತ್ತದೆ. ಅಭಾವ ಪರಿಸ್ಥಿತಿಯಲ್ಲಿ, ಮಳೆ ಬಾರದೆ ಇದ್ದ ಕಾಲದಲ್ಲಿ ಉಪಯೋಗ ಮಾಡಬಹುದು.

ಮಳೆಗಾಲದಲ್ಲಿ ಮಳೆ ಸರಿಯಾಗಿ ಬಾರದೆ ಇರುವುದಕ್ಕೆ ಕಾಡನ್ನು ಬೆಳೆಸಬೇಕು ಎನ್ನುವ ಕಾರ್ಯ ಎಲ್ಲರಿಗೂ ಗೊತ್ತಾದ ವಿಷಯ. ನಾವೆಲ್ಲರೂ ಹೇಳುತ್ತೇವೆ ಮತ್ತು ಆರಣ್ಯ ಇಲಾಖೆಯವರೂ ಕೂಡ ಗಮನ ಕೊಡುತ್ತಿದ್ದಾರೆ. ಆದರೆ ಸಾಗರ ಮತ್ತು ಸೊರಬ ಪ್ರದೇಶಗಳಲ್ಲಿ ಅವರು ಮಾಡತಕ್ಕ ಅರಣ್ಯವನ್ನು ಬೆಳೆಸತಕ್ಕ ಕಾರ್ಯಕ್ರಮದಲ್ಲಿ ಬೆಲೆ ಬಾಳತಕ್ಕ ತೇಗದ ಮರ, ಗಂಧದ ಮರ ಇಂಥದರ ಬಗ್ಗೆ ಆಸಕ್ತಿ ವಹಿಸಿ ಸಾವಿರಾರು ಎಕರೆಗಳಷ್ಟು ಕಾಡನ್ನು ಕಡಿದು ಪ್ಲಾಂಟೇಷನ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅದರ ಜೊತೆಗೆ ಹೆಚ್ಚು ಎತ್ತರ ಬೆಳೆಯುವಂಥ ದೊಡ್ಡ ದೊಡ್ಡ ಮರಗಳ ಬೆಳವಣಿಗೆಯ ಬಗ್ಗೆ ಬೇಗ ಯೋಚನೆ ಮಾಡಬೇಕು. ಬರೀ ಹಣದ ಕಡೆ ಗಮನವನ್ನು ಇಟ್ಟುಕೊಳ್ಳದೆ ಅದರ ಜೊತೆಯಲ್ಲಿ ಸುತ್ತಮುತ್ತಲಿನ ಸನ್ನಿವೇಶಕ್ಕೆ ಮಳೆಗಾಗಿ ದೊಡ್ಡದೊಡ್ಡ ಮರಗಳು ಇರತಕ್ಕದ್ದು, ಅದನ್ನು ಬೆಳೆಸತಕ್ಕದ್ದು ಇದಕ್ಕೆ ಸಹ ಕಾರ್ಯಕ್ರಮ ತೆಗೆದುಕೊಂಡಿಲ್ಲ. ನಮ್ಮ ಪ್ರದೇಶದಲ್ಲಿನ ಅಭಾವ ಪರಿಸ್ಥಿತಿಗೆ ಸೂಕ್ತ ಪರಿಹಾರ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ, ತಾವು ನಮಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಅಭಾವ ಪರಿಸ್ಥಿತಿ ನಮ್ಮ ದೇಶದಲ್ಲೇ ಬಹಳ ವರ್ಷಗಳಿಂದಲೂ ಇದೆ. ಇದು ನಮ್ಮ ಪ್ರಜಾ ಸರ್ಕಾರ ಬಂದಮೇಲೆ ಇನ್ನೂ ಜಾಸ್ತಿಯಾಗುತ್ತಿದೆ ಎನ್ನತಕ್ಕ ಅಂಶವನ್ನು ಅಂಕಿಅಂಶಗಳ ಮೂಲಕ ಸರ್ಕಾರದವರೇ ಇಟ್ಟಿದ್ದಾರೆ ಮಳೆ ಬಾರದೆ ಇರತಕ್ಕ; ಅಭಾವ ಪರಿಸ್ಥಿತಿ ಇರತಕ್ಕ ಸ್ಥಳಗಳಿಗೆ ಶಾಶ್ವತವಾದ ಪರಿಹಾರ ಮಾರ್ಗವನ್ನು ಸರ್ಕಾರ 16 ವರ್ಷಗಳಾದರೂ ಕೂಡ ಮಾಡದೇ ಇರತಕ್ಕ ವಿಷಯವನ್ನು ನಾನು ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರವು ಒದಗಿಸಿರತಕ್ಕ ಅಂಕಿ ಅಂಶಗಳು ಏನಿವೆಯೋ ಅವೆಲ್ಲಾ ಸುಳ್ಳು ಎಂದು ಹೇಳುವುದಕ್ಕೆ ಮೊನ್ನೆ ನಡೆದ ಒಂದು ಸಂಗತಿಯನ್ನು ಹೇಳುತ್ತೇನೆ. ನಾನು ಊರಿಗೆ ಹೋಗಿದ್ದಾಗ ಒಬ್ಬ ಶ್ಯಾನುಭೋಗರು ನನ್ನಲ್ಲಿದ್ದ ಪುಸ್ತಕವನ್ನು ನೋಡಿ ಅದು ಏನು ಎಂದು ಕೇಳಿದರು. ಅದರಲ್ಲಿ ಸರ್ಕಾರದವರು ಮಳೆ ಎಷ್ಟು ಬಂತು, ಬೆಳೆ ಎಷ್ಟಾಯಿತು ಎಂದು ಅನೇಕ ವಿಚಾರಗಳನ್ನು ಕೊಟ್ಟಿರುತ್ತಾರೆಂದು ತಿಳಿಸಿದಾಗ ಆ ಶ್ಯಾನುಭೋಗ ಹೇಳಿದ ; ಅವೆಲ್ಲ ಸುಳ್ಳು ಅಂಕಿಅಂಶಗಳು! ನಾವೇ ಕೊಟ್ಟಿರುವುದು ಅದನ್ನು ಎಂದು. ಇದು ಏನೆಂದರೆ........

ಶ್ರೀ ಎಂ. ವಿ. ಕೃಷ್ಣಪ್ಪ.—ಶಾನುಭೋಗರ ಹೆಸರೇನು ?

ಶ್ರೀ ಕೆ. ಲಕ್ಕಪ್ಪ.—ಅವರ ಹೆಸರು ಏಕೆ ? ಅವರು ಹೇಗೂ ಹೋಗುವವರು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಂಥ ಪರಿಸ್ಥಿತಿ ನಮ್ಮ ದೇಶದಲ್ಲಿದೆ. ಯಾವ ಅಂಕಿಅಂಶಗಳನ್ನು ನಮ್ಮ ಅಧಿಕಾರಿಗಳು ತಮಗೆ ಕೊಡುತ್ತಾರೆ ಎನ್ನುವ ವಿಷಯದಲ್ಲಿ ಸರ್ಕಾರ ಜಾಗರೂಕತೆಯಿಂದ ಇಲ್ಲ ಎಂದು ಹೇಳಬೇಕಾಗಿದೆ. ಮಳೆ ಬೀಳದೆ, ಬೆಳೆ ಆಗದೆ ಇರತಕ್ಕ ಪರಿಸ್ಥಿತಿಯನ್ನು ನಿಜವಾಗಿಯೂ ಅಧಿಕಾರಿಗಳು ತಮ್ಮ ಗಮನಕ್ಕೆ ತರುವುದಿಲ್ಲ. ಅಭಾವ ಪರಿಸ್ಥಿತಿ ಇದೆ ಎಂದು ಜನಗಳು ಬೊಬ್ಬೆ ಇಟ್ಟಾಗ ತಾವೂ ಹಳ್ಳಿಯ ಕಡೆ ಬಂದು ಅಲ್ಲಿರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ವಿಪುಲವಾಗಿ ಚರ್ಚೆ ನಡೆಸಿದರೂ ಅಧಿಕಾರಿಗಳು ಕೊಡತಕ್ಕ ಅಂಕಿಅಂಶಗಳು ಬಹಳ ತಪ್ಪಾಗಿರುತ್ತವೆ. ಉದಾಹರಣೆಯನ್ನು ಹೇಳುವುದಾದರೆ ತುಮಕೂರು ಜಿಲ್ಲೆ ಬಹಳ ವರ್ಷಗಳಿಂದ ಅಭಾವಕ್ಕೆ ತುತ್ತಾಗುತ್ತಿದೆ. ಆ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದರೂ ಸರಿಯಾದ ರೀತಿಯಲ್ಲಿ ಶಾಶ್ವತವಾದ ಪರಿಹಾರ ಮಾರ್ಗವನ್ನು ಹುಡುಕದೆ ಇರುವುದು ಸರ್ಕಾರಕ್ಕೆ ಗೊತ್ತಿದೆ. ಆದರೆ ಯಾವ ಸಹಾಯವನ್ನೂ ಸರ್ಕಾರ ಮಾಡಿಲ್ಲ. ಈ ಸರ್ಕಾರ ಮೊಟ್ಟಮೊದಲನೆಯದಾಗಿ ತಪ್ಪು ಅಂಕಿ ಅಂಶಗಳನ್ನು ಕೊಡುವುದನ್ನು ತಪ್ಪಿಸಬೇಕೆಂದು ನನ್ನ ಅಭಿಪ್ರಾಯ.

ಈ ಸಂದರ್ಭದಲ್ಲಿ ಸರ್ಕಾರ ನೇರವಾಗಿ ಶಾಶ್ವತ ಪರಿಹಾರ ಮಾರ್ಗವನ್ನು ಹುಡುಕುವುದಕ್ಕೆ ಮೊದಲು ಅಲ್ಲಿ ಆಗಬೇಕಾದ ಶಾಶ್ವತವಾಗಿ ಮಾಡಬೇಕಾದ ಕೆಲಸವನ್ನು ಯಾವುದನ್ನೂ ಇದುವರೆಗೂ ಮಾಡಿಲ್ಲ. ತುಮಕೂರು ಜಿಲ್ಲೆಯಲ್ಲಿ ಕೆರೆಗಳ ದುರಸ್ತಿ ಕಾರ್ಯ ಬಹಳವಾಗಿ ಆಗಬೇಕಾಗಿದೆ. ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕೆರೆಗಳ ಸಂಖ್ಯೆ ಜಾಸ್ತಿ. ಅವುಗಳ ರಿಪೇರಿ ಆಗಿರುವುದಿಲ್ಲ. ಕೆರೆಗಳಲ್ಲಿ ಹೂಳು ತುಂಬಿಕೊಂಡು ಅವೆಲ್ಲ ಮುಚ್ಚಿಕೊಂಡಿರುವ ಪರಿಸ್ಥಿತಿಯನ್ನು ನಾವು ನೋಡಬಹುದು. ಈಗ ಸಣ್ಣ ನೀರಾವರಿ ಮಂತ್ರಿಗಳು, ವ್ಯವಸಾಯ ಮಂತ್ರಿಗಳು, ಕಂದಾಯ ಮಂತ್ರಿಗಳು ಮೂರು ಜನರೂ ಇದ್ದಾರೆ. ಅವರೆಲ್ಲರೂ ಒಟ್ಟಿಗೆ ಸೇರಿ ತುಮಕೂರು ಜಿಲ್ಲೆಯ ಪರಿಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ಅದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ದೊಡ್ಡ ದೊಡ್ಡ ಜಲಾಶಯಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಅದರಲ್ಲಿಯೂ 7,000 ಕೆರೆಗಳಿರತಕ್ಕ ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ 12 ಕೆರೆಗಳನ್ನು ಕೂಡ ಜೀರ್ಣೋದ್ಧಾರ ಮಾಡಿಲ್ಲ. ಸಣ್ಣ ನೀರಾವರಿ ಇಲಾಖೆಯವರು ನಮ್ಮ ಜಿಲ್ಲೆಯ ಕೆಲವು ತಾಲ್ಲೂಕುಗಳಿಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದಾರೆ. ಇದನ್ನು ಮಾಡಿದ ಮೇಲೂ ಸರ್ಕಾರ ಅದಕ್ಕೆ ಬೇಕಾದ ಹಣವನ್ನು ಒದಗಿಸಿಲ್ಲ. ಮೈನರ್ ಇರಿಗೇಷನ್ ಇಲಾಖೆಯವರು ಮಾಡಿರುವ ಯೋಜನೆಯಲ್ಲಿನ ಎಲ್ಲ ಅಂಕಿ ಅಂಶಗಳನ್ನೂ ಸರ್ಕಾರದವರು ಕ್ರೋಢೀಕರಿಸಿ ಅದಕ್ಕೆ ಆಗಬೇಕಾದ ಅಗತ್ಯವಾದ ಹಣವನ್ನಾದರೂ ಒದಗಿಸಿದರೆ ಸ್ವಲ್ಪಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಸುಧಾರಿಸಬಹುದು ಎಂದು ಹೇಳುತ್ತೇನೆ.

ಅಧಿಕಾರಿಗಳು ಹಣವಿಲ್ಲವೆಂದು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಅಂದಾಜುಗಳು ತಯಾರಾಗಿರತಕ್ಕ ಮೂರು ನಾಲ್ಕು ವರ್ಷದ ಕೆಲಸಗಳು ಇದುವರೆಗೂ ಆಗಿದಿಲ್ಲ. 20-30 ಕೆಲಸಗಳು, ಶೀಘ್ರವಾಗಿ ಆಗಬೇಕಾದ ಕೆಲಸಗಳು ಇದುವರೆಗೂ ಮಂಜೂರಾಗದೆ ಇರತಕ್ಕ ಸಂದರ್ಭವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ಅನೇಕ ಸಲ ತಂದಿದ್ದೇವೆ. ಈ ವಿಚಾರದಲ್ಲಿಯೂ ಸರ್ಕಾರದವರು ಯಾವ ಆದೇಶವನ್ನೂ ಅಧಿಕಾರಿಗಳಿಗೆ ಕೊಟ್ಟಿಲ್ಲ, ತ್ವರಿತವಾಗಿ ಆಗಬೇಕಾದ ಕೆಲಸಗಳನ್ನು ಸರಿಯಾಗಿ ನಡೆಸದೆ ಇರತಕ್ಕದ್ದು ಬಹಳ ದುರದೃಷ್ಟಕರ, ಏಕೆಂದರೆ ಅಭಾವ ಪರಿಸ್ಥಿತಿಯನ್ನು ಅರಿತುಕೊಂಡು ಅದನ್ನು ಹೋಗಲಾಡಿಸತಕ್ಕ ಆಡಳಿತ ದಕ್ಷತೆ ಸರ್ಕಾರದಲ್ಲಿ ಇರಬೇಕು.

†Indicates that the remarks or speeches have not been revised by the member concerned.

(ಶ್ರೀ ಕೆ. ಲಕ್ಕಪ್ಪ)

ಇರತಕ್ಕಂಥ ಹಣ ಸರಿಯಾಗಿ ಖರ್ಚುಮಾಡಿ ಅಭಾವ ಪರಿಹಾರ ಮಾಡತಕ್ಕಂಥಾದ್ದು ಒಳ್ಳೆಯದು. ಆದರೆ ಇದುವರೆಗೆ ಮಾಡಿದ ಕೆಲಸವನ್ನು ನೋಡಿದರೆ ನಿರೀಕ್ಷಿಸಿದಷ್ಟು ಕೆಲಸ ಮಾಡಿಲ್ಲವಲ್ಲ ಎಂದು ಬಹಳ ವಿಷಾದವಾಗುತ್ತದೆ. ಅಭಾವ ನೀಗಬೇಕಾದರೆ ರೈತರಿಗೆ ಕೊಡುವ ಪಂಪುಸೆಟ್ಟು ಸರಿಯಾಗಿ ವಿಲೇವಾರಿ ಮಾಡಬೇಕು. ಪಂಪು ಸೆಟ್ಟು ವಿಲೇವಾರಿ ಮಾಡುವುದರಲ್ಲಿ ಬಹಳ ಅನ್ಯಾಯವಾಗುತ್ತಿದೆ. ನೆಲಮಂಗಲಕ್ಕೆ ಪಂಪುಸೆಟ್ಟು ಬಂದರೆ ಅಲ್ಲಿ ತಮಗೆ ಯಾರಿಗೆ ಬೇಕೋ ಅವರಿಗೆ ಕೊಟ್ಟುಬಿಡುತ್ತಾರೆ. ನಿಜವಾಗಿಯೂ ಯಾರಿಗೆ ಬೇಡವೋ ಅವರಿಗೆ ಕೊಡುತ್ತಾರೆ. ಸರಿಯಾಗಿ ವ್ಯವಸಾಯ ಮಾಡುವವರಿಗೆ ಪಂಪುಸೆಟ್ಟು ಕೊಟ್ಟಿಲ್ಲ. ಪಂಪುಸೆಟ್ಟು ಕೊಡುವುದರಲ್ಲಿ ಒಂದು ನಿರ್ದಿಷ್ಟವಾದ ಪದ್ಧತಿ ಇಲ್ಲ. ಪಂಪುಸೆಟ್ಟು ಕೊಡುತ್ತಾರೆಂದು ಜನ ಅರ್ಜಿ ಹಾಕಿದ್ದಾರೆ. ಎಷ್ಟು ಅರ್ಜಿಗಳು ಪೆಂಡಿಂಗ್ ಇವೆ ಎಂಬುದನ್ನು ಆಫೀಸಿನಿಂದ ತರಿಸಿಕೊಂಡು ನೋಡಿಲ್ಲ. ಇದಕ್ಕೆ ಎಷ್ಟು ಹಣ ಸಾಲ ಕೊಡುತ್ತಾರೆ ಎಂಬುದನ್ನು ಸಹ ನಿರ್ದಿಷ್ಟವಾಗಿ ತಿಳಿಸಿಲ್ಲ. ಜನರಲ್ಲಿ ಇರುವ ಆಶೆ ಕೂಡ ನಿರಾಶೆಯಾಗುತ್ತಾ ಬಂದಿದೆ. ಈ ಬಾಬಿಗೆ ಕೊಡುವ ಹಣ ನೇರವಾಗಿ, ಸುಲಭವಾಗಿ, ಅತಿ ಜಾಗ್ರತೆಯಾಗಿ ಸಿಕ್ಕುವ ಹಾಗೆ ಏರ್ಪಾಡು ಮಾಡಿಲ್ಲ. ಪಂಪುಸೆಟ್ಟು ಹಂಚುವ ಕೆಲಸ ಸುವ್ಯವಸ್ಥಿತವಾಗಿ ಆಗಿಲ್ಲ. ದೇಶದಲ್ಲಿರುವ ಇಂಥ ಆಡಳಿತ ಹೋಗಬೇಕು ಎಂದರೆ ಮಾತ್ರ ಒಳ್ಳೆಯದು ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

1-30 P.M.

ಇನ್ನು ತಕಾವಿ ಲೋನ್ ಕೊಡುವ ಬಗ್ಗೆ ಹೇಳುವುದಾದರೆ ಸಾಲ ಕೊಡುವ ಅಧಿಕಾರಿ ಒಬ್ಬನು, ಅದನ್ನು ವಸೂಲ್ಮಾಡುವ ಅಧಿಕಾರಿ ಇನ್ನೊಬ್ಬನು. ಈ ಸಾಲಕ್ಕೆ ಅರ್ಜಿ ಹಾಕಿ ಅದು ದೊರೆಯ ಬೇಕಾದರೆ ಒಂದು ವರ್ಷವಾಗುತ್ತದೆ. ಹಣ ಹೊತ್ತಿಗೆ ಸರಿಯಾಗಿ ದೊರೆಯದ ಮೂಲಕ ಅಭಾವ ಪರಿಸ್ಥಿತಿಯಿಂದ ರೈತ ಸತ್ತುಹೋಗುತ್ತಾನೆ. ರೈತನಿಗೆ ಹಣ ನೇರವಾಗಿ ಸಿಕ್ಕುವುದಿಲ್ಲ. ಸರಿಯಾಗಿ ಹಂಚುತ್ತಿಲ್ಲ. ಆದುದರಿಂದ ಈ ವಿಚಾರದಲ್ಲಿ ಒಂದು ಸೂಕ್ತವಾದ ವ್ಯವಸ್ಥೆ ಮಾಡಬೇಕಾದುದು ಬಹಳ ಅಗತ್ಯವಾದುದು. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಭೇಟಿ ಕೊಟ್ಟಾಗ್ಗೆ ಮೈನರ್ ಮತ್ತು ಮೇಜರ್ ಇರಿಗೇಶನ್ ಪ್ರಾಜೆಕ್ಟ್ ಬಗ್ಗೆ ಹೇಳುತ್ತಾ ತುರ್ಕಕರ ಪಾಳ್ಯ ಯೋಜನೆ ಮಾಡಿ ಕೊಡುತ್ತೇವೆಂದು ಹೇಳಿದ್ದರು.

Mr. SPEAKER.—I am not allowing the member to speak further. He is simply digressing. He has no remarks on the subject. He must cultivate better habits.

Sri K. LAKKAPPA.—What bad habit have I cultivated? I want a clarification from the Chair.

Mr. SPEAKER.—The Hon'ble Member wants to contradict. It has become a habit with the member. I request him to be careful.

Sri K. LAKKAPPA.—I am not making any insinuation against the Chair.

Mr. SPEAKER.—How many times am I to tell the Hon'ble Member not to make commentaries?

Sri K. LAKKAPPA.—Why the Chair is not courteous towards me?

Mr. SPEAKER.—Order, order. Sri R. M. Desai may speak.

† R. M. DESAI (Bilgi).—I just confine myself to a few suggestions as to how we should be able to remove the scarcity conditions once and for all. We think of scarcity measures when scarcity arises. For the last 16 years soon after Independence we have been sending our district-wise plans to Government for complete eradication and I know that it is not also possible, looking to the financial position of Government, to take up all the schemes at the same time. But still instead of scarcity measures being adopted when scarcity arises, it is better to think of scarcity eradication schemes. I wish to make a few suggestions. I do not think

it is only natural calamity that is responsible for scarcity; there are many other reasons for scarcity conditions to prevail. I will quote one or two instances. The method of storing foodgrains is not efficient and effective. We are trying to protect crops from pests. The farmers are getting well versed in the methods of protecting crops from pests. We have not been able to devise ways and means to preserve the foodgrains in a better manner. We must make the farmers know the proper method of storing foodgrains. I think there is considerable loss of foodgrains in storing them. There is a lot of wastage of food also. We Indians usually are very liberal people. In marriages and on other occasions when we invite people, we usually spend a lot of food. We waste a lot of food, rather than utilise it properly. In foreign countries, they have practically relieved the housewife of the labour of cooking. They cook food required for the family in five minutes; they do several other things for their own development. But what we do in our own country is, that we are actually wasting much of the food. Looking actually to the scarcity measures to be adopted, I think Government have given due impetus to the well scheme which is going on in a better manner and we are proud to say that we have got many wells and we are doing better in that direction. But much of the help depends upon the Centre; the State Government should pull up itself to take more funds from the Centre and give us liberally. The method of taking taccavi has been rather a little cumbersome. Usually when a cultivator applies for taccavi loan, furnishing security was rather cumbersome; but thanks to the present rule, actually, the well will be taken as security.

There has been a little trouble for the cultivators to get copies of the record of rights, when they apply for the same. I wish to make one suggestion in this connection. If I as a farmer make an application, the required copy with regard to my holdings should be available at the respective office itself; I should not be made to run about for getting a copy of it, because usually we experience a lot of difficulty. We hear many stories about those things. Copies of the record of rights should be with the offices themselves. About scarcity measures being adopted now, in our parts, a sort of bunding scheme is being carried out. I feel that the cost of it should not be recovered from the cultivator. We put up many roads during scarcity time and we take it in the works account and we do not collect it. This sort of bunding works taken up during scarcity time gives protection to them. In our side, there is what is called Haryali scheme which is useful during scarcity time. Even a loan may be given for this purpose.

Many big projects are being taken up for providing irrigation facilities. Unfortunately under the Malaprab'a scheme only the right bank is being given attention. We want the left bank canal to be taken hand-in-hand with the right bank. There is a lot of scope for irrigation under the left bank. If we consider the topography, the soil and other factors, we will find that the left bank area is eminently suited for irrigation. That area must be surveyed and must be brought to the

(SRI R. M. DESAI)

notice of the Government of India. We have already submitted plans and schemes to the Chief Minister but nothing has come out. I request the Government to view the problem seriously.

Regarding financial assistance given to the cultivators, the society charges the cultivators 7 per cent whereas the Reserve Bank charges only 3 per cent. Why should the cultivators be burdened with an additional 4 per cent simply because the money will have to pass through the Appex Bank, the District Bank and then the society? The load on the farmer is considerable.

We have submitted to Government a consolidated scheme for famine eradication. There is no use of meeting the problem as and when it arises. I do not want to dwell upon it for want of time and I request the Government to study the scheme we submitted and render the necessary assistance.

†SRI B. R. SUNTHANKAR (Belguam City).—Sir, this is the fourth or fifth time that the House is discussing the famine situation, since 1957. That means famine has been a recurring phenomenon in the State. Every two or three years we discuss famine conditions in the State. Famine may be dry or famine may be wet; famine may be due to want of rains or due to heavy rains. Both these we have discussed in this House. Two years back in 1961, this House discussed the famine caused by heavy floods in the State. Famine has been a constant threat hanging over the people of the State and some continuous, permanent measures will have to be adopted to counter the threat of famine. Whenever famine occurs in any area, relief is given. After the critical situation is over, and the tide has been overcome, everything quietens down. There is a saying in Marathi which means to dig well. when one feels thirsty. This is not a good policy. There is urgent need to adopt permanent measures to meet the situation brought about by famine. Unfortunately, our agriculture, in spite of the big projects and minor irrigation works, depends upon the vagaries of rain Still we have to depend upon rains. Our primary concern therefore should be to conserve water that we get from rain in the soil. This conservation may be through river valley projects, reservoirs, dams, wells etc., one thing we must remember is that. Irrigation alone will not solve the problem. According to the figures we get, only 7. 4 or say 8 percent of the cultivable land has been brought under irrigation. By the end of the third plan, if all the projects are carried out according to the schedule, 12. 5 percent will be brought under irrigation. If all the river projects in the State are executed we may reach the maximum figure of 25 percent of cultivable land being brought under irrigation. Therefore 75 percent of the land will still remain unirrigated. In this 75 percent there will always be the threat of famine. The first way to meet the problem is by bringing the maximum land under irrigation. as early as possible Next is to explore all possible water resources in the State, to construct now reservoirs where possible, to dig tube wells where it would be

successful; to have as many river pump sets as possible and finally disilt tanks thought it is costly. The AGR Committee has recommended that it will have to be undertaken. A phased programme to desilt tanks should be taken up.

Another thing that is needed is, tapping of the sub-soil water through wells and by sinking wells. That is being followed now, but it will have to be expedited on a greater scale. The next thing and which is most important for 75 per cent of the unirrigated land is the programme of soil conservation. This soil conservation programme was in existence on a priority basis in the Bombay State, particularly in Sholapur and Bijapur Districts. After the re-organisation of States, the soil conservation programme is lagging behind and is being neglected in the State. Surveys carried in former Bombay state have shown that in these scarcity and famine areas, there is a good deal of erosion of soil. Though these are scarcity areas, whenever rain occurs, it occurs heavily and erodes the soil. Survey has shown that in these areas, 2/3rds of the land was damaged by erosion and 1/3rd of the land was rendered useless for agricultural purposes whenever rains occur. In Sholapur and Bijapur Districts, a very valuable work, in respect of soil conservation, was being done in the former Bombay State and the results were also very good. But, those schemes are not being properly followed up after the re organisation of States. In the Third Five Year Plan, a number of schemes are there, but they are not being executed. I would like to know from the Government as to how many of these soil conservation schemes have been undertaken by the Government and what is the progress achieved since the Third Five Year Plan was started. There is lack of qualified staff. I know that some of the schemes were not undertaken at all for want of qualified staff. There is a soil Conservation Training and Investigation Centre at Bellary. That is one of the important centres in the whole of India from the point of view of soil conservation. But, what use is being made of this Centre by the State Government, I would like to know. Sir, our plans have been laying greater emphasis on the soil conservation programme. The Third Plan lays emphasis on setting up strong Soil Conservation Organisation in each and every State and it also urges people's participation. To have this, to a larger extent, there must be educational programme. People should be educated to know that soil conservation is one of the urgent needs of the famine areas. As regards soil conservation, three programmes will have to be seriously undertaken by the Government, (1) aforestation of waste land, by contour trenching and (2) contour bunding. Items (1) and (2) have been found useful in scarcity areas of the former Bombay State. All these programmes will have to be very seriously carried out. (3) Research work. There is need for research and investigation in this respect. As one of the Members has already pointed out, soil survey in the whole of the State should be undertaken. That will help to remove deficiency in soil. Our soil is lacking in organic matter. We cannot conserve as much moisture in out soils as possible. That fact will have to be dealt with, and soil survey will help us in this

(SRI B. R. SUNTHANKAR)

regard. As I have already said, we will have to explore the possibility of sub-soil water by means of water tube wells reservoirs.

One more important point I wish to stressdraught resistant varieties of crops will have to be formed out. Draught resistant strains would help us to overcome draught conditions. That is the work of the Agriculture Department and it is very important. I do not know how far the Agriculture Department has been progressing in this respect. The Agriculture Department will have to take up this work very seriously. Then, the question of flood control is there. Flood control measures will have to be followed and they have to be undertaken. We had bitter experience of this during 1961–62 and that experience will have to be followed up and some measures will have to be undertaken in right earnest.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಅಧ್ಯಕ್ಷರೇ: ರಾಜ್ಯದಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬಾರದೆ ಫಸಲುಗಳೆಲ್ಲ ಒಣಗಿ, ತುರ್ತಾಗಿ ರಾಜ್ಯದಲ್ಲಿರತಕ್ಕ ರೈತರು ಕಳವಳಪಡುತ್ತಿರುವಂಥ ಈ ಸಂದರ್ಭದಲ್ಲಿ ಈ ನಿರ್ಣಯವನ್ನು ಶ್ರೀ ಹುಚ್ಚಮಾಸ್ತಿಗೌಡರು ತಂದಿರುವುದರಿಂದ ನಾನು ಇದನ್ನು ಸ್ವಾಗತಿಸುತ್ತೇನೆ–ಹಾಗೂ ಇಲ್ಲಿಗೆ ಆರೂವರೆ ದಿವಸಗಳಿಂದ ಮಳೆ ಬೇರೆ ಷುರುವಾಗುತ್ತಾ ಬಂದಿದೆ. ಈ ಮಳೆ ಬಹುಶಃ 20 ದಿವಸಗಳ ಕೆಳಗೇ ಬಂದಿದ್ದರೆ ಇಂಥ ಒಂದು ಚರ್ಚೆಮಾಡುವ ಅವಕಾಶ ಇಲ್ಲಿ ಬರುತ್ತಿತ್ತೋ ಇಲ್ಲವೋ. ಆದರೆ–ಈ ದಿವಸದ ಸ್ಥಿತಿಯನ್ನು ನೋಡಿದರೆ ರೈತರಿಗೆ ಸ್ವಲ್ಪ ಮಟ್ಟಿಗೆ ಸಮಾಧಾನ ಉಂಟಾಗಿದೆ ಎಂದು ಕಂಡುಬರಬಹುದು. ಆದರೆ ಇದು ಹೇಗಿದೆ ಎಂದರೆ-ತಕ್ಷಣ ಹೋಗ ತಕ್ಕ ಜೀವ ಸ್ವಲ್ಪ ಮಟ್ಟಿಗೆ ಉಳಿದಂತಾಗಿದೆ ಅಷ್ಟೇನೆ. ಈ ದಿವಸ ಇಷ್ಟು ಮಳೆ ಬಂದರೂ ಒಂದು ಸಾರಿ ಒಣಗಿ ಬೆಂಡಾದ ಫಸಲಿಗೆ ಬಿಷ್ಟೆ ಸ್ವಲ್ಪ ತಂಪಾದರೂ ರೈತನಿಗೆ ಅಷ್ಟು ಫಲವತ್ತಾಗಿ ಫಸಲು ಬರುವುದಿಲ್ಲ. ಹೀಗೆ ರಾಜ್ಯದ ಪರಿಸ್ಥಿತಿ ಹದಗೆಡುತ್ತಿರುವಾಗ ಈ ಬಹು ಸಂಖ್ಯಾತ ರೈತವರ್ಗದ ಒಂದು ಅಳಿವು–ಉಳಿವಿನ ಪ್ರಶ್ನೆಯಾಗಿ ಇದನ್ನು ನೋಡತಕ್ಕಂಥ ಸಂದರ್ಭ ಹಾಗೂ ಒಂದು ದೊಡ್ಡ ಜವಾಬ್ದಾರಿ ರೆವಿನ್ಯೂ ಖಾತೆಯನ್ನು ಹೊತ್ತಿರತಕ್ಕ ಶ್ರೀ ಕೃಷ್ಣಪ್ಪನವರ ಮೇಲೆ ಬಿದ್ದಿದೆ. ಎಲ್ಲ ಖಾತೆಗಳಿಗಿಂತಲೂ ಬಹು ಮುಖ್ಯವಾದುದೆಂದರೆ ಅದು ಈ ರೆವಿನ್ಯೂ ಖಾತೆ. ಈಗ್ಗೆ ಕೆಲವು ದಿನಗಳ ಕೆಳಗೆ ರೈತನಮೇಲೆ ಆತನು ತರುತ್ತಿದ್ದ ಕಂದಾಯವೇನಿತ್ತು ಅದನ್ನು ಒಂದಕ್ಕೆ ಎರಡರಷ್ಟು ಮಾಡಿದ್ದೇವೆ. ಹಿಂದೆ ಮಳೆ ಬೆಳೆಗಳು ಸಂಮೃದ್ಧಿಯಾಗಿದ್ದ ಕಾಲದಲ್ಲೇ ಆತನು ಒಂದು ಪಟ್ಟು ಹಾಕಿದ್ದ ಕಂದಾಯವನ್ನೇ ಕೊಡಲು ಶಕ್ತಿ ಇಲ್ಲವೆಂದು ಹೇಳುತ್ತಿದ್ದಾಗ್ಯೂ ಈಗ ನಾವು ಅದನ್ನು ಒಂದಕ್ಕೆ ಎರಡರಷ್ಟು ಹೆಚ್ಚು ಮಾಡಿದ್ದೇವೆ. ಇದನ್ನು ಕೊಡಲು ರೈತನಿಗೆ ಖಂಡಿತ ಚೈತನ್ಯವಿಲ್ಲ,

ಇನ್ನೂ ಎರಡುಪಟ್ಟು ಕಂದಾಯದ ಹೊರೆಯನ್ನು ಹೆಚ್ಚಿಸಿದ ಸ್ವಲ್ಪ ಕಾಲದಲ್ಲೇ ಇಡೀ ರಾಜ್ಯದಲ್ಲೆಲ್ಲ ಇಂತಹ ಕ್ಷಾಮ ಬಂದು ರೈತ ಕಳವಳಪಡತಕ್ಕ ಈ ಸಂದರ್ಭದಲ್ಲಿ ರೆವೆನ್ಯೂ ಸಚಿವರು ಬಹಳ ದೀರ್ಘವಾಗಿ ಇದನ್ನು ಯೋಚನೆಮಾಡಬೇಕಾಗಿದೆ. ಹಾಗೆ ಯೋಚನೆಮಾಡಿ ಎರಡನೇ ಸಾರಿ ಕಂದಾಯದ ಒಂದಕ್ಕೆರಡರಷ್ಟು ಡಬ್ಬಲ್ ಆಗಿ ವಿಧಿಸಿರತಕ್ಕ ಸರ್‌ಚಾರ್ಜ್ ಕಂದಾಯವನ್ನು ತಾವು ದಿಟ್ಟತನದಿಂದ ವಜಾ ಮಾಡತಕ್ಕ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಈ ಒಂದು ವಿಷಯವನ್ನು ಬಹಳ ಸಂಕಟದಿಂದ ಮಂತ್ರಿಗಳ ಗಮನಕ್ಕೆ ತರುವ ಉದ್ದೇಶದಿಂದ ಹೇಳಿ ಕೊಳ್ಳುತ್ತಿದ್ದೇನೆ. ಮಾನ್ಯ ಸಚಿವರು ನಾನು ಈ ವಿಚಾರದ ಬಗ್ಗೆ ಇಲ್ಲ ಮಾತನಾಡುವಾಗ, ಏಕೆ ಮಾತನಾಡುತ್ತೀರಿ ಭದ್ರಾವತಿಯಲ್ಲೇನಿದೆ ಎಂದರು.

ಶ್ರೀ ಎಂ. ವಿ ಕೃಷ್ಣಪ್ಪ.—ದೇವೇಂದ್ರನೇ ಮಳೆಯನ್ನು ತರುತ್ತಿರುವಾಗ ನೀವೇ ಮಳೆ ಬರಲಿಲ್ಲ ಎಂದು ಹೇಳುತ್ತೀರಾ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಾಜ್ಯದಲ್ಲೆಲ್ಲಾ ಅಭಾವ ಪರಿಸ್ಥಿತಿಯಿಂದಾಗಿ ಎಲ್ಲ ಕ್ಷೇತ್ರದವರು ಇಲ್ಲಿ ಮಳೆ ಬರಲಿಲ್ಲ ಎಂದು ಮೂರು ದಿನಗಳಿಂದ ಹೇಳುತ್ತಿದ್ದಂತೆ ಇಂದಿನಿಂದ ಮಳೆ ಷುರು ಆಯಿತು. ಭದ್ರಾವತಿ, ಹಾಗೂ ಶಿವಮೊಗ್ಗಾ ಜಿಲ್ಲೆಯ ಭಾಗಗಳಲ್ಲ ಭದ್ರ ತುಂಗಾ ಜಲಾಶಯಗಳು ಮತ್ತು ಅಣೆಕಟ್ಟುಗಳು ಆಗಿರುವುದೇನೋ ನಿಜ ಆದರೆ ಈ ಜಲಾಶಯದಿಂದ ಎಲ್ಲ ಭೂಮಿಗೂ ನೀರು ಹಾಯಿಸಲಿಕ್ಕೆ ಆಗಲಿಕ್ಕಿಲ್ಲ. ಎಷ್ಟು ಭೂಮಿಗೆ ನೀರು ಹಾಯಬೇಕೋ ಅಷ್ಟು ಆಹಾರ ಧಾನ್ಯ, ಬತ್ತ ಬೆಳೆಯಲು ಆಗುತ್ತಿಲ್ಲ. ಏಕೆಂದರೆ ಅದಕ್ಕೆ ನಾನಾನಮೂನೆಯ ರೋಗಗಳು

ತಗಲುತ್ತಿವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮೀಕಾಂತಪ್ಪನವರು ಹೇಳಿದಹಾಗೆ, ಬೆಂಕಿ ರೋಗ ಸಿಡುಬು ರೋಗ ಎಂದು ಬರುತ್ತದೆ. ಭತ್ತದ ಹೊಡೆ ಬರುವಾಗ ಗಣೆ ರೋಗ ಎಂದು ಬರುತ್ತದೆ ಇದರಿಂದಾಗಿ ಫಸಲು ಹಾಳಾಗುತ್ತದೆ. ಇದನ್ನೆಲ್ಲಾ ತಡೆಗಟ್ಟಲು ವ್ಯವಸಾಯ ಇಲಾಖೆಯವರು ಎಷ್ಟು ಮಟ್ಟಿನ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈ ಸಂದರ್ಭ ದಲ್ಲಿ ನಾನು ಹೇಳುವುದಿಲ್ಲ. ಇಂತಹ ರೋಗಗಳಿಗೆ ತುತ್ತಾಗಿರುವ ಎಷ್ಟೋ ನಿದರ್ಶನಗಳು ನಮ್ಮ ಲ್ಲುಂಟು. ಸಾಮಾನ್ಯವಾಗಿ ಹೊರಗಡೆಯಿಂದ ಬರತಕ್ಕ ನೀರನ್ನು ಹಾಯಿಸಿಯಾದರೂ ವ್ಯವಸಾಯ ಮಾಡಿದರೆ ಅದರಿಂದ ಬರುವ ಫಸಲು ಅಷ್ಟು ಚೆನ್ನಾಗಿ ಬರಲಾರದು. ಆಗ ತಾನೇ ಹುಟ್ಟಿದ ಮಗು ವಿಗೆ ತಾಯಿಯ ಹಾಲು ಶ್ರೇಷ್ಠವಾಗಿರುತ್ತದೆಯೇ ಹೊರತು ಬೇರೆ ಹಾಲನ್ನು ಕೊಡುವುದು ಸರಿ ಯಾಗುವುದಿಲ್ಲ. ಹಾಗೆ ನಾಲೆಯಿಂದ ಎಷ್ಟೇ ನೀರು ಹಾಯಿಸಿದರೂ, ಮಳೆಯ ನೀರು ಫಸಲು ಮಾಡಲಿಕ್ಕೆ ಅತ್ಯಗತ್ಯವಾಗಿಬೇಕು. ನೀರಿಲ್ಲದೆ ಯಾವ ಫಸಲೂ ಚೆನ್ನಾಗಿ ಬರಲಾರದು. ಇಂತಹ ಕಷ್ಟಗಳಲ್ಲಿ ಸರ್‌ಚಾರ್ಜ್ ವಿಧಿಸತಕ್ಕದ್ದನ್ನು ತಾವು ಮನ್ನಾ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿರುವ ಆನೆಗೊಂದಿ ಹಳ್ಳ ಮತ್ತು ತೊರೆ ಹಳ್ಳದ ಯೋಜನೆಯನ್ನು ಕೈಗೊಳ್ಳಬೇಕೆಂದಿದ್ದರೂ ಅದನ್ನು ಕಾರ್ಯಗತ ಮಾಡಿಲ್ಲ. ಇದು ಮೈನರು ಇರಿಗೇಷನ್ ಯೋಜನೆ ಯಾಗಿರುವುದರಿಂದ ಇವೆರಡು ಕಾರ್ಯಕ್ರಮಗಳನ್ನು ಮಾಡಿ ಕೊಡ ಬೇಕೆಂದು ನನ್ನ ಸೂಚನೆ. ನಮ್ಮ ಭಾಗದಲ್ಲಿ ಕೆಲವು ಕಡೆ ದೊಡ್ಡ ದೊಡ್ಡ ಕೆರೆಗಳಿವೆ. ಈ ಕೆರೆಗಳು ಸುಮಾರು 360 ದಿನ ಕಾಲವೂ ನೀರಿನಿಂದ ತುಂಬಿ ಕೊಂಡಿದ್ದರೂ ಇವುಗಳಿಂದ ಪ್ರಯೋಜನವಿಲ್ಲ ದಂತಾಗಿದೆ. ಇಂತಹ ಪರಿಸ್ಥಿತಿ ಇರುವಾಗ ಯಾವ ಯಾವ ಕೆರೆಗಳನ್ನೂ ಒಡೆಯಬೇಕು ಅಥವಾ ಬ್ರೀಚ್ ಮಾಡಬೇಕು ಎನ್ನುವುದನ್ನು ನೋಡಿ ಅಲ್ಲಿನ ಭೂಮಿಯನ್ನು ಅಸ್ಥಳದಲ್ಲಿರುವ ಭೂಹೀನರಿಗೆ ಕೊಟ್ಟಿದ್ದಾದರೆ ಉಪಯೋಗವಾಗುತ್ತದೆ. ಇದನ್ನೆಲ್ಲಾ ಮಾನ್ಯ ಮಂತ್ರಿಗಳು ವ್ಯವಸ್ಥೆ ಮಾಡು ತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಸುಮಾರು ಮೊನ್ನೆಯಿಂದ ಇಲ್ಲಿ ಸದಸ್ಯರೆಲ್ಲಾ ಕ್ಷಾಮದ ವಿಷಯವನ್ನು ಮಾತನಾಡುತ್ತಿದ್ದಾರೆ. ಸುಮಾರು ಪ್ರತಿ ವರ್ಷವೂ ಶಾಸನ ಸಭೆ ಸೇರಿದಾಗ ಕ್ಷಾಮ ಪರಿಸ್ಥಿತಿ, ಎಂಬ ವಿಷಯವನ್ನೂ ಸಭೆಯ ಮುಂದೆ ಇಡಬೇಕಾದ ಸಂಭವ ಇತ್ತೀಚೆಗೆ ಕಾಣುತ್ತದೆ. ಪೂರ್ವದಲ್ಲೇನೋ ಕ್ಷಾಮ ಬಂದಾಗ ಜನಗಳು ದೇವರ ಪ್ರಾರ್ಥನೆ ಮತ್ತು ಯಜ್ಞಯಾಗಾದಿಗಳನ್ನು ಮಾಡುತ್ತಿದ್ದರು. ಇತ್ತೀಚೆಗೆ ಈ ಕ್ಷಾಮ ಎಂಬುದು ಸಲ ಸಲವೂ ಬಂದು ಬಹುಪಟ್ಟಿಗೆ ಇದ್ದ ಕೆರೆ ಕಟ್ಟೆಗಳೆಲ್ಲಾ ಒಣಗಿ ಹೋಗತ್ತಿವೆ. ಪ್ರಜಾ ಪ್ರಭುತ್ವ ಬಂದು ಹದಿನಾರು ವರ್ಷದ ಮೇಲೆ ಜನ ಕ್ಷಾಮದ ಕಷ್ಟಗಳನ್ನು ಅನುಭವಿಸುತ್ತಲೇ ಇದ್ದಾರೆ ಈ ದೇಶದಲ್ಲಿ ಇನ್ನು ಮುಂದಾದರೂ ಇದು ಬಾರದಂತೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಅವರಿಗೆ ನನ್ನ ಪ್ರಾರ್ಥನೆ ಸಲ್ಲಿಸುತ್ತೇನೆ.

ಸರಕಾರದವರು ಅನೇಕ ಯೋಜನೆಗಳನ್ನು ಹಾಕಿಕೊಂಡು ವ್ಯವಸಾಯವನ್ನು ಅಭಿವೃದ್ಧಿ ಮಾಡಿ ಕ್ಷಾಮ ಬಾರದ ಹಾಗೆ ಮಾಡಬೇಕು, ಎಂದು ಅನೇಕ ಸಾರಿ ಹೇಳಿದರೂ ಅವರು ಸರಿಯಾದ ಒಂದು ವ್ಯವಸ್ಥಿತವಾದ ಯೋಜನೆಯನ್ನು ಹಾಕಿಕೊಂಡಿಲ್ಲ. ಅನೇಕ ತರದಲ್ಲಿ ಹಣ ದುರ್ವ್ಯಯವಾಗಿ ರೈತ ರಿಗೆ ಬೇಕಾದ ಸೌಲಭ್ಯಗಳನ್ನು ಮಾತ್ರ ಒದಗಿಸಿಲ್ಲ, ಇದರಿಂದಾಗಿ ದೇಶ ಕ್ಷಾಮಕ್ಕೆ ತುತ್ತಾಗುತ್ತಿದೆ. ಇದನ್ನು ತಡೆಯಲು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಬೇಕು, ಎಂದು ಅನೇಕ ಯೋಜನೆಗಳಿದ್ದಾಗ್ಯೂ ಕೂಡ ಕೆಲವನ್ನು ತಾಲ್ಲೂಕು ಬೋರ್ಡಿನವರಿಗೆ ವಹಿಸಿದ್ದಾರೆ. ಅವರು ಹೇಳುತ್ತಾರೆ, ಇದನ್ನು ಮಾಡಲು ಸರಕಾರದಿಂದ ದುಡ್ಡು ಬಂದಿಲ್ಲ ಎಂದು ಐದು-ಆರು ತಿಂಗಳಾದ ಮೇಲೆ ದುಡ್ಡು ಬಂದಿದ್ದರೂ ಅವರು ಅದನ್ನು ಖರ್ಚುಮಾಡುವುದಕ್ಕಾಗಲಿಲ್ಲ, ಇದಕ್ಕೆ ಬೇಕಾದ ತಾಂತ್ರಿಕ ಸಿಬ್ಬಂದಿ ಇಲ್ಲ ಎಂದು ಮತ್ತೊಂದು ಸಾರಿ ಹೇಳುತ್ತಾರೆ. ಹೀಗೆ ಇವರು ಅವರ ಮೇಲೆ, ಅವರು ಇವರ ಮೇಲೆ, ಒಬ್ಬರ ಮೇಲೆ ಇನ್ನೊಬ್ಬರು ಹೇಳಿಕೊಂಡು ಬರುತ್ತಿದ್ದಾರೆ. ಕಾರ್ಯಗತ ಮಾಡುವುದಕ್ಕೆ ಇನ್ನು ಸರಕಾರ ಕಾರ್ಯಕ್ರಮ ತೆಗೆದು ಕೊಳ್ಳಬೇಕೇ ಬೇಡವೇ ಎನ್ನುವುದನ್ನೂ ಯೋಚನೆಮಾಡಿಲ್ಲ.

ಈಗಾಗಲೇ ಸರಕಾರ ಬೆಂಗಳೂರು ಸರ್ಕಲ್‌ನಲ್ಲಿ ಒಂದು ನಿಯೋಜಿತ ಯೋಜನೆ ಹಾಕಿ ಕೊಂಡು ಎಲ್ಲೆಲ್ಲಿ ನೀರಾವರಿ ಸಾಧ್ಯವಿದೆ ಎನ್ನುವುದನ್ನು ಸರ್ವೆ ಮಾಡುತ್ತಿದ್ದಾರೆ. ಆದರೆ ಸರಕಾರ ದವರು ಇದುವರೆಗೆ ಲಕ್ಷ್ಯ ಕೊಟ್ಟು ಸಾಕಷ್ಟು ಹಣವನ್ನು ಒದಗಿಸಿಲ್ಲ. ಇದನ್ನು ಕಾರ್ಯಗತ ಮಾಡುವಾಗ ಬಾವಿಗಳನ್ನು ಮಾಡಿ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತ ಸರಕಾರದವರು ಒಂದು ಬಾವಿಗೆ ಕೇವಲ 3,000 ರೂಪಾಯಿಗಳಷ್ಟು ಸಾಲ ಕೊಡುತ್ತಾರೆ. ಆದರೆ ಈ ಬಾವಿಗಳನ್ನು ತೆಗೆದುಕೊಳ್ಳಲು ಚೈತನ್ಯ ವಿರತಕ್ಕವರು ಮಾತ್ರ ಬಾವಿ ತೆಗೆಸಲು ಪ್ರಯತ್ನ ಮಾಡಬಹುದು. ಅವರಿಗಾಗಿ ಕೊಡತಕ್ಕ 3,000 ರೂಪಾಯಿಗಳಿಂದ ಬಾವಿಯನ್ನು ಪೂರ್ತಿಮಾಡಿ ಅದರ ಫಲ ಪಡೆಯು

(ಶ್ರೀ ಕೆ. ಸಿ. ರೇವಣಸಿದ್ದಪ್ಪ)

ವುದಕ್ಕೆ ಸಾಧ್ಯವಿಲ್ಲ. ಬಾವಿಯನ್ನು ಕೂಡ ಆರು ತಿಂಗಳಿನಲ್ಲೇ ತೆಗೆಸಿ ಮುಗಿಸಬೇಕೆಂದು ಬೇರೆ ಹೇಳುತ್ತೀರಿ. ಒಂದು ಪಕ್ಷ ಮುಗಿಸಿದರೂ ಬಾವಿಯಿಂದ ನೀರನ್ನೆತ್ತಲು ಪಂಪುಗಳಿರುವುದಿಲ್ಲ ಅದಕ್ಕೆ ರೈತನಲ್ಲಿ ದುಡ್ಡು ಇರುವುದಿಲ್ಲ. ಇದಕ್ಕೆ 500 ರೂಪಾಯಿಗಳಷ್ಟು ಸಬ್ಸಿಡಿ ಎಂದು ಕೊಡುತ್ತಾರೆ. ಆದರೆ ಪಂಪು ಸೆಟ್ಟುಗಳನ್ನು ಕೊಳ್ಳುವಾಗ ಇಂತಹವೇ ಪಂಪು ಸೆಟ್ಟುಗಳನ್ನು ಕೊಳ್ಳಬೇಕೆಂದು ನಿರ್ಬಂಧ ಮಾಡಿದರೆ ಹೇಗೆ? ಇದು ಸರಿಯಾಗಿ ನಡೆಯುವುದಿಲ್ಲ ಎನ್ನುತ್ತಾರೆ. ಅವರು ತಮಗೆ ಬೇಕಾದ ಯಾವುದೇ ಕಂಪನಿಯಿಂದವಾದರೂ ಕೊಂಡುಕೊಳ್ಳಲಿ. ರೈತರಿಗೆ ಕೊಡುವ ಹಣವನ್ನು ಈ ಯಾವ ನಿರ್ಬಂಧವಿಲ್ಲದೆ ಕೊಟ್ಟರೆ ಒಳ್ಳೆಯದು ಎಂದು ನನ್ನ ಸಲಹೆ.

ಎರಡನೆಯದು ಈ ಪಂಪು ಸೆಟ್ಟನ್ನು ತರುವುದಕ್ಕೆ ಟ್ರಾನ್ಸ್‌ಪೋರ್ಟ್ ಚಾರ್ಜ್ ಎಂದು ಸುಮಾರು 100 ರೂಪಾಯಿಗಳಷ್ಟು ಎಂದು ಹಾಕುತ್ತಾರೆ. ಪಂಪು ಸೆಟ್ಟುಗಳನ್ನು ತರುವುದಕ್ಕೆಂದು ಹೋದಾಗ ಪಂಪನ್ನು ಒಂದು ಸಾರಿ, ಇಂಜಿನ್ನನ್ನು ಒಂದು ಸಾರಿ, ಸ್ಟಾರ್ಟರನ್ನು ಒಂದು ಸಾರಿ, ಹೀಗೆ ತರಬೇಕು. ಹಾಗೆ ಒಂದು ವೇಳೆ ಕಷ್ಟಪಟ್ಟು ಎಲ್ಲವನ್ನು ಶೇಖರಿಸಿಟ್ಟುಕೊಂಡರೂ ಇಲಾಖೆಯವರು ನಮ್ಮಲ್ಲಿ ವೈರ್ಸ್ ತಂದಿಲ್ಲ ಎನ್ನುತ್ತಾರೆ ಉದಾಹರಣೆಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ವೈರುಗಳ ಕೆಲಸ ಪೂರ್ತಿಯಾಗ, ಇನ್ನೂ ಬೇಕಾದಷ್ಟು ವೈರ್ಸ್ ಉಳಿದಿವೆ. ಎಂದು ಕೇಳುತ್ತೇನೆ. ಇಂತಹ ಭಾಗದಿಂದ ನಮ್ಮ ಭಾಗದಲ್ಲಿ ಎಲ್ಲಿ ಬೇಕಾಗಿದೆಯೋ ಅಲ್ಲಿಗೆ ಒದಗಿಸಿಕೊಡಬೇಕು. ಇದರಿಂದ ನೀರಾವರಿ ಬಾವಿಗಳನ್ನು ಮಾಡುವ ಕೆಲಸ ಯಶಸ್ವಿಯಾಗುತ್ತದೆ. ಬಾವಿಗಳ ಕೆಲಸವನ್ನು ನಿಲ್ಲಿಸಬಾರದು, ಬಾವಿಗಳನ್ನು ಹೆಚ್ಚು ಹೆಚ್ಚಾಗಿ ಮಾಡಿ ಮುಂದಿನ ಸುಗ್ಗಿಯ ವೇಳೆಗಾದರೂ ಬೇಸಾಯಗಾರರಿಗೆ ಸಹಾಯ ಮಾಡಬೇಕು. ಸುಮಾರು ಮೂರು, ನಾಲ್ಕು ತಿಂಗಳಿಂದಲೂ ಮಳೆ ಇಲ್ಲದಿರುವುದರಿಂದ, ನೂರಕ್ಕೆ ಎಂಬತ್ತು ಭಾಗ ಜನ ಗ್ರಾಮಾಂತರ ಭಾಗದಲ್ಲಿ ಯಾವ ಉದ್ಯೋಗವೂ ಇಲ್ಲದೆ ಸುಮ್ಮನೆ ತೊಂದರೆ ಪಡುತ್ತಿದ್ದಾರೆ. ಇಂತಹವರಿಗೆ ಬಾವಿಗಳನ್ನಾದರೂ ತೋಡಿಸಿ ಕೊಟ್ಟರೆ ಆ ನೀರನ್ನು ವೆವಸಾಯಕ್ಕೆ ಉಪಯೋಗಿಸಿಕೊಂಡು ಅನುಕೂಲ ಮಾಡಿಕೊಳ್ಳಬಹುದು. ಕಾರ್ಮಿಕರು ಫ್ಯಾಕ್ಟರಿಯೊಳಗೆ ಕೆಲಸ ಮಾಡುವಾಗ ತಮ್ಮ ಕಷ್ಟಗಳನ್ನು ಸರಿಪಡಿಸಲು ಮುಷ್ಕರ ಹೂಡ ಬಹುದು. ಆದರೆ ರೈತರಿಗೆ ಮುಷ್ಕರ ಹೂಡುವ ಅನುಕೂಲ ಇಲ್ಲ. ಕಾರ್ಮಿಕರಿಗೆ ವಸತಿ ಗೃಹ, ವಾಹನಗಳನ್ನು ಸರಿಯಾಗಿ ಕೊಟ್ಟು, ದಕ್ಷತೆಯಿಂದ ಕೆಲಸ ಮಾಡಲಿಲ್ಲ ಎಂದು ಅವರನ್ನು ತೆಗೆದು ಹಾಕಿದರೆ ಅವರು ಕೋರ್ಟಿಗೆ ಹೋಗಿ ಸರಿಪಡಿಸಿಕೊಳ್ಳಬಹುದು. ರೈತರಿಗೆ ಕೆಲಸವಿಲ್ಲದೇ ಇದ್ದರೂ ಅವರಿಗೆ ಯಾವ ಕೋರ್ಟಿಗೆ ಹೋದರೂ ಅವರ ಕಷ್ಟ ಪರಿಹಾರವಾಗುವುದಿಲ್ಲ, ರೈತರ ತೊಂದರೆಗಳೇನು ಎಂದು ಅವರು ಹೇಳುತ್ತಿದ್ದರೂ ಅವನ್ನು ರೈತರ ಪ್ರತಿನಿಧಿಗಳೆಂದು ಹೇಳಿಕೊಳ್ಳುವವರು ತುಂಬಾ ಅನಾದರಣ ಮಾಡುತ್ತಿದ್ದಾರೆ ನಮ್ಮ ತಿಪಟೂರು ಪ್ರದೇಶದ ಮುಕ್ಕಾಲು ಭಾಗ ಜಮೀನು ತೆಂಗಿನ ತೋಟಗಳಿಂದ ಕೂಡಿದ್ದಾಗಿದೆ.

ಇನ್‌ಕಂಟ್ಯಾಕ್ಸ್ ಹಾಕುವುದಕ್ಕೆ ನಿಗದಿಮಾಡಿದ್ದಾರೆ—ಎಷ್ಟು ಹೆಚ್ಚೆಂದರೂ ಒಂದು ಗಿಡದಲ್ಲಿ ಸುಮಾರು 60 ಕಾಯಿ ಆಗುತ್ತದೆ. ಒಂದು ಎಕರೆಯಲ್ಲಿ 40-42 ಗಿಡ ಹಾಕಿದರೆ, ಅದರಿಂದ 400 ರೂಪಾಯಿ ಉತ್ಪತ್ತಿ ಬರುತ್ತದೆ. ಖರ್ಚು ಕಳೆದು ಎಷ್ಟು ಉಳಿಯುತ್ತದೆ? ಅಲ್ಲಿ ಆಹಾರ ಪದಾರ್ಥಗಳಾದಂಥ ರಾಗಿ ಮತ್ತು ಬತ್ತ ಬೆಳೆಯುವುದಕ್ಕೆ ಅನುಕೂಲ ಹೆಚ್ಚಾಗಿಲ್ಲ. ಅಂತಹ ಕಡೆ ದೊಡ್ಡ ನೀರಾವರಿಗಳಿಗೆ ಕೂಡ ಹೆಚ್ಚಿನ ಅನುಕೂಲಗಳಿಲ್ಲ. ಆದ್ದರಿಂದ ಆದಷ್ಟು ಜಾಗ್ರತ ಬಾವಿಗಳಿಗೆ ಅಲ್ಲಿ ಹೆಚ್ಚಾಗಿ ಅವಕಾಶ ಕೊಡಬೇಕು.

ಚುನಾವಣೆ ಕಾಲದಲ್ಲಿ ನಿಮ್ಮ ರಾಜಕೀಯ ಮುಖಂಡರು ಪ್ರಚಾರ ಭಾಷಣಗಳಲ್ಲಿ ಗೊರೂರು ಅಣೆಕಟ್ಟು ಬರುತ್ತದೆಂದು ಹೇಳಿದ್ದಾರೆ. ಈ ಪ್ರಾಜೆಕ್ಟು ಬಂದರೆ ಜನಗಳಿಗೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಪ್ರಾಜೆಕ್ಟು ಆದಷ್ಟು ಜಾಗ್ರತೆ ಆಗಬೇಕು. ಮತ್ತು ಕೊರಟಗೆರೆ ಹತ್ತಿರವೇ ಒಂದು ಡೈರೆಕ್ಟು ಪ್ರಾಜೆಕ್ಟು ಆಗಬೇಕು ಎಂದು ಹೇಳುತ್ತಿದ್ದಾರೆ. ಅವನ್ನೂ ಬಹಳ ಶೀಘ್ರವಾಗಿ ತೆಗೆದುಕೊಳ್ಳಬೇಕು. ಗಡ್ಡಕ್ಕೆ ಬೆಂಕಿ ಹೊತ್ತಿಕೊಂಡಾಗ ತಾವು ಒಂದು ಬಾವಿ ತೆಗೆಯುತ್ತೇವೆ, ಕೆರೆಕಟ್ಟೆಗಳನ್ನು ಕಟ್ಟಿಸುತ್ತೇವೆಂದು ಹೊರಟರೆ, ಗಡ್ಡವೂ ಉಳಿಯುವುದಿಲ್ಲ, ಮನುಷ್ಯನೂ ಉರಿದು ಹೋಗುತ್ತಾನೆ. ನೀವು ಮುಂದಾಲೋಚನೆ ಇಟ್ಟುಕೊಂಡು ಬೇಗ ಕೆಲಸ ಮಾಡಬೇಕು. ಇವತ್ತು ಏಕೋ ನೀವೆಲ್ಲಾ ಬಹಳ ಮಂಕಾಗಿದ್ದೀರಿ ಆ ಬಿಸಿ ಕಾಣುತ್ತಾ ಇಲ್ಲ, ನಿಮ್ಮ ಮುಖದಲ್ಲಿ. ಬೇಜಾರಿಗೆ ಅವಕಾಶ ಕೊಡದೆ, ನಗುನಗುತ್ತಾ ದೇಶಕ್ಕೆ, ಜನತೆಗೆ ಬಂದಿರ ತಕ್ಕಂಥ ಕಷ್ಟವನ್ನು ನಿವಾರಣೆ ಮಾಡಲು ಪ್ರಯತ್ನ ಮಾಡಬೇಕು.

ಯಾವುದಾದರೂ ಉಪಯುಕ್ತವಾದ ಕೆಲಸವನ್ನು ಮಾಡಿಸಿ ಎಂದು ಹೇಳಿದರೆ, ಹಣಕಾಸಿನ ಸಚಿವರು ಹಣ ಇಲ್ಲ ಎಂದು ಹೇಳುತ್ತಾರೆ. ಇನ್‌ವೆಸ್ಟಿಗೇಷನ್ ಡಿವಿಜನ್ ಒಂದಿದೆ. ಅದಕ್ಕೆ

ಸುಮಾರು 4 ತಿಂಗಳು ಕೆಲಸವಿಲ್ಲ ಎಂದು ಆ ಸಿಬ್ಬಂದಿಯವರೇ ಹೇಳುತ್ತಾರೆ. ಅಂಥ ಜನಗಳನ್ನು ನೀರಾವರಿ ಯೋಜನೆಗಳಲ್ಲಿ ಇನ್‌ವೆಸ್ಟಿಗೇಷನ್ನಿಗಾದರೂ ಉಪಯೋಗಿಸುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಮತ್ತು ನಮ್ಮ ದೇಶದಲ್ಲಿ ಪಿ.ಡಬ್ಲ್ಯು.ಡಿ.ಯಲ್ಲಿ ಕಂಟ್ರಾಕ್ಟರುಗಳನ್ನು 'ಎ' ಕ್ಲಾಸು ಮುಂತಾಗಿ ವಿಂಗಡಿಸಿರುವುದನ್ನು ತೆಗೆದುಹಾಕಬೇಕು. ಹೀಗೆ ಮಾಡಿದರೆ ನಿಮಗೆ ರೂಪಾಯಿಗೆ 4 ಆಣೆ ಉಳಿಯುತ್ತದೆ. ನೀವೇ ಸರಿಯಾಗಿ ಮಾಡಿದರೆ ಕನಿಷ್ಠಪಕ್ಷ ರೂಪಾಯಿಗೆ 2 ಆಣೆ ಉಳಿಯುತ್ತದೆ. ಇಂಥ ಐಟಮ್ಮುಗಳನ್ನು ಸರಿಪಡಿಸುವುದಕ್ಕೆ ಹಣಕಾಸಿನ ಸಚಿವರು ತೀವ್ರವಾಗಿ ಯೋಚನೆ ಮಾಡಬೇಕು.

ಗಂಡಸಿಯಲ್ಲಿ ಒಂದು ಇಂಜಿನಿಯರಿಂಗ್ ಸಬ್‌ಡಿವಿಜನ್ ಇದೆ. ಅದರಲ್ಲಿರುವ ಸ್ಟಾಫಿಗೆ ಏನೂ ಕೆಲಸವಿಲ್ಲ. ಅವರು ಮನೆಯಿಂದ ಆಫೀಸಿಗೆ, ಆಫೀಸಿಂದ ಮನೆಗೆ ಸುಮ್ಮನೆ ಓಡಾಡುತ್ತಿರುತ್ತಾರೆ. ಅದರಲ್ಲಿ ಎಷ್ಟು ಜನ ಇದ್ದಾರೆಂದರೆ 125 ಜನ ಅಸಿಸ್ಟೆಂಟ್ ಇಂಜನಿಯರು, 128 ಜನ ಜೂನಿಯರ್ ಇಂಜನಿಯರು, 25 ಜನ ಎಕ್ಸಿಕ್ಯೂಟೀವ್ ಇಂಜನಿಯರು ಇದ್ದಾರೆ—ಎಲ್ಲಾ ಒಂದು ರೋಡು ಮಾಡುವುದಕ್ಕೆ. ಅವರ ಮೇಲೆ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರು. ಇಂಥ ಅನ್ಯಾಯದ ಖರ್ಚುಗಳನ್ನು ತಾವು ಆದಷ್ಟು ಜಾಗ್ರತೆ ಕಡಮೆ ಮಾಡಬೇಕು. ಮತ್ತು ರೈತನಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕು.

ಗೋಕಟ್ಟೆಗಳಿಗೆ ನಮ್ಮ ಬಡ್ಜೆಟ್ಟಿನಲ್ಲಿ ಯಾವ ಹೆಡ್ಡೂ ಇಲ್ಲ. ದಯೆಯಿಟ್ಟು ಗೋಕಟ್ಟೆಗಳನ್ನು ಫ್ಯಾಮಿನ್‌ರಿಲೀಫ್ ಕೆಲಸವಾಗಿ ತೆಗೆದುಕೊಳ್ಳಬೇಕು. ರೋಡು ಕಾಮಗಾರಿಗಳನ್ನು ಜಾಗ್ರತೆ ಪೂರೈಸಬೇಕು.

ಇನ್ನು ಟ್ರಾನ್ಸಫರುಗಳ ವಿಷಯ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಟ್ರಾನ್ಸಫರಿಗೂ, ಅಭಾವ ಪರಿಸ್ಥಿತಿಗೂ ಏನು ಸಂಬಂಧ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಟ್ರಾನ್ಸಫರಿಗೂ, ಈ ವಿಷಯಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಾರೆ. ಟ್ರಾನ್ಸ್‌ಫರಗಳನ್ನು ರೂಲ್ಸ್ ಪ್ರಕಾರ ಮಾಡಿದರೆ ಬೇಕಾದಷ್ಟು ಉಳಿಸಬಹುದು ಮತ್ತು ಹಾಗೆ ಉಳಿದ ದುಡ್ಡನ್ನು ಕೆರೆ, ಕಟ್ಟೆ, ರಸ್ತೆ ಮಾಡುವುದಕ್ಕೆ ಉಪಯೋಗಿಸಬಹುದು. ಈ ತುರ್ತು ಪರಿಸ್ಥಿತಿ ಮಂತ್ರಿಗಳಿಗೆ ಬೇಕಾದಾಗ ಮಾತ್ರ ಇರುತ್ತದೆ. 27 ಜನ ಮಂತ್ರಿಗಳು ಜಾಸ್ತಿ, ಕಡಮೆ ಮಾಡಿ ಖರ್ಚು ಉಳಿಸಿ ಅಂದರೆ, ಇದಕ್ಕೂ ತುರ್ತು ಪರಿಸ್ಥಿತಿಗೂ ಏನೂ ಸಂಬಂಧವಿಲ್ಲ ಎಂದು ಹೇಳುತ್ತಾರೆ. ಬಹಳ ವರ್ಷಗಳಿಂದ ಒಂದೇ ಕಡೆ ಇರುವವರನ್ನು ಬೇರೇ ಕಡೆ ವರ್ಗ ಮಾಡಿ ಅಂದರೆ ತುರ್ತು ಪರಿಸ್ಥಿತಿ ನೆವ ಬರುತ್ತದೆ. ಅದೇ ನಿಮಗೆ ಬೇಕಾದರೆ 3 ತಿಂಗಳೊಳಗೆ ಟ್ರಾನ್ಸ್‌ಫರ್ ಮಾಡುತ್ತೀರ. ನೀವು ಇದನ್ನೆಲ್ಲಾ ಯಾವಾಗ ಸರಿಪಾಡಿಕೊಳ್ಳುತ್ತೀರೋ? ಮುಂದಿನ ಚುನಾವಣೆ ಬಂದಾಗ, ಆ ಮೇಲೆ ಈ ಸಭೆ ಸೇರಿದಾಗ ಗೊತ್ತಾಗಬಹುದು ....

MR. SPEAKER.—Sri G. Made Gowda and Sri Subbiah Naik are not present. Sri Ganji Veerappa may speak now.

† ಶ್ರೀ ಗಾಂಜಿ ವೀರಪ್ಪ (ಹರಿಹರ).—ಮಾನ್ಯ ಸಭಾಪತಿಗಳೆ, ಈಗ ತಂದಿರತಕ್ಕಂಥ ನಿರ್ಣಯದ ಬಗ್ಗೆ ಹೇಳಬೇಕಾದರೆ ನಮ್ಮ ದೇಶದಲ್ಲಿ ಈ ಕ್ಷಾಮ ಸಧ್ಯದಲ್ಲಿ ಮಳೆ ಸರಿಯಾಗಿ ಬಾರದೆ ರಾಜ್ಯದ ನಾನಾ ಕಡೆಗಳಲ್ಲಿ ಇರಬಹುದು. ಆದರೆ ಶಾಶ್ವತವಾಗಿ ನಾವು ಬರಗಾಲ ನೋಡುತ್ತಿರುವುದು 3-4 ಜಿಲ್ಲೆಗಳಲ್ಲಿ; ಈ ಜಿಲ್ಲೆಗಳಲ್ಲಿ ಈ ಪರಿಸ್ಥಿತಿ ಇದ್ದೇ ಇರುತ್ತದೆ. ಆದ್ದರಿಂದ ನಾವು ಏನೋ ಈಗ ಕ್ಷಾಮ ಬಂದಿದೆ, ಈ ವರ್ಷ ಮಾತ್ರ ಅಲ್ಲಲ್ಲಿ ಕೆಲವು ನಿವಾರಣೋಪಾಯಗಳನ್ನು ಕೈಗೊಂಡರೆ ಸಾಕು ಎಂಬ ಅಭಿಪ್ರಾಯದಿಂದ ತೀರ್ಮಾನಗಳನ್ನು ಮಾಡಿದರೆ ಸಾಲದು. ನಮ್ಮ ದೇಶದಲ್ಲಿ ಶಾಶ್ವತವಾದ ಕ್ಷಾಮನಿವಾರಣೆ ಕಾರ್ಯಕ್ರಮವನ್ನು ಕೈಗೊಳ್ಳುವಂಥಾದ್ದು ಬಹಳ ಅಗತ್ಯ. ಈ ಬಗ್ಗೆ ಕೆಲವು ಸಲಹೆಗಳನ್ನು ಕೊಡಬೇಕೆಂದಿರುತ್ತೇನೆ.

ಯಾರೋ ಒಬ್ಬ ಮಾನ್ಯ ಸದಸ್ಯರು ಒಂದು ಸಲಹೆಯನ್ನು ಕೊಟ್ಟರು, ಅವರು ಯಾರೆಂದು ನೆನಪಿಲ್ಲ: ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಕ್ಷಾಮನಿವಾರಣೆಗೆ ಒಂದು ಸ್ಟ್ಯಾಟುಟರಿ ಬೋರ್ಡ್ ಸ್ಥಾಪನೆ ಮಾಡಬೇಕು. ನೀವು ಈ ಫ್ಯಾಮಿನ್ ರಿಲೀಫ್ ಮಸೂದೆಯನ್ನು ತರಲು ಕೆಲವು ಲೋಕಲ್ ಡಿಫಿಕಲ್ಟೀಸ್ ಇದ್ದುವು, ಕೊಡಗಿನಲ್ಲಿ ಫ್ಯಾಮಿನ್ ರಿಲೀಫ್ ಫಂಡ್ ಕಾನೂನು ಇರಲಿಲ್ಲ, ಆದ್ದರಿಂದ ಎಲ್ಲರಿಗೂ ಅನ್ವಯಿಸತಕ್ಕಂಥ ಒಂದು ಕಾನೂನನ್ನು ಈ ಬಿಲ್ಲಿನ ಮೂಲಕ ತಂದಿದ್ದೇವೆಂದು ಹೇಳಿದ್ದೀರಿ. ಆದರೆ ಇದರಲ್ಲಿ ಶಾಶ್ವತವಾದ ಫಂಡನ್ನು ಹೆಚ್ಚು ಮಾಡಬೇಕು ಎಂಬ ಉದ್ದೇಶ ಸರಕಾರದಲ್ಲಿ ಕಾಣಲಿಲ್ಲ. ಈಗ 60 ಲಕ್ಷ ರೂಪಾಯಿ ಹಣವಿದೆ. ಅದು ಯಾವುದಕ್ಕೂ ಸಾಲುವುದಿಲ್ಲ. ಒಂದು ಜಿಲ್ಲೆಗೆ ಖರ್ಚುಮಾಡುವುದಕ್ಕೆ ಸಾಕಾಗುವುದಿಲ್ಲ. ಈ ಮಸೂದೆಯನ್ನು ಚರ್ಚೆ ಮಾಡುವಾಗ ಎರಡು ವಿಚಾರ ಯೋಚನೆ ಮಾಡಬೇಕು. 5-6 ಕೋಟಿ ರೂಪಾಯಿಯ ಶಾಶ್ವತವಾದ ಒಂದು ಫಾಮಿನ್ ರಿಲೀಫ್ ಫಂಡು ಇರಬೇಕು. ಅಷ್ಟು ದುಡ್ಡನ್ನೂ ಫ್ಯಾಮಿನ್ ರಿಲೀಫಿಗೇ ಖರ್ಚು

(ಶ್ರೀ ಗಾಂಜಿ ವೀರಪ್ಪ)

ಮಾಡುವ ಒಂದು ಅವಕಾಶವನ್ನು ಮಾಡಬೇಕು. ಈ ಫಂಡನ್ನು ಕ್ಷಾಮ ಬಂದಮೇಲೆಯೇ ಖರ್ಚು ಮಾಡುತ್ತೇವೆಂದು ಹೇಳಲಾಗುವುದಿಲ್ಲ, ಇದನ್ನು ಕ್ಷಾಮನಿವಾರಣೆ ಮಾಡುವುದಕ್ಕೆ ಎಂದು ಹೇಳಬೇಕು, ಏಕೆಂದರೆ Prevention is better than cure. ಕೆಲವು ಜಿಲ್ಲೆಗಳ ನಿದರ್ಶನವನ್ನು ತೆಗೆದುಕೊಂಡರೆ ಇದು ಗೊತ್ತಾಗುತ್ತದೆ. ಕೋಲಾರ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರ—ಈ 4-5 ಜಿಲ್ಲೆಗಳಲ್ಲಿ ಸರ್ವೇಸಾಧಾರಣವಾಗಿ ಯಾವಾಗಲೂ ಕ್ಷಾಮವಿರುತ್ತದೆ. ಇಂಥಾ ಅಸಾಧಾರಣ ಪರಿಸ್ಥಿತಿ ಈ ವರ್ಷ ಎಲ್ಲಾಕಡೆಗೂ ಬಂದಿದೆ. ಆದರೆ ಯಾವಾಗಲೂ ಸರಾಸರಿ 10-14-16 ಇಂಚು ಮಳೆ ಬರತಕ್ಕಂಥ ಜಿಲ್ಲೆಗಳಲ್ಲಿ ನಿವಾರಣೋಪಾಯಗಳನ್ನು ಮಾಡಲೇಬೇಕಾಗುತ್ತದೆ. ನನ್ನ ಸಲಹೆ ಏನೆಂದರೆ 5-6 ಕೋಟಿ ರೂಪಾಯಿಯ ಒಂದು ಫಂಡು ಮಾಡಿ, ಅದಕ್ಕೆ ಒಂದು ಬೋರ್ಡು ಮಾಡಿ, ಅದನ್ನು ಯಾವರೀತಿ ಕ್ಷಾಮ ಬಂದ ರೀತಿಯಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮಗಳಿಗಾಗಿ ಉಪಯೋಗಿಸಬೇಕು ; ಇದನ್ನು ಯೋಚನೆ ಮಾಡಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಬೋರ್ಡಿಗೆ ಅಧ್ಯಕ್ಷರು ಯಾರು ?

ಶ್ರೀ ಗಾಂಜಿ ವೀರಪ್ಪ.—ಯಾರೋ ಮಂತ್ರಿಗಳಿರುತ್ತಾರೆ. ಅದು ಅಷ್ಟು ಮುಖ್ಯವಾದುದಲ್ಲ. ಈ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಇರ್ರಿಗೇಷನ್ ಫೆಸಿಲಿಟಿ ನಮ್ಮ ದೇಶದಲ್ಲಿ ಬಹಳ ಜಾಸ್ತಿಯಾಗಬೇಕು. ಶ್ರೀ ಸಂತಣಕರು ನಮ್ಮ ದೇಶದಲ್ಲಿ ಅದು ಶೇಕಡ 6 ಪರ್ಸೆಂಟಿದೆ ಎಂದು ಹೇಳಿದರು. ಪಕ್ಕದ ರಾಜ್ಯವಾದ ಆಂಧ್ರದಲ್ಲಿ 26 ಪರ್ಸೆಂಟ್, ಇದೆ. ಮದ್ರಾಸಿನಲ್ಲಿ 40 ಪರ್ಸೆಂಟ್ ಇರ್ರಿಗೇಟೆಡ್ ಲ್ಯಾಂಡ್ ಇದೆ. ನಮ್ಮ ರಾಜ್ಯದಲ್ಲಿ ನಾವು ಕಾವೇರಿ, ಕೃಷ್ಣ ಮತ್ತಿತರ ಯೋಜನೆಗಳಿಂದ ಬರತಕ್ಕಂಥ ಎಲ್ಲ ನೀರನ್ನೂ ಉಪಯೋಗಿಸಿದರೂ, 20 ಪರ್ಸೆಂಟಿಗಿಂತ ಜಾಸ್ತಿಯಾಗುವುದಿಲ್ಲ. ಎಲ್ಲೆಲ್ಲಿಗೆ ಇರ್ರಿಗೇಷನ್ ಫಸಿಲಿಟಿ ಬೇಕೆಂದು ನೋಡಿಕೊಂಡು ಸುಧಾರಿಸಿಲ್ಲ. ಇರ್ರಿಗೇಷನ್ ವೆಲ್ಲುಗಳನ್ನು ಜಾಸ್ತಿಯಾಗಿ ಕೊಡಬೇಕು. ಚಿತ್ರದರ್ಗ ಜಿಲ್ಲೆಗೆ 2-3 ವರ್ಷಗಳಲ್ಲಿ ಅನೇಕ ನೀರಾವರಿ ಬಾವಿ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಸರಕಾರದವರೇನೋ ಒಂದು ಫಂಡನ್ನು ಯೋಚನೆಮಾಡುತ್ತಾ ಇದ್ದಾರೆ. ಆದರೆ ಇನ್ನೂ ಹೆಚ್ಚಿಗೆ ಮಾಡಬೇಕೆಂದು ನನ್ನ ಸಲಹೆ. ಎಲ್ಲೆಲ್ಲಿ ಅಗತ್ಯವೋ ಅಲ್ಲೆಲ್ಲಾ ಕೊಡುವುದಲ್ಲದೆ, ಜನಗಳು ಮುಂದೆ ಬಂದು ಬೇಕೆಂದು ಕೇಳಿದರೆ, ಇಲ್ಲ ಎಂದು ಹೇಳಕೂಡದು, ಅವರ ಕೇಳಿಕೆಯನ್ನು ಈಡೇರಿಸುವುದಕ್ಕೆ ಯಾವ ಅಡ್ಡಿಯೂ ಇರಕೂಡದು. ನೀರಾವರಿ ಬಾವಿಗಳಿಗೆ ಪವರ್ ಕೊಡಬೇಕು. ಪವರ್ ಕೊಡುವಾಗ ಡ್ರಾಟ್ ಏರಿಯಾಗಳಿಗೆ ಪ್ರಯಾರಿಟಿ ಕೊಡಬೇಕು. ಪ್ರಯಾರಿಟಿಯನ್ನು ಮಳೆ ಅಭಾವವಿರುವ ಪ್ರದೇಶಗಳಿಗೆ ಕೊಟ್ಟು, ಆಮೇಲೆ ಪವರ್ ಉಳಿದರೆ, ಮಿಕ್ಕದ್ದನ್ನು ಬಾಕಿ ಕಡೆಗಳಿಗೆ ಕೊಡಬೇಕು. ಪ್ರಯಾರಿಟಿ ಮಾತ್ರ ಮಳೆಯಾಗದ ಜಿಲ್ಲೆಗಳಿಗೆ ಇರಬೇಕು.

ನಾನು ಅರಣ್ಯ ಖಾತೆಯ ಮಂತ್ರಿಗಳಿಗೆ ಸಲಹೆ ಕೊಡುವುದೇನೆಂದರೆ ಅವರು afforestation ಕೆಲಸ ತೆಗೆದುಕೊಂಡಿರುವುದು ಸಾಲದು. ಇದಕ್ಕೆ ಇನ್ನೂ ಹೆಚ್ಚು ಗಮನವನ್ನು ಕೊಟ್ಟು ಹೆಚ್ಚು ಅರಣ್ಯವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಿದರೆ ಮಳೆ ಹೆಚ್ಚಾಗಿ ಬರುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿಯ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಮಾಡಬೇಕು.

ಹಿಂದೆ ಕ್ಷಾಮಪರಿಹಾರ ಕಾಲದಲ್ಲಿ ಎಷ್ಟೋ ಕೆಲಸಗಳಾಗಿವೆ. ಆಗ ಮಾಡಿಸಿದಂಥ ರಸ್ತೆಗಳೆಲ್ಲ ಹಾಳಾಗಿವೆ. ಇದರಿಂದ ಏನೂ ಪ್ರಯೋಜನವಿಲ್ಲವಾಗಿದೆ. ಕೋಟ್ಯಾಂತರ ರೂಪಾಯಿಗಳು ಖರ್ಚಾಗಿದ್ದರೂ ಶಾಶ್ವತವಾದ ಕೆಲಸಗಳಾಗಿಲ್ಲ. ಹಂಗಾಮಿ ಅಥವಾ ತಾತ್ಕಾಲಿಕ ಕೆಲಸಗಳನ್ನು ಮಾಡುವುದರಿಂದ ಹಣ ಖರ್ಚಾಗಿ ಕೆಲವು ಕಾಲದ ನಂತರ ಆ ಕೆಲಸಗಳಿಂದ ಏನು ಉಪಯೋಗವಿಲ್ಲದಂತಾಗುತ್ತದೆ. ಈಗಲೂ ಸರ್ಕಾರ ತುರ್ತು ಪರಿಸ್ಥಿತಿಯಲ್ಲಿ ಜಿಲ್ಲೆಗಳಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲು ಹಣವನ್ನು ಒದಗಿಸುತ್ತಿದೆ. ಎಷ್ಟೇ ಹಣವನ್ನು ಖರ್ಚುಮಾಡಿದರೂ ಶಾಶ್ವತವಾದ ಕೆಲಸಗಳನ್ನು ಆಯಾಯ ತಾಲ್ಲೂಕುಗಳಲ್ಲಿ ಮಾಡಿಸಬೇಕು ಮತ್ತು ಹಾಗೆ ಖರ್ಚುಮಾಡುವ ಹಣ ವ್ಯರ್ಥವಾಗಬಾರದೆಂದು ಸಲಹೆ ಕೊಡುತ್ತೇನೆ.

ಹಳ್ಳಿಗಳಲ್ಲಿ ಅನೇಕ ಕಡೆ ಕುಡಿಯುವ ನೀರಿನ ಬಾವಿಗಳಿರುವುದಿಲ್ಲ. ಈ ಸಮಯದಲ್ಲಿ ಅದನ್ನು ಕೂಡ ಯೋಚನೆ ಮಾಡಬೇಕು. ಮಳೆ ಕಡಮೆಯಾದಾಗ ಅಭಾವ ಪರಿಸ್ಥಿತಿಯಲ್ಲಿ ಬಾವಿಗಳು ಮುಖ್ಯವಾಗಿ ಬೇಕು. ನಮ್ಮ ಜಿಲ್ಲೆಯ ಅನೇಕ ಕಡೆ ಕುಡಿಯುವ ನೀರಿನ ಬಾವಿಗಳೇ ಇರುವುದಿಲ್ಲ. ಚಿತ್ರದುರ್ಗ ಜಿಲ್ಲೆಯ ವಿಚಾರವನ್ನು ಸ್ವಲ್ಪ ಹೆಚ್ಚಾಗಿ ಹೇಳಬೇಕಾಗಿದೆ. ಅನೇಕ ಮೈನರ್ ಇರಿಗೇಷನ್ ಸ್ಕೀಮುಗಳ ಅಂದಾಜುಗಳೆಲ್ಲ ಮಂಜೂರಾಗಿದ್ದು ಕಾರ್ಯಗತ ಮಾಡಿಲ್ಲ. ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತು ಅಂಗುಲದಿಂದ 20 ಅಂಗುಲದವರೆಗೆ ಮಳೆ ಬರುತ್ತದೆ. 20 ಅಂಗುಲಕ್ಕಿಂತ ಹೆಚ್ಚಾಗಿ ಮಳೆ ಯಾವ ಕಡೆಯೂ ಬರುವುದೇ ಇಲ್ಲ. ಅಂಥ ಕಡೆ ಮೈನರ್ ಇರಿಗೇಷನ್ ಸ್ಕೀಮು

ಗಳಲ್ಲಿ ಸಾಧ್ಯವಾದ ಕೆಲಸಗಳನ್ನು ಮಾಡಿ ಎಲ್ಲೆಲ್ಲಿ ಕೆರೆಗಳನ್ನು ಕಟ್ಟಿಸಬೇಕೋ ಅದನ್ನೆಲ್ಲ ಮಾಡಬೇಕು ಎಂದು ಹೇಳುತ್ತೇನೆ. ತಪಶೀಲುಗಳನ್ನು ಹೇಳುವುದಕ್ಕೆ ಸಮಯವಿಲ್ಲ. ಬೇಕಾದಷ್ಟು ಯೋಜನೆಗಳಿಗೆ ಅಂದಾಜುಗಳು ತಯಾರಾಗಿ ಸರ್ಕಾರದ ಮುಂದೆ ಇವೆ ಎಂದು ಕೇಳುತ್ತೇನೆ. ಅವನ್ನೆಲ್ಲ ಕಾರ್ಯಗತ ಮಾಡಬೇಕೆಂದು ಮಾತ್ರ ಹೇಳುತ್ತೇವೆ. ಇದರಿಂದ ಅಲ್ಲಿಯ ಪರಿಸ್ಥಿತಿ ಎಷ್ಟೋ ಸುಧಾರಿಸುವುದಕ್ಕೆ ಅನುಕೂಲವಾಗುತ್ತದೆ. ಇದನ್ನು ಸರ್ಕಾರ ಯೋಚನೆ ಮಾಡಬೇಕು.

ಹಿರಿಯೂರು, ಹರಿಹರ, ಚಳ್ಳಕೆರೆ, ಮೊಳಕಾಲ್ಮೂರು ಈ ತಾಲ್ಲೂಕುಗಳೆಲ್ಲ ಚಿತ್ರದುರ್ಗ ಜಿಲ್ಲೆಯಲ್ಲಿ worst affected areas ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ಈಗ ಅನೇಕರಿಗೆ ಜೀವನಕ್ಕೆ ಅವಕಾಶವಿಲ್ಲ, ರೈತರಿಗೆ ಜಮೀನಿನಲ್ಲಿ ಏನಾದರೂ ಬೆಳೆಯಾದರೆ ಬದುಕಬೇಕೇ ವಿನಾ ಇಲ್ಲದೆ ಇದ್ದರೆ ಇಲ್ಲ.

ವ್ಯವಸಾಯ ಇಲಾಖೆಯಲ್ಲಿ ಕೂಡ ಬೀಜ ವಗೈರೆಗಳನ್ನು ಒದಗಿಸುವುದಕ್ಕೆ ಸರಿಯಾದ ವ್ಯವಸ್ಥೆಯಿಲ್ಲ. ಒಂದು ಸಲ ಬಿತ್ತನೆ ಮಾಡಿ ಅದೇನಾದರೂ ಕೆಟ್ಟುಹೋದರೆ ಪುನಃ ಬಿತ್ತನೆ ಮಾಡಬೇಕಾಗುತ್ತದೆ. ಇದಕ್ಕೆ ಬಿತ್ತನೆ ಬೀಜ ಬೇಕು. ಆದುದರಿಂದ ಮುಂದೆ ಆಗಬಹುದಾದ ಪರಿಸ್ಥಿತಿಯನ್ನು ಊಹೆಮಾಡಿ ಅಲ್ಲಲ್ಲಿ implement ಕೊಡಲು fertilises ಕೊಡಲು ಕಾಲಕ್ಕೆ ಸರಿಯಾಗಿ ಒದಗಿಸಲು ವ್ಯವಸಾಯ ಇಲಾಖೆ alert ಆಗಿ ಇರುವಂತೆ ಸರಿಯಾದ ಸೂಚನೆಗಳನ್ನೂ ಕೊಡಬೇಕೆಂದು ಈ ಸಮಯದಲ್ಲಿ ಸೂಚನೆ ಮಾಡುತ್ತಿದ್ದೇನೆ.

Lift irrigation ವಿಚಾರ ಅನೇಕರು ಹೇಳುತ್ತಿದ್ದರು. ಕೆಲವು ಕಡೆ 100-200 ಎಕರೆಗಳ pots ಮಾಡಿಕೊಂಡು ವಿದ್ಯುಚ್ಛಕ್ತಿಯ ಸಹಾಯದಿಂದ ನೀರನ್ನು ಪಂಪ್ ಮಾಡಿ ನೀರಾವರಿ ವ್ಯವಸಾಯವನ್ನು ಮಾಡುತ್ತಿದ್ದಾರೆ. ಇದು ಬಹಳ ಒಳ್ಳೆಯದೆಂದು ಕಾಣುತ್ತದೆ. ಆದರೆ ಇದನ್ನು ಸಹಕಾರ ಸಂಸ್ಥೆಗಳಿಗೆ ಮಾತ್ರ ವಹಿಸಬೇಡಿ. ಅದರ ಪರಿಣಾಮವೇನೆಂಬುದನ್ನು ಧಾರವಾಡ ಜಿಲ್ಲೆಯಲ್ಲಿ ನೋಡುತ್ತಿದ್ದೇವೆ. ಸಹಕಾರ ಪದ್ಧತಿಯಲ್ಲಿ ಅದು ಯಶಸ್ವಿಯಾಗುವುದಿಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಇದನ್ನು ಮಾಡಿ ರೈತರಿಂದ ವಾಟರ್‌ರೇಟನ್ನು ತೆಗೆದುಕೊಳ್ಳುವುದು ಒಳ್ಳೆಯದು. ಇದನ್ನು ಪ್ರಯತ್ನಮಾಡಿದರೆ ಬಹಳ ಯಶಸ್ವಿಯಾಗಿ ತನ್ಮೂಲಕ ಇನ್ನೂ ಕೆಲವು ಭಾಗ ಜಮೀನನ್ನೂ ನಾವು ನೀರಾವರಿಗೆ ತರಬಹುದು ಎಂದು ನನಗನ್ನಿಸುತ್ತದೆ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು.

ಒಟ್ಟಿನಲ್ಲಿ ಬೆಳೆ ಹೆಚ್ಚಾಗುವುದಕ್ಕೆ ಯೋಜನೆಗಳನ್ನು ಮಾಡಿ, ಅದರಲ್ಲಿ westage ಆಗದೆ ಜನತೆಗೆ ಉಪಯೋಗವಾಗುವ ಹಾಗೆ ನೋಡಿಕೊಂಡರೆ ಶಾಶ್ವತವಾಗಿ ನಮ್ಮ ಕೆಲಸ ಕಾರ್ಯಗಳಾಗುತ್ತವೆ. ಈ ಬಗ್ಗೆ ಗಮನ ಕೊಟ್ಟು ತಕ್ಷಣ, ಚಿತ್ರದುರ್ಗ ಜಿಲ್ಲೆಯ ವಿಷಯ ಮಾತ್ರ ನನಗೆ ಗೊತ್ತಿರುವುದರಿಂದ, ಹೆಚ್ಚಿನ ಕೆಲಸ ಕಾರ್ಯಗಳನ್ನು ಮಾಡಬೇಕಾದ್ದಿದೆ. ಇದನ್ನು ಸರ್ಕಾರದವರು ಯೋಚನೆ ಮಾಡಿ, ಏನು ಕೆಲಸಗಳನ್ನು ಮಾಡಿಸಿದರೂ ಶಾಶ್ವತವಾಗಿ ಆ ಕೆಲಸಗಳು ಇರುವಂತೆ ಯೋಜನೆಯನ್ನು ಮಾಡಬೇಕೆಂದು ಸಲಹೆ ಕೊಟ್ಟು, ಕ್ಷಾಮ ಪರಿಸ್ಥಿತಿ ಮುಂದೆ ಬಾರದ ಹಾಗೆ phased programme ಇಟ್ಟುಕೊಂಡು ಪ್ರತಿ ವರ್ಷ ಒಂದೆರಡು ಕೋಟಿ ರೂಪಾಯಿ ಖರ್ಚು ಮಾಡಿದರೆ 10-20 ವರ್ಷಗಳಲ್ಲಿ ಆ ಭಾಗಗಳಲ್ಲಿ ಕ್ಷಾಮ ಬಂದರೂ ನಿವಾರಣೆ ಮಾಡುವುದಕ್ಕೆ ಸಹಾಯಕವಾಗಿರುತ್ತದೆ. ಸ್ವಾಮಿ, ಇಷ್ಟು ಹೇಳಿ ನಾನು ನನ್ನ ಭಾಷಣವನ್ನು ಪೂರ್ತಿ ಮಾಡುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸಭಾಪತಿಯವರೇ, ಅಭಾವ ಪರಿಸ್ಥಿತಿ ಅಥವಾ ಕ್ಷಾಮ ಪರಿಸ್ಥಿತಿ ಎನ್ನುವುದು ನಮ್ಮ ದೇಶದಲ್ಲಿ ವರ್ಷೇ ವರ್ಷೇ ಬರುತ್ತಿದೆ ಎಂದು ಹೇಳಬಹುದು. ರೈತ ಕಷ್ಟಪಟ್ಟು ಉತ್ತು ಬಿತ್ತಿದ ಬೆಳೆ ಕೈಗೆ ಬರುವುದಕ್ಕೆ ಮೊದಲೇ ಒಣಗಿ ಹೋಗುವುದು ಸರ್ವೇಸಾಮಾನ್ಯವಾಗಿದೆ. ನಮ್ಮ ಪ್ರಾಂತದ ಬಗ್ಗೆ ಹೇಳುವುದಾದರೆ ಯಾವ ವರ್ಷವೂ 10-12 ಅಂಗುಲಕ್ಕಿಂತ ಹೆಚ್ಚಾಗಿ ಮಳೆ ಬರುವುದಿಲ್ಲ. ಬರುವ ಮಳೆಯೂ ಸಹ ಸಕಾಲದಲ್ಲಿ ಬಾರದೆ ಎಂದೋ ಒಂದು ದಿವಸ ಹೆಚ್ಚಾಗಿ ಬಂದು ಬೇರೆ ದಿವಸಗಳಲ್ಲಿ ಬಾರದೆ ಫಸಲೆಲ್ಲ ಒಣಗಿ ಹೋಗುವ ಪರಿಸ್ಥಿತಿ ಇದೆ. ಈ ವರ್ಷ ಬೆಳೆ ಬಹಳ ಹುಲುಸಾಗಿತ್ತು. ಆದರೆ ಸುಮಾರು ಒಂದೂವರೆ ತಿಂಗಳಿನಿಂದಲೂ ಮಳೆ ಬಾರದೆ ಬೆಳೆ ಎಲ್ಲ ಒಣಗಿ ಹೋಗಿ ಎಲ್ಲಿ ನೋಡಿದರೂ ಕೂಡ ಬೆಂದು ನಿಂತಿರುವ ಪೈರನ್ನು ನೋಡಬೇಕಾಗಿದೆ. ಅದೃಷ್ಟವಶಾತ್ ಕೆಲವು ದಿನಗಳಿಂದ ಮಳೆಯಾಗಿದೆ. ಇವರಿಂದ ರೈತರಿಗೆ ಸ್ವಲ್ಪ ತೃಪ್ತಿಯಾಗಿದೆ, ಎಂದು ಹೇಳಬಹುದು.

ನಮ್ಮ ರೈತನ ಚರಿತ್ರೆಯನ್ನು ಹೇಳುವುದಾದರೆ ಅವನು ಅಭಾವ ಪರಿಸ್ಥಿತಿಗೆ ತುತ್ತಾಗಿ ಸಾಲದಲ್ಲೇ ಹುಟ್ಟುತ್ತಾನೆ, ಸಾಲದಲ್ಲೇ ಬದುಕುತ್ತಾನೆ, ಸಾಲದಲ್ಲೆ ಸತ್ತು ಹೋಗುತ್ತಾನೆ. ತನ್ನ ಜೀವಿತ ಕಾಲದಲ್ಲಿ ಋಣವನ್ನು ತೀರಿಸುವ ಅದೃಷ್ಟವಂತೂ ಅವನಿಗಿಲ್ಲ. ಅವನು ಬಹಳ ಹೀನಸ್ಥಿತಿಯಲ್ಲಿ ಬಹಳ ಚಿಂತಾಜನಕವಾದ ಸ್ಥಿತಿಯಲ್ಲಿದ್ದಾನೆ ಎಂಬುದನ್ನು ಎಲ್ಲರ ಗಮನಕ್ಕೆ ತರಲು

(ಶ್ರೀ ಬಿ. ಎಲ್. ಗೌಡ)

ವಿಷಾದ ಪಡುತ್ತೇನೆ. ಇಷ್ಟು ಹೀನಸ್ಥಿತಿಯಲ್ಲಿರತಕ್ಕ ರೈತನನ್ನು ಉತ್ತಮ ಸ್ಥಿತಿಗೆ ತರಬೇಕು ಎಂದು ಹೇಳುವಾಗ ನಮಗೆ ಸ್ವಾತಂತ್ರ ಬಂದು 16 ವರ್ಷಗಳಾದರೂ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವುದನ್ನು ನೋಡಿದರೆ ಇವರು ಹೇಳುವ ರೀತಿ ನಡೆದುಕೊಳ್ಳುತ್ತಾರೆಯೇ ಎನ್ನುವ ಶಂಕೆ ನನಗೆ ಬರುತ್ತದೆ.

ಸ್ವಾಮಿ, ಈ ಒಂದು ಪರಿಸ್ಥಿತಿಗೆ ಹೆಚ್ಚಿನ ಮಹತ್ವ ಏಕೆ ಬರುತ್ತದೆಂದರೆ ನಮ್ಮ ಮುಖ್ಯ ಮಂತ್ರಿಗಳು ಅಭಾವ ಪರಿಸ್ಥಿತಿ ಇರುವ ಕಡೆಯಿಂದಲೇ ಬಂದವರು. ನಾವು ಯಾವ ವಿಷಯವನ್ನು ಯಾವಾಗ ಕೇಳಿದರೂ ಅದನ್ನೆಲ್ಲ ನನಗೆ ಬಿಡಿ, ನಾನು ನೋಡಿಕೊಳ್ಳುತ್ತೇನೆ ಎಂದು ಹೇಳುತ್ತಾರೆ. ಅವರಿಗೆ ಈ ಒಂದು ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗದೆ, ಅತೃಪ್ತರಾಗಿರುವ ಅವರ ಹಿಂಬಾಲಕರಿಗೆ ಜಾಗಗಳನ್ನು ಬಗೆಹರಿಸಿ ಯಾವುದಾದರೂ ಒಂದು ಬೋರ್ಡಿಗೆ ಚೇರ್‌ಮನ್ ಮಾಡುವುದು ಹೀಗೆ ಅವರ ಹಿಂಬಾಲಕರಾಗಿ ಯಾವ ಕೆಲಸವನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆಯೇವಿನಾ ರೈತರ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿಲ್ಲ ಮತ್ತು ಯಾವ ಕೆಲಸಗಳನ್ನು ತೆಗೆದುಕೊಂಡಿಲ್ಲವೆಂದು ತಮ್ಮ ಗಮನಕ್ಕೆ ತರುತ್ತೇನೆ.

ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಲು ಖಾಯಂ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪದೇ ಪದೇ ಹತ್ತಾರುವರ್ಷಗಳಿಂದ ಈ ಸಭೆಯಲ್ಲಿ ಹೇಳುತ್ತಿದ್ದೇವೆ, ತಮ್ಮ ಗಮನಕ್ಕೂ ಅನೇಕ ಸಲ ತಂದಿದ್ದೇವೆ. ನಮ್ಮ ಜಿಲ್ಲೆಯಲ್ಲಿರುವ ವಾಣೀವಿಲಾಸ ಸಾಗರಕ್ಕೆ ಯಗಚಿ ನದಿಯ ನೀರನ್ನು ತಂದರೆ 25 ಸಹಸ್ರ ಎಕರೆಗಳಷ್ಟು ಹೆಚ್ಚು ಜಮೀನಿಗೆ ನೀರಾವರಿ ಸೌಲಭ್ಯ ದೊರಕುತ್ತದೆ ಎಂದು ಹೇಳಿದರೂ ಸರ್ಕಾರ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಅಧ್ಯಕ್ಷರ ಗಮನಕ್ಕೆ ವಿಷಾದದಿಂದ ತರುತ್ತೇನೆ.

ನಮ್ಮ ತಾಲ್ಲೂಕಿನ ರಾಣೀಕೆರೆಗೆ ನಾರಾಯಣಪುರ ಅಣೆಯಿಂದಲೂ ಮತ್ತು ಹಿರಿಯೂರು ತಾಲ್ಲೂಕಿನ ಧರ್ಮಾಪುರ ಕೆರೆಗೆ ಸುವರ್ಣಮುಖಿ ನದಿಯಿಂದ ಕಾಲುವೆ ತೆಗೆಯಬೇಕು, ನಾಯಕನ ಹಟ್ಟಿ ದೊಡ್ಡ ಕೆರೆಗೆ ಸಂಗೇನಹಳ್ಳಿ ಕೆರೆಯಿಂದ ನೀರನ್ನು ತರಬೇಕು, ಹಾಗೆಯೇ ತಿಪ್ಪೇಹಳ್ಳದಿಂದ ಕಟ್ಟಬೇಕೆಂದು ಮಾನ್ಯ ಸದಸ್ಯರಾದ ಬಸವಣ್ಣನವರು ಸಹ ಹೇಳುತ್ತಾರೆ. ಹೀಗೆ ನಾನಾ ವಿಧವಾದ ನೀರಾವರಿ ಕಾಮಗಾರಿಗಳನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ಯಾವುದಕ್ಕೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಒಂದು interpellation ಹಾಕಿ ಕೇಳಿದಾಗ 'it is under consideration' ಎಂದು ಹೇಳಿದರು. ಹಂಗಾಮಿ ಪರಿಹಾರ ಕಾರ್ಯಕ್ರಮಗಳಿಗೆ ಲಕ್ಷಗಟ್ಟಲೆ ಖರ್ಚುಮಾಡುವುದನ್ನು ಖಾಯಂ ಪರಿಹಾರ ಕಾರ್ಯಗಳಿಗೆ ಖರ್ಚುಮಾಡಿ ಆ ಕಾರ್ಯಗಳನ್ನು ತೆಗೆದುಕೊಳ್ಳುವುದಾದರೆ ಉಪಯೋಗವಾಗುತ್ತದೆಂದು ಹೇಳಿ ನಮ್ಮ ಜಿಲ್ಲೆಯಲ್ಲಿರುವ ಇಂಥ ಕೆಲಸಗಳನ್ನು ಕಾರ್ಯಗತ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆ.

2-30 P.M.

ಖಾಯಂ ಪರಿಹಾರ ಕೆಲಸಮಾಡಲು ನೀರಾವರಿ ಯೋಜನೆಗಳು ಬಹಳ ಇವೆ. ಹೋದ ವರ್ಷ ತುರ್ತು ಪರಿಸ್ಥಿತಿಯಿಂದ ಹೆಚ್ಚಿನ ಆಹಾರವನ್ನು ಉತ್ಪತ್ತಿಮಾಡುವುದಕ್ಕೋಸ್ಕರ ನೀರಾವರಿ ಸೌಕರ್ಯವನ್ನು ಹೆಚ್ಚಿಸುತ್ತೇವೆಂದು ಮಾನ್ಯ ಉಪಮಂತ್ರಿಗಳು ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟರು. ಬೆಂಗಾಡು ಪ್ರದೇಶವಾದ ಚಳ್ಳಕೆರೆಗೆ ನೀರಾವರಿ ಆಶ್ರಯವನ್ನು ಮಾಡಿಕೊಡಿ ಎಂದರೆ ಅವರು ಬರೀ ಭಾಷಣ ಮಾಡುತ್ತಾರೆ, ಭಾಷಣದ ಸುರಿಮಳೆ ಮಾಡುತ್ತಾರೆಂದು ನಾನು ವಿಷಾದದಿಂದ ಹೇಳಬೇಕಾಗಿದೆ.

ನಮ್ಮ ತಾಲ್ಲೂಕಿನಲ್ಲಿ ಹತ್ತಾರು ಸಣ್ಣ ನೀರಾವರಿ ಯೋಜನೆಗಳ ಎಸ್ಟಿಮೇಟ್ ತಯಾರಾಗಿ ಸರಕಾರಕ್ಕೆ ಹೋಗಿವೆ. ಹೋದ ವರ್ಷ ನೀರಾವರಿ ಸಪ್ತಾಹ ಮಾಡಿ ಗುದ್ದಲಿ ಪೂಜೆ ಸಹ ಮಾಡಿದರು. ಆದರೆ ಕೆಲಸ ಪ್ರಾರಂಭವಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿ ದೇವರು ಕೊಟ್ಟ ಒಂದು ವರ ಇದೆ. ವೇದಾವತಿ ನದಿಯಿಂದ ಕಾಲುವೆಯ ಮೂಲಕ ನೀರು ತೆಗೆದುಕೊಂಡು ವ್ಯವಸಾಯ ಮಾಡುತ್ತಾರೆ. ಇದರಲ್ಲಿ ಸ್ವಲ್ಪ ತೊಂದರೆ ಇದೆ. ಅದನ್ನು ಪರಿಹಾರ ಮಾಡಬೇಕು ಕೇಳಿಕೊಂಡಿದ್ದೇವೆ. ಇಪ್ಪತ್ತನವರೆಗೂ ಏನೂ ಕೆಲಸವಾಗಿಲ್ಲ. ಸಕಾಲದಲ್ಲಿ ಪರಿಹಾರ ಮಾಡಿದ್ದರೆ ಇಂದು ಇಂಥ ಪರಿಸ್ಥಿತಿ ಬರುತ್ತಾ ಇರಲಿಲ್ಲ. ನಮ್ಮದು ಗಾಳಿಯ ಸಲಹೆ ಅಲ್ಲ. ಕಾಂಕ್ರೀಟ್ ಸಲಹೆ ಮಾಡುತ್ತೇವೆ. ಪಂಪುಸೆಟ್ಟುಗಳನ್ನು ಸಹಕಾರ ಪದ್ಧತಿಯ ಮೇಲೆ ಒದಗಿಸಬೇಕು. ನಮ್ಮ ತಾಲ್ಲೂಕಿನಲ್ಲಿ ಭೂಮಿಲ್ಲಿ ನೀರು ಜಾಸ್ತಿ ಇದೆ. ದೊಡ್ಡ ದೊಡ್ಡ ನೀರಾವರಿ ಯೋಜನೆ ಮಾಡುವುದಕ್ಕಿಂತ ಒಂದು ಎಕರೆಗೆ ಒಂದು ಸಾವಿರ

ರೂಪಾಯಿ ಸಹಾಯ ಮಾಡುವುದರಿಂದ ಪಂಪ್‌ಸೆಟ್ಟು ಕೂಡಿಸಿ ನೀರು ಒದಗಿಸಿ ಕೊಡಬಹುದು. ಹತ್ತಾರು ಜನರನ್ನು ಸೇರಿಸಿ ಒಂದು ಬಾವಿ ಮಾಡಿಸಿ ಕೊಟ್ಟರೆ ಅನುಕೂಲವಾಗುತ್ತದೆ. ಇದಕ್ಕೆ ಗಮನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಯಾವ ಕೆಲಸವನ್ನಾದರೂ ಮಾಡಿ ಎಲ್ಲರಿಗೂ ಅನುಕೂಲವಾಗುವ ಹಾಗೆ ರೈತರಿಗೆ ಹೆಚ್ಚು ಪಂಪುಸೆಟ್ಟು ಒದಗಿಸಿಕೊಡಬೇಕು. ಪ್ರತಿಯೊಬ್ಬ ರೈತನೂ ಅರ್ಜಿ ಹಾಕಿದ್ದಾನೆ. ಕೂಡಿಸುವ ವ್ಯವಸ್ಥೆ ಮಾಡಬೇಕು ಜನರಿಗೆ ಬಹಳ ಅನುಕೂಲವಾಗಿದೆ. ಉಪಯೋಗವಾಗಿದೆ ಎಂದು ಹೇಳಬಯಸುತ್ತೇನೆ. ಅಭಾವ ಪರಿಸ್ಥಿತಿಯನ್ನು ಕಾಯಂ ಆಗಿ ಹೋಗಲಾಡಿಸಲು ಚಿತ್ರದುರ್ಗ ಜಿಲ್ಲೆಯಲ್ಲಿ ಅಫೋರ್ ಸ್ಟೇಶನ್ ಕೆಲಸವನ್ನು ತೆಗೆದುಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ. ವಿಶೇಷವಾಗಿ ಸಹಸ್ರಾರು ಎಕರೆ ಅಮೃತ ಮಹಾಲ ಕಾವಲು ಬಂಜರು ಭೂಮಿ ಇದೆ. ಗಿಡ ಗೆಂಟೆ ಬೆಳೆಸಿ ವನ ಸಂಪತ್ತು ಬೆಳಸ ಬೇಕು. ಮಳೆಗೂ ವನ ಸಂಪತ್ತಿಗೂ ನಿಕಟ ಸಂಬಂಧ ಇದೆ ಎಂದು ತಜ್ಞರು ಹೇಳುತ್ತಾರೆ. ನಮ್ಮ ಜಿಲ್ಲೆಯಲ್ಲಿ ರಂಜಕ, ಕಬ್ಬಿಣ ಅದಿರು ಅಂದರೆ ಮ್ಯಾಂಗಾನೀಜ ಓರ್ ಸಿಕ್ಕುತ್ತದೆ. ದೊಡ್ಡ ಫ್ಯಾಕ್ಟರಿ ಪ್ರಾರಂಭ ಮಾಡಿದರೆ ಅನೇಕರಿಗೆ ಉದ್ಯೋಗ ಸಿಕ್ಕುತ್ತದೆ. ಇದಲ್ಲದೆ ಚಿತ್ರದುರ್ಗ ಬಳ್ಳಾರಿ ರೈಲು ಮಾರ್ಗ ಹಾಕಿಸಿ ಕೊಡ ಬೇಕು ಇದರಿಂದ ಲಕ್ಷಾಂತರ ಜನರಿಗೆ ಕೂಲಿ ಸಿಕ್ಕುತ್ತದೆ ಮತ್ತು ವಾಣಿಜ್ಯ ಸೌಕರ್ಯ ದೊರೆಯು ತ್ತದೆ. ರೈಲ್ವೆ ಸೌಕರ್ಯ ಮಾಡಿಸಿ ಕೊಡುವುದರಿಂದ ಈ ಪ್ರದೇಶ ಮುಂದುವರಿಯುವುದಲ್ಲದೆ ಜನರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಒಂದು ಫಾಮಿನ್ ರಿಲೀಫ್ ಬೋರ್ಡ ಸ್ಥಾಪನೆ ಮಾಡಿ ಯೋಜನೆ ಕಾರ್ಯಗತ ಮಾಡಲು ಸಾಧ್ಯವಿದೆ ಎಂದು ಒತ್ತಾಯ ಪಡಿಸುತ್ತೇನೆ. ನನಗೆ ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸು ತ್ತೇನೆ.

ಶ್ರೀ ವಾಲಿ ಚನ್ನಪ್ಪ (ಸಂಪಗಾಂವ್ 1).—ಮಾನ್ಯ ಸಭಾಪತಿಗಳೇ, ಇದುವರೆಗೆ ಅನೇಕ ಮಿತ್ರರು ಮಾತನಾಡಿ ಬರಗಾಲ ಪರಿಹಾರಕ್ಕೆ ಏನೇನು ಮಾಡಬೇಕು ಎಂಬುದನ್ನು ಹೇಳಿದ್ದಾರೆ. ಮಾತನಾಡಿ ಹೇಳುವವರಿಗೆ ಬರಗಾಲ ಇದ್ದಂತೆ ಕಾಣುವುದಿಲ್ಲ. ಒಂದೇ ಸಲ ಬಹಳ ಜೋರಾಗಿ ಭಾಷಣ ಮಾಡುತ್ತಾರೆ. ಅಷ್ಟರಲ್ಲಿಯೇ ಮಳೆಯಾಗುತ್ತದೆ ಊರಿಗೆ ಹೋಗುವಷ್ಟರಲ್ಲಿ ಬರಗಾಲ ಹೋಗಿ ಬಿಟ್ಟಿರುತ್ತದೆ. ಪರಿಹಾರ ಕಾಮಗಾರಿ ಕೆಲಸಗಳನ್ನು ಇಲ್ಲಿಗೇ ನಿಲ್ಲಿಸಿ ಬಿಡುತ್ತಾರೆ. ಮಳೆ ಯಾದರೆ ಬರಗಾಲ ಇರುವುದಿಲ್ಲ ನೈಸರ್ಗಿಕವಾಗಿ ಬರಗಾಲ ಬರುವುದು ಮಂತ್ರಿ ಮಂಡಳ ಉರಳಲಿ ಉರಳದೇ ಇರಲಿ ಅದು ತಪ್ಪುವ ಹಾಗೆ ಕಾಣುವುದಿಲ್ಲ. ನಿಸರ್ಗದಿಂದ ಮಳೆ ತರಿಸುವುದು ನಿಲ್ಲಿಸು ವುದು ನಮ್ಮ ಕೈಯಲ್ಲಿಲ್ಲ. ಅನೇಕ ಕಡೆ ಭೂಕಂಪ ಜ್ವಾಲಾಮುಖಿ ಆಗುತ್ತವೆ ಸಮುದ್ರ ಉಕ್ಕೇರಿ ಬಂದು ಧಂಡೆಯಲ್ಲಿರುವುದನ್ನು ಕೊಚ್ಚಿಕೊಂಡು ಹೋಗುತ್ತವೆ, ಅನಾವೃಷ್ಟಿ ಉಂಟಾಗುತ್ತದೆ, ಅತಿವೃಷ್ಟಿಯಾಗುತ್ತದೆ ಇದು ಮಂತ್ರಿಗಳ ಕೈಯಲ್ಲಿ ಇದೆಯೇ ? ಇದು ದೈವಾಧೀನವಾದದು. ದೇಶದಲ್ಲಿ 38,000 ಕೆರೆಗಳು ಇವೆ. ಹಳೇ ಮೈಸೂರು ಪ್ರದೇಶದಲ್ಲಿ 27000 ಕೆರೆಗಳು ಇದ್ದರೆ ಬಾಕಿ ಎಲ್ಲಾ ಭಾಗದಲ್ಲಿ 9000 ಕೆರೆಗಳು ಇವೆ. ಇದರಲ್ಲಿ ಬಹಳ ವ್ಯತ್ಯಾಸ ಕಂಡುಬರುತ್ತದೆ. ಇದಕ್ಕೆ ವಿಷಾದ ಪಡಬೇಕಾಗಿಲ್ಲ. ಇಲ್ಲಿ ಹಣ ಹೆಚ್ಚು ಖರ್ಚಾಗುತ್ತದೆ ; ನಮಗೆ ಏನೂ ಇಲ್ಲ ಎಂದು ವಿಷಾದ ವಾಗುವುದಿಲ್ಲ. ಬರತಕ್ಕಂಥ ದುಡ್ಡಿನಲ್ಲಿ ನೀರಾವರಿಯ ಮೇಲೆ ಎಷ್ಟೋ ಖರ್ಚು ಮಾಡುತ್ತಾರೆ. ಈ ದುಡ್ಡು ಎಲ್ಲಿಂದ ಬರಬೇಕು ? ನೀರಾವರಿ ಯೋಜನೆ ಆಗಬೇಕು, ಹಾರ್‌ಬರ್ ಆಗಬೇಕು, ರೋಡು ಆಗಬೇಕು, ಎಲ್ಲಾ ಆಗಬೇಕಾಗಿದೆ. ಬಜೆಟ್ಟಿನಲ್ಲಿ ಇದಕ್ಕೆ ದುಡ್ಡು ಎಷ್ಟಿದೆ ಎಂಬುದನ್ನು ತಿಳಿದು ಕೊಂಡ ಮುಂದಿನ ಕ್ರಮದ ಬಗ್ಗೆ ಯೋಚನೆ ಮಾಡಬೇಕು. ದೇಶದಲ್ಲಿ ಇಂದು ಜನಸಂಖ್ಯೆ ವಿಪರೀತ ಬೆಳೆಯುತ್ತಿದೆ. ಜನಸಂಖ್ಯೆ ಬೆಳೆಯುವುದನ್ನು ಮೊದಲು ತಡೆಗಟ್ಟಬೇಕಾದುದು ಬಹಳ ಅಗತ್ಯ ಇದೆ. ಕುಟುಂಬ ಯೋಜನೆಯು ಪ್ರಥಮ ಪಾಠ ಇಲ್ಲಿಯ ಎಂ. ಎಲ್. ಎ. ಮಿನಿಸ್ಟರ್ಸ ಇವರಿಗೆ ಇಂಜೆಕ್ಷನ್ ಕೊಟ್ಟು ಇನ್ನು ಮುಂದೆ ಮಕ್ಕಳನ್ನು ಹಡೆಯಬೇಡಿ ಎಂದು ತಿಳಿಸಬೇಕು. ಹೋಟೆಲ್ ಸಿನೆಮಾ ಥಿಯೇಟರ್ ಎಲ್ಲಿ ಹೋದರೂ ಜನರೂ ಸಾಲು ಸಾಲಾಗಿ ಕ್ಯೂದಲ್ಲಿ ನಿಂತಿರುತ್ತಾರೆ. ಜಾಗವೇ ಸಿಕ್ಕುವುದಿಲ್ಲ. ಎಲ್ಲಾ ದುಡ್ಡು ಎಲ್ಲಿ ಹೋಗುತ್ತದೆಯೋ ನಮಗೆ ತಿಳಿಯುವುದಿಲ್ಲ. ದೇಶದಲ್ಲಿಯ ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸ ಬೇಕಾದರೆ ಮೊದಲು ಮಕ್ಕಳು ಹಡೆಯುವುದನ್ನು ತಪ್ಪಿಸ ಬೇಕು. ಜನಸಂಖ್ಯೆ ಕಡಮೆಯಾಗಲು ನಿಯಂತ್ರಣ ಹಾಕಬೇಕು ಜನಸಂಖ್ಯೆ ಕಡಮೆಯಾಗಲು ಏನಾ ದರೂ ಉಪಾಯ ಮಾಡಿದರೆ ಬರಗಾಲ ಶಾಶ್ವತವಾಗಿ ಪರಿಹಾರವಾಗುತ್ತದೆ.

ಇನ್ನು ನಮ್ಮ ಜಿಲ್ಲೆಯ ಬಗ್ಗೆ ಹೇಳಲು ಬಹಳ ದುಃಖವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಮೂರು ದೊಡ್ಡ ಹೊಳೆಗಳು ಅಂದರೆ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ಹರಿಯುತ್ತವೆ. ಹೊಳೆಯ ನೀರು ಹೊಲಗಳಿಗೆ ಹೋಗಲು ಯಾವ ಯೋಜನೆ ವ್ಯವಸ್ಥೆ ಇಲ್ಲ. ನೀರಿನ ಸೌಕರ್ಯವಿರುವ ಕಡೆ ಹೆಚ್ಚು ಉತ್ಪತ್ತಿ ಬರುತ್ತದೆ. ಚಿಕ್ಕೋಡಿ ತಾಲ್ಲೂಕಿನಲ್ಲಿ ಒಂದು ಎಕರೆ ಎಲೆಯ ತೋಟದಿಂದ ಹತ್ತು

(ಶ್ರೀ ಪಾಲಿ ಚೆನ್ನಪ್ಪ)

ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ. ಕಾಫಿ ತೋಟದ ಹಾಗೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಎಲೆಯ ತೋಟ ಇವೆ. ನಮ್ಮ ಸಂಪಗಾಂವ್ ತಾಲ್ಲೂಕು ವಿಜಾಪುರದ ಬರಗಾಲ ಪ್ರದೇಶಕ್ಕೆ ಸಮೀಪ ಇರುವುದರಿಂದ ಬರಗಾಲದಿಂದ ಇಲ್ಲಿಯ ಪರಿಸ್ಥಿತಿ ಕೆಟ್ಟುಹೋಗಿದೆ.

ಹೆಚ್ಚು ಉತ್ಪನ್ನ ಮಾಡಬೇಕೆಂದು ಹೇಳುತ್ತಾ ಇದ್ದೀರಿ ನಮ್ಮಲ್ಲಿ ಮೂರು ಹಳ್ಳಗಳು ಇವೆ, ಕಿತ್ತೂರಿನ ಹತ್ತಿರ 6 ಮೈಲಿ ಮೇಲೆ ಒಂದು ದೊಡ್ಡ ಹೊಳೆ ಇದೆ. ಸಂಪಗಾಂವದಿಂದ 2 ಮೈಲಿ ಮೇಲೆ ತಿಗಡಿ ಹರಿನಾಲಾ ಎಂದು ಹೇಳಿ ಒಂದು ಕೋಟಿ ರೂಪಾಯಿಯ ಯೋಜನೆ ಇದೆ. ಒಂದೊಂದು ಇಂಚಿನಂತೆ ಅದು ವರ್ಷ ವರ್ಷೇ ನಡೆಯುತ್ತಾ ಇದೆ ಅಂದಮೇಲೆ ಇದು ಮುಗಿಯುವುದೆಂದು ? ಮತ್ತು ಚಿಕ್ಕ ಬಾಂಡುಗಳನ್ನು ಮಾಡಲಿಕ್ಕೆ ಎಷ್ಟೋ ಮಂದಿ ಡೆಪ್ಯೂಟಿ ಮಿನಿಸ್ಟರುಗಳು ಸಹಾಯ ಮಾಡಿದ್ದಾರೆ; ಮಾಡಿಲ್ಲ ಎಂದು ಹೇಳುವುದಿಲ್ಲ. ಅವರು ಫೈಲ್ ಕಳುಹಿಸುತ್ತಾರೆ ಅದು ಕಳುಹಿಸಿ ಒಂದು ವರ್ಷ ಆಯಿತು ಇನ್ನೂ ಈತನಕ ಏನೂ ಆಗಿಲ್ಲ. ಬಳ್ಳಾರಿ ಹಳ್ಳ ಎಂದು ಇದೆ. ಪ್ರತಿ ವರ್ಷ ಸಾವಿರಾರು ಎಕರೆ ಭೂಮಿ ಮುಳುಗಡೆಯಾಗುತ್ತದೆ. ಅದನ್ನು ಬೇರೆ ಕಡೆಗೆ ತಿರುಗಿಸಿ ಅಥವಾ ಎತ್ತರ ಮಾಡಿಸಿರಿ ಎಂದು ಹತ್ತು ಸಲ ಹೇಳಿಕೊಂಡೆವು, ವಿನಂತಿ ಮಾಡಿಕೊಂಡೆವು ದಾತಾರ್ ಅವರು ಬಂದಾಗ ಅವರನ್ನು ಅಂಗಲಾಚಿ ಬೇಡಿಕೊಂಡೆವು. ಇನ್ನೂ ತನಕ ಆಗಿಲ್ಲ ಅವರ ಮುಖ ಕೂಡ ತೋರಿಸಲಿಲ್ಲ ಅವರೇನೋ ಈಗ ಸ್ವರ್ಗಕ್ಕೆ ಹೋದರು, ಇರಲಿ. ಯೋಜನೆಗಳನ್ನು ತೆಗೆದುಕೊಳ್ಳುವಾಗ ದುಡ್ಡಿಲ್ಲ ಎಂದು ಹೇಳುತ್ತೀರಿ ಯುದ್ಧದ ಪರಿಸ್ಥಿತಿ ಎಂದು ಹೇಳುತ್ತೀರಿ ಎಷ್ಟು ದುಡ್ಡು ಖರ್ಚುಮಾಡಬೇಕೆಂದಿದ್ದೀರೊ ಅದಕ್ಕೆ ಶಾಶ್ವತವಾದ ಒಂದೇ ಯೋಜನೆಯನ್ನು ತೆಗೆದುಕೊಳ್ಳಿ. ನಮ್ಮ ಕಡೆ 7-8 ಅತಿ ಮುಖ್ಯವಾದ ಹಳ್ಳಗಳು ಇವೆ. ಅವಕ್ಕೆ ಚಿಕ್ಕ ಬಾಂದಾರುಗಳನ್ನು ಕಟ್ಟಿಸಬೇಕಾಗಿದೆ. ಬಸವನಹಳ್ಳ ಎಂದು ಇದೆ 5 ಸಾವಿರ ರೂಪಾಯಿ ಖರ್ಚು ಮಾಡಿದರೆ 50 ಎಕರೆ ಭೂಮಿ ನೀರು ಉಣ್ಣುತ್ತದೆ. ರೈತರು ಬೇಸಿಗೆ ಬಂದ ಕೂಡಲೇ ಸಾವಿರ ಎರಡು ಸಾವಿರ ರೂಪಾಯಿ ಖರ್ಚು ಮಾಡಿ ಒಡ್ಡು ಕಟ್ಟುತ್ತಾರೆ, ಕಟ್ಟಿದ ಮೇಲೆ ಮಳೆ ಬಂದ ಕೂಡಲೇ ಕೊಚ್ಚಿಕೊಂಡು ಹೋಗುತ್ತದೆ, ಇದರಿಂದ ರೈತರಿಗೆ ನಷ್ಟ ಅಲ್ಲದೇ ವಿಪರೀತ ಕಷ್ಟವಾಗುತ್ತಿದೆ. ಚಿವಟಗುಂಡಿ ಎಂಬ ಒಂದು ಹಳ್ಳ ಇದೆ ನೀರು ಬೇಕಾದಷ್ಟು ಹರಿದು ಹೋಗುತ್ತದೆ ಅದೂ ಕೂಡ ಮಾಡಿಲ್ಲ ಇಂತಹ ಸಣ್ಣ ಸಣ್ಣ ಬಾಂಧರಗಳನ್ನು ಮಾಡಲು 5-8-10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಈವತ್ತು ಬಲವತ್ತರವಾಗಿ ಬೇಕಾಗಿರತಕ್ಕಂಥ ಆಹಾರದ ಉತ್ಪಾದನೆ ಮಾಡಿಕೊಳ್ಳಬಹುದು. ದೊಡ್ಡ ದೊಡ್ಡ ದೇಸಾಯಿಗಳಿಗೆ ಇನಾಂದಾರರಿಗೆ ಬ್ರಿಟಿಷರ ಕಾಲದಲ್ಲಿ 5 ಎಕರೆಯಿಂದ ಹಿಡಿದು ಸಾವಿರ ಎಕರೆಗಳ ವರೆಗೂ ಉಂಬಳಿ ಹಾಕಿಕೊಟ್ಟಿದ್ದಾರೆ. ಗುಡ್ಡಗಾಡುಗಳನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿದ್ದಾರೆ. ಅವರು ಅದನ್ನು ಏನು ಮಾಡಿದ್ದಾರೆ ? ಅದರಲ್ಲಿ ಯಾವ ಮರಗಳನ್ನು ಬೆಳೆದಿದ್ದಾರೆ, ಗಂಧದ ಮರಗಳು ಇಲ್ಲಿ ಎಷ್ಟು ಇವೆ. ತೇಗಿನ ಮರಗಳು ಎಷ್ಟಿವೆ ಎಂಬುದನ್ನು ಏನಾದರೂ ನೋಡಿದ್ದೀರಾ ? ಅಲ್ಲಿ ರೈತರು ಯಾರೂ ನೇಗಿಲು ಹೊಡೆಯುವ ಹಾಗಿಲ್ಲ, ಅವರೂ ಕೂಡ ವ್ಯವಸಾಯ ಮಾಡುವ ಹಾಗಿಲ್ಲ; ಈ ಪರಿಸ್ಥಿತಿ ಇದೆ. ಆದ್ದರಿಂದ ಅವುಗಳ ವಿಷಯದಲ್ಲೂ ಸಹ ನೀವು ಒಂದು ಶಾಶ್ವತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಯೋಗ್ಯವಾಗುತ್ತದೆ. ಇಲ್ಲದೇ ಇದ್ದರೆ ಇದೇ ರೀತಿ ಮಕ್ಕಳು ಹಡೆದುಕೊಂಡು ಹೋಗಿ ಆಹಾರದ ಕೊರತೆ ಉಂಟಾಗುತ್ತಾ ಹೋದರೆ ಏನೂ ಉಪಯೋಗವಾಗುವುದಿಲ್ಲ ಎಂದು ವಿನಂತಿ ಮಾಡಿಕೊಂಡು ಅಧ್ಯಕ್ಷರು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಟಿ. ರಂಗಪ್ಪ (ಹೊಸದುರ್ಗ).—ಮಾನ್ಯ ಸಭಾಪತಿಗಳೇ, ಈ ದಿವಸ ತಂದಿರತಕ್ಕ ನಿರ್ಣಯದ ಮೇಲೆ ಈಗಾಗಲೇ ನನ್ನ ಮಾನ್ಯ ಸ್ನೇಹಿತರು ಅನೇಕ ಜನ ಮಾತನಾಡಿದಾರೆ ಮತ್ತು ಅನೇಕ ವಿಷಯಗಳನ್ನು ಸರ್ಕಾರದವರ ಅವಗಾಹನೆಗೆ ತಂದಿದ್ದಾರೆ. ನಾನಾದರೂ ಈ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಇತ್ತೀಚೆಗೆ ಉಂಟಾಗಿರತಕ್ಕ ಅಭಾವ ಪರಿಸ್ಥಿತಿಯಿಂದಾಗಿ ರೈತರ ಜೀವನದ ಪರಿಸ್ಥಿತಿ ಎಂತಹ ಕಷ್ಟದಲ್ಲಿದೆ ಎಂಬದನ್ನು ಸಭೆಯ ಅವಗಾಹನೆಗೆ ತರುತ್ತಾ ಇದ್ದೇನೆ. ಆಹಾರದ ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾದರೆ ದೇಶದಾದ್ಯಂತ ಒಂದು ಶಾಶ್ವತವಾದ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಕೊಳ್ಳಬೇಕಾಗಿದೆ ಮತ್ತು ಈ ಒಂದು ಕಾರ್ಯಕ್ರಮದಿಂದಲೇ ರೈತರ ಜೀವನ ಉನ್ನತಮಟ್ಟಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ನಮ್ಮ ದೇಶದಲ್ಲಿ ಇತ್ತೀಚೆಗೆ ಈ ಪ್ರಾಜೆಕ್ಟುಗಳ ಕೆಲಸ ಬಹಳ ನಿಧಾನವಾಗಿ ನಡೆಯುತ್ತಾ ಇದೆ, ಇದರ ಕಾರ್ಯಕ್ರಮ ಅಥವಾ ನಿರ್ಮಾಣದ ಕೆಲಸವು ಯಶಸ್ವಿಯಾಗಿ ಆದಷ್ಟು ಜಾಗ್ರತೆಯಾಗಿ ಆಗದೇ ಇದ್ದರೆ ಈ ಒಂದು ಅಭಾವ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ನಾನು ನಮ್ಮ ತಾಲ್ಲೂಕಿನ ಬಗ್ಗೆ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 35 ದೊಡ್ಡ ಕೆರೆಗಳು ಇವೆ ಈ 35 ಕೆರೆಗಳ ಹಿಂದೆ ಸುಮಾರು ಒಂದು

ಸಾವಿರಕ್ಕೆ ಮೇಲ್ಪಟ್ಟು ಎಕರೆ ತರೀ ಭೂಮಿ ಅಚ್ಚುಕಟ್ಟಾಗತಕ್ಕ ಭೂಮಿ ಇದೆ. ಈ ಕೆರೆಗಳ ರಿಪೇರಿ ಎಷ್ಟೋ ವರ್ಷಗಳಿಂದಲೂ ಇವತ್ತಿನವರೆಗೂ ಆಗದೇ ಹಾಗೆಯೇ ನಿಂತಿದೆ. ಇದರಲ್ಲಿ ಮುಖ್ಯವಾದ ನಿಲುಗುಂದ ಕೆರೆ, ಬಾಗೂರು ಕೆರೆ, ಬಲ್ಲಾಳ ಸಮುದ್ರ, ದೇವಸಮುದ್ರ ಕೆರೆಗಳು ಅತಿ ಮುಖ್ಯವಾದ ಕೆರೆಗಳು. ನಿಲುಗುಂದ ಕೆರೆಯಲ್ಲಿ ಒಂದು ವರ್ಷದಲ್ಲಿ 12 ತಿಂಗಳೂ ನೀರು ನಿಂತಿರುತ್ತದೆ. ಈ ಕೆರೆಯ ಹಿಂದುಗಡೆ 400 ಎಕರೆ ಅಚ್ಚುಕಟ್ಟು ಇದೆ. ಇಷ್ಟಿದ್ದಾಗ್ಯೂ 10-12 ವರ್ಷಗಳಾದರೂ ಇನ್ನೂ ಈ ಕೆರೆ ರಿಪೇರಿ ಆಗದೇ ನೀರು ಬಹಳ ವೇಸ್ಟ್ ಆಗುತ್ತಾ ಇದ್ದು ಹೀಗಾಗುವುದರಿಂದ ಆ ಅಚ್ಚುಕಟ್ಟಿನಲ್ಲಿರತಕ್ಕ ವ್ಯವಸಾಯ ಮಾಡತಕ್ಕ ರೈತರಿಗೆ ಸರಿಯಾಗಿ ನೀರು ದೊರಕದೆ, ಸರಿಯಾದಂಥ ಫಸಲು ಸಿಕ್ಕದೇ ಅವರು ತೊಂದರೆಗೆ ಈಡಾಗುತ್ತಾ ಇದ್ದಾರೆ. ಈ ಕೆರೆಗೆ ಹೆಚ್ಚಿನ ನಿಗಾ ಕೊಟ್ಟು ಆದಷ್ಟು ಬೇಗ ರಿಪೇರಿ ಮಾಡಿಸಿ ರೈತರ ವ್ಯವಸಾಯದ ಒಂದು ಉದ್ಯೋಗ ಯಶಸ್ವಿಯಾಗಿ ನಡೆಯುವುದಕ್ಕೆ ಸಹಕರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮತ್ತು ಅಲ್ಲಿ ಹೀಗೇ ಇನ್ನೊಂದು ದೇವಪುರದ ಕೆರೆ ಎಂದು ಇದೆ. ಆ ಕೆರೆಯನ್ನು ಕಟ್ಟಿಸಿ ಕೊಡಬೇಕೆಂದು ಕಳೆದ 4-5 ವರ್ಷಗಳಿಂದ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಆ ಕೆರೆಯ ಸರ್ವೆ—ಎಸ್ಟಿಮೇಟ್‌ಗಳೆಲ್ಲ ಮಂಜೂರಾಗಿ ಟೆಂಡರುಗಳನ್ನೂ ಸಹ ಕರೆದು ಕೆಲಸವನ್ನು ನಡೆಸಬೇಕೆಂದು ತೀರ್ಮಾನವಾಗಿತ್ತು. ಆದರೂ ಅದೇಕೋ ಆ ಕೆಲಸ 3-4 ವರ್ಷಗಳಿಂದ ಹಗೆಯೆ ಹಾಗೇ ನಿಂತು ಹೋಗಿದೆ. ಎಗ್ಸಿಕ್ಯುಟೀವ್ ಇಂಜಿನಿಯರು ಆ ಬಗ್ಗೆ 50 ಸಾವಿರ ರೂಪಾಯಿಗಳಿಗೆ ಒಂದು ರೆವೈಸ್ಡ್ ಎಸ್ಟಿಮೇಟನ್ನು ತಯಾರಿಸಿ, ಅದನ್ನು ಶಿವಮೊಗ್ಗ ಡಿವಿಜನ್ ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಕಳುಹಿಸಿದ್ದಾರೆ. ಆರು ತಿಂಗಳಾದರೂ ಅದಿನ್ನೂ ಸ್ಯಾಂಕ್ಷನ್ ಆಗಿಲ್ಲ. ಕಂಟ್ರ್ಯಾಕ್ಟರು ಆ ಕೆಲಸವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಟ್ಟಿದ್ದಾರೆ. ಹೇಗೆಲ್ಲಾ ಆಗುತ್ತಿರುವುದರಿಂದ ರೈತರಲ್ಲಿದ್ದ ಆ ಉತ್ಸಾಹವೆಲ್ಲ ಕಂದಿ ಹೋಗುತ್ತಿದೆ. ಏನೇ ಆಗಲೀ ಸರ್ಕಾರದವರಿಂದ ರೈತಾಪಿವರ್ಗಕ್ಕೇನೂ ಹೆಚ್ಚಿನ ಸಹಾಯ ದೊರೆಯುವಂತಿಲ್ಲ ಎಂಬ ಮನೋಭಾವ ಆ ಜನರಲ್ಲಿ ಬಂದುಹೋಗಿದೆ. ಆದುದರಿಂದ ಇನ್ನಾದರೂ ಆ ಹಳೇ ಕೆರೆಗಳ ರಿಪೇರಿ ಹಾಗೂ ಹೊಸಕೆರೆಗಳ ನಿರ್ಮಾಣ ಇವುಗಳ ವಿಚಾರದಲ್ಲಿ ಸರ್ಕಾರದವರು ಹೆಚ್ಚು ನಿಗಾ ವಹಿಸಿ ಅವುಗಳನ್ನು ಯಶಸ್ವಿಯಾಗಿ ನಡೆಸಲೇಬೇಕೆಂದು ಕೇಳಿಕೊಳ್ಳುತ್ತೇನೆ. ಹೇಗೇ ಹೊಸದುರ್ಗ ತಾಲ್ಲೂಕಿನಲ್ಲಿ ಮಾಡಾಳು ಪ್ರದೇಶ ಬಹಳ ಅಭಾವಕ್ಕೊಳಗಾದ ಭಾಗ. ಆ ಭಾಗದಲ್ಲಿ ನಾಕೀಕೆರೆ—ಕೆಂಕೆರೆ ಎಂದು ಎರಡು ಕೆರೆಗಳನ್ನು ಕಟ್ಟಿಸಿ ಕೊಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಲೂನ ಹತ್ತಿರ ಎಂದರ ನಾನೀಗ ಹೇಳಿದ ಎರಡು ಕೆರೆಗಳ ಹತ್ತಿರದಲ್ಲಿ ಎರಡು ದೊಡ್ಡ ಹಳ್ಳಗಳು ಹರಿಯುತ್ತಿವೆ. ಆ ಎರಡು ಕೆರೆಗಳನ್ನು ಕಟ್ಟಿಸಿದರೆ ಅವುಗಳ ಕೆಳಗೆ ನೂರಾರು ಎಕರೆ ತರೀ ಜಮೀನಾಗಲು ಅವಕಾಶವಿದೆ. ಈ ಎರಡು ಕೆರೆಗಳನೂ ಸರ್ಕಾರದವರು ಜರೂರಾಗಿ ಮಾಡಿಸಿಕೊಟ್ಟರೆ ಅಭಾವ ಪರಿಸ್ಥಿತಿಗೊಳಗಾದ ಜನರ ಜೀವನೋಪಾಯಕ್ಕೆ ಸ್ವಲ್ಪ ಅನುಕೂಲಮಾಡಿ ಕೊಟ್ಟಹಾಗೆ ಆಗುತ್ತದೆ. ಆದ್ದರಿಂದ ಆ ಎರಡು ಕೆರೆಗಳನ್ನು ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿಗೆ ಪಂಪ್‌ಸೆಟ್‌ಗಳನ್ನು ಸರಿಯಾಗಿ ಕೊಡುತ್ತಿಲ್ಲ. ಜನರಿಂದ ಇವುಗಳಿಗಾಗಿ ನೂರಾರು ಅರ್ಜಿಗಳು ಬಂದಿವೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಕೇವಲ 4 5 ಜನರಿಗೆ ಮಾತ್ರ ಈ ಪಂಪ್‌ಸೆಟ್‌ಗಳು ಸ್ಯಾಂಕ್ಷನ್ ಆಗಿವೆ. ಹೀಗಾದರೆ ರೈತರ ಸಮಸ್ಯೆ ಬಗೆಹರಿದಂತಾಗಲಿಲ್ಲ. ಹೀಗೇ ಪಂಪ್‌ಸೆಟ್‌ಗಳಿಗಾಗಿ ಹೊಸದುರ್ಗ ತಾಲ್ಲೂಕ್ ಶ್ರೀರಾಂಪುರದಲ್ಲೂ ನೂರಾರು ಜನರು ಬಾವಿಗಳಿಗೆ ದುಡ್ಡು ಕಟ್ಟಿದ್ದಾರೆ. ಅವುಗಳ ಎಲೆಕ್ಟ್ರಿಫಿಕೇಷನ್ ಬಗ್ಗೆ ಸರ್ವೆ—ಎಸ್ಟಿಮೇಟ್ ಎಲ್ಲಾ ಆಗಿ ಆರು ತಿಂಗಳ ಮೇಲಾಯಿತು. ನಾನು ಈ ವಿಚಾರವನ್ನು ಚಿತ್ರದುರ್ಗ ಎಗ್ಸಿಕ್ಯುಟೀವ್ ಇಂಜಿನಿಯರಿಗೆ ಆ ಜನರಿಗೆ ಪಂಪ್‌ಸೆಟ್ ಮತ್ತು ಅಗತ್ಯವಾದ ವೈರ್ ಇತ್ಯಾದಿಗಳನ್ನೆಲ್ಲಾ ತರಿಸಿ ಕೊಡಬೇಕೆಂದು ಹೇಳಿದೆನು. ಅವರು ಈ ವರೆಗೂ ಈ ಕೆಲಸವನ್ನು ಬೇಗ ಟೇಪ್ ಮಾಡುತ್ತೇವೆಂದು ಹೇಳುತ್ತಿದ್ದವರು ಈ ಹಿಂದೆ ಈ ಕೆಲಸಗಳನ್ನೆಲ್ಲಾ ನಡೆಸಿ ಈಗ ಈ ವರ್ಷದ ಬಡ್ಜೆಟ್ಟಿನಲ್ಲಿ ಈ ಐಟಂಗೆ ಹಣವನ್ನೊದಗಿಸಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದವರು ಇಂಥಾದ್ದಕ್ಕೆಲ್ಲ ಆಸ್ಪದ ಕೊಡದೆ ಅಲ್ಲಿಗೆ ಅಗತ್ಯವಾಗಿ ಬೇಕಾಗಿರುವ ವೈರ್—ಪೋಲು ಇತ್ಯಾದಿಗಳನ್ನೆಲ್ಲಾ ಕೂಡಲೆ ಸಪ್ಲೆಮಾಡಿ ಆ ಕೆಲಸವನ್ನು ಕೂಡಲೆ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೇ ನಮ್ಮ ತಾಲ್ಲೂಕಿನಲ್ಲಿ ರಿಲೀಫ್ ಕಾಂಗಾರಿಯನ್ನೂ ಕೂಡ ಕೂಡಲೇ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ರಿಲೀಫ್ ಕಾಂಗಾರಿಯಲ್ಲಿ ಆ ಪ್ರದೇಶದಲ್ಲಿರತಕ್ಕ ಪ್ರತಿಯೊಂದು ಗೋಕಟ್ಟೆಗಳನ್ನೂ ರಿಪೇರಿ ಮಾಡಿಸತಕ್ಕದ್ದು ಅಗತ್ಯವೆಂದು ನಾನು ಭಾವಿಸುತ್ತೇನೆ. ಈ ಗೋಕಟ್ಟೆಗಳನ್ನು ಜೀರ್ಣೋದ್ಧಾರ ಮಾಡಿದರೆ ದನಕರುಗಳಿಗೂ—ಜನರಿಗೂ ತುಂಬಾ ಅನುಕೂಲವಾಗುತ್ತದೆ. ಈ ಕಾರ್ಯಗಳನ್ನೆಲ್ಲಾ ಜಾಗ್ರತೆಯಾಗಿ ಅಲ್ಲಿ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಒತ್ತಾಯ ಪೂರ್ವಕವಾಗಿ ಕೇಳಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಅಧ್ಯಕ್ಷ ಮಹಾಶಯರೇ, ಮೇಲಿಂದ ಮೇಲೆ ಅಭಾವ ಪರಿಸ್ಥಿತಿಗೆ ಕ್ಷಾಮಕ್ಕೆ ಒಳಗಾಗತಕ್ಕ ಪ್ರದೇಶಗಳಲ್ಲಿ ಧಾರ್ವಾಡ ಜಿಲ್ಲೆಯ ಉತ್ತರ ಮತ್ತು ಪೂರ್ವಭಾಗ ಬರುತ್ತದೆಂಬುದು ತಮ್ಮೆಲ್ಲರಿಗೂ ಗೊತ್ತಿರುವಂಥಾ ವಿಷಯವೇ ಆಗಿದೆ. ಆದರೆ ಆ ಭಾಗದ ರೈತರಲ್ಲಿ ಒಂದು ವೈಶಿಷ್ಟ್ಯವಿದೆ. ಅಲ್ಲಿರತಕ್ಕದ್ದೆಲ್ಲ ಡೀಪ್ ಬ್ಲಾಕ್ ಕಾಟನ್ ಸಾಯಿಲ್. ಅಂಥಾ ಆ ಎರೆ ಭೂಮಿಯಲ್ಲಿ ಬಾವಿ ತೆಗೆದು ವ್ಯವಸಾಯ ಮಾಡುತ್ತೇವೆಂದರೆ ಅದು ಖಂಡಿತ ಸಾಧ್ಯವಿಲ್ಲದ ಮಾತು. ಏಕೆಂದರೆ ಆ ಬಾವಿಗಳಿಂದ ದೊರೆಯತಕ್ಕ ನೀರೇನಿದೆ ಅದು ಸೌಳು ಇಲ್ಲವೇ ಉಪ್ಪು ನೀರು. ಆ ಪ್ರದೇಶದಲ್ಲಿ 100—125 ಫೀಟ್ ಆಳ ತೆಗೆದರೂ ನೀರು ದೊರೆಯುವುದೇ ದುರ್ಲಭ. ಇಂಥಾ ಕಷ್ಟ ಪರಿಸ್ಥಿತಿಯಿರುವುದರಿಂದ ಆ ಭಾಗದ ಜನರಿಗೆ ವರ್ಷಂಪ್ರತಿ ಕಂದಾಯವನ್ನು ಸಸ್ಪೆಂಡ್ ಮಾಡುತ್ತಿರುವ ವಿಚಾರ ತಮಗೆಲ್ಲರಿಗೂ ಗೊತ್ತಿದೆಯೋ—ಇಲ್ಲವೋ; ತಿಳಿಯದು. ಆ ಪ್ರದೇಶದಲ್ಲಿ ಈಗಲೂ ಮಳೆ ಪ್ರಾರಂಭವಾಗಿಲ್ಲ. ಹಾಗಿದ್ದರೂ ಜನರು ಒಣ ಭೂಮಿಯಲ್ಲೇ ಬಿತ್ತನೆ ಮಾಡಿದ್ದಾರೆ. ನಾನು ನೆನ್ನೆ ತಾನೆ ಅಲ್ಲಿಂದ ಬಂದೆನು. ಮಳೆ ಅಲ್ಲಿ ನೆನ್ನೆಯವರೆಗೂ ಇನ್ನೂ ಬಂದಿರಲಿಲ್ಲ. ಧಾರವಾಡಕ್ಕೆ ಉತ್ತರ ಮತ್ತು ಪೂರ್ವಕ್ಕೆ ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ಕುಡಿಯುವ ನೀರಿನ ತೊಂದರೆಯಂತೂ ಹೇಳತೀರದಾಗಿದೆ. ಯಾವುದೋ ಕಾಲಕ್ಕೆ ಕಟ್ಟಿಸಿದ ಕಟ್ಟೆಗಳಿಂದ ನೀರನ್ನು ತರಬೇಕಾಗಿದೆ. ಆದರೆ ಆ ಕಟ್ಟೆಗಳ ನೀರು ವರ್ಷ ಪೂರ್ತಿ ಪುರುವಟೆ ಆಗುವುದಿಲ್ಲ. ವರ್ಷದಲ್ಲಿ ಕೇವಲ 3—4 ತಿಂಗಳಿಗೆ ಮಾತ್ರ ಪುರುಸೊಟೆ ಆಗುತ್ತದೆ. ಇನ್ನು ವರ್ಷದಲ್ಲಿ 8 ತಿಂಗಳು ಕಾಲ ಈ ನೀರಿನ ಸಲುವಾಗಿ 3—4 ಮೈಲಿ ದಿನಂಪ್ರತಿ ಹೋಗಿ ತರಬೇಕಾದಂಥಾ ಪರಿಸ್ಥಿತಿ ಇದೆ. ಆದರೆ ನನ್ನ ಕೆಲವು ಮಿತ್ರರು ಆ ಮಲಪ್ರಭಾ ನೀರನ್ನು ತರಲು ಬೇಗ ಅಮಲು ಬಜಾವಣಿ ಮಾಡಿದರೆ ಈ ಪ್ರದೇಶಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಆ ರೀತಿ ಮಾಡಿದಾಗ್ಯೂ ಆ ಧಾರ್ವಾಡ ಜಿಲ್ಲೆಯ ಎಲ್ಲ ಪ್ರದೇಶಗಳಿಗೂ ಅದರಿಂದ ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಆಗುವುದಿಲ್ಲ. ಆದುದರಿಂದ ಆ ಮಲಪ್ರಭಾ ನೀರನ್ನು ಕೆಲವು ಭಾಗಗಳಿಗೆ ಪಂಪ್‌ಮಾಡಿ ಸರಬರಾಯಿ ಮಾಡಬೇಕಾಗುತ್ತದೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಇದು ಮೇಲಿಂದ ಮೇಲೆ ನಡೆಯುತ್ತಿರುವುದರಿಂದ ಅಲ್ಲಿಯ ಜನರು ಸರ್ಕಾರಕ್ಕೆ ಅರ್ಜಿ ಹಾಕಿದರೇನೂ ಪ್ರಯೋಜನವಾಗುವುದಿಲ್ಲ ಎಂದು ಮನಸ್ಸಿಗೆ ಧೈರ್ಯಮಾಡಿಕೊಂಡು ಅವರಿಗೆ ಎಂಥ ಸಂಕಟಗಳು ಬಂದರೂ ಅವುಗಳನ್ನು ಅನುಭವಿಸಿಕೊಂಡು ಹೋಗುತ್ತಿದ್ದಾರೆ. ವೃಥಾ 28 ಕಡೆ ಬಡಿದಾಡತೊಡಗಿದರೆ ಅದರಿಂದೇನೂ ಸಾರ್ಥಕವಾಗುವುದಿಲ್ಲ ಎಂಬುದು ಅವರ ಭಾವನೆ. ಈ ಹಿಂದೆ ಅವರು ಮುಂಬೈ ರಾಜ್ಯಕ್ಕೆ ಸೇರಿದ್ದಾಗಲೂ ಅವರಿಗೆ ತೀರಾ ತೊಂದರೆ ಬಂದಂಥಾ ಕಾಲದಲ್ಲಿ ಕೂಡ ಗೊಬ್ಬರಕ್ಕಾಗಲೀ—ಸಾಲಕ್ಕಾಗಲಿ 28 ಕಡೆ ಒದ್ದಾಡಿದರೂ ಪ್ರಯೋಜನವಾಗುತ್ತಿರಲಿಲ್ಲ. ಆ ಜನರು ಕ್ಷಾಮಪೀಡಿತ ಪ್ರದೇಶದಲ್ಲಿರುತ್ತಾರೆಂದು ಯಾವ ಸೊಸೈಟಿಯವರೂ ಅವರಿಗೆ ಸಾಲಕೊಡಲು ಸಿದ್ಧರಾಗಿರಲಿಲ್ಲ. ಆದುದರಿಂದ ನಾನೀ ಸಂದರ್ಭದಲ್ಲಿ ಸರ್ಕಾರದವರಿಗೆ ಸೂಚನೆಮಾಡಬಯಸುವುದೇನೆಂದರೆ—ಈಗ ರೈತರಿಗೆ ಕೊಡುತ್ತಿರುವ ತಗಾವಿ ಸಾಲಗಳೇನಿವೆ ಅವು ರೈತರಿಗೆ ಸಕಾಲಕ್ಕೆ ಸರಿಯಾಗಿ ಮುಟ್ಟುತ್ತಿಲ್ಲ. ಆದರಿಂದ ಜನರು ಬಹಳ ದಣಿದು ಹೋಗಿದ್ದಾರೆ. ಈ ಸಾಲ ಮಂಜೂರು ಮಾಡುವುದರಲ್ಲಿ ಅನೇಕ ಲೋಪದೋಷಗಳಿವೆ. ಅವುಗಳನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ—ಹಾಗೂ ಅದು ಸಮಂಜಸವೂ ಅಲ್ಲ. ಆದುದರಿಂದ ನಾನೀಗ ಕಂದಾಯ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುವುದೇನೆಂದರೆ—ರೈತರಿಗೆ ಈ ತಗಾವಿ ಸಾಲಗಳು ನೇರವಾಗಿ ಕಾಲಕ್ಕೆ ಸರಿಯಾಗಿ ಮುಟ್ಟುವಂತೆ ವ್ಯವಸ್ಥೆಮಾಡಬೇಕು. ಮುಂದಿನ ಬಿತ್ತನೆ ಕಾಲ ಪ್ರಾರಂಭವಾಗುವುದಕ್ಕೆ ಮುನ್ನವೇ ಅವರಿಗೆ ಈ ಬಿತ್ತನೆ ಬೀಜಗಳಿಗೆ ಗೊಬ್ಬರಕ್ಕೆ ಹಣ ಬೇಕಾಗಿರುವುದರಿಂದ ಆ ಕಾಲಕ್ಕೆ ಸರಿಯಾಗಿ ಅವರಿಗೆ ಈ ಸಾಲದ ಹಣ ಮುಟ್ಟುವಂತೆ ಅನುಕೂಲಮಾಡಿಕೊಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಸಹಕಾರಿ ಖಾತೆಯಲ್ಲಿ ಕೆಲವು ಮಾಧ್ಯಮಿಕ ದರ್ಜೆ ಸಾಲಗಳನ್ನು ಕೊಡುತ್ತಿದ್ದಾರೆ. ಈ ಸಾಲದಲ್ಲಿ ಶೇಕಡ 75—80ರಷ್ಟು ಸಾಲದ ಹಣವನ್ನು ಪರತ್ತು ಕೊಟ್ಟ ವಿನಾ ಅವರಿಗೆ ಬೇರೆ ಸಾಲ ದೊರೆಯುವುದಿಲ್ಲ ಎಂಬ ನಿಯಮವಿದೆ. ಇದರಿಂದಾಗಿ ರೈತರು ಉಳಿಯುವುದಿಲ್ಲ, ಸೊಸೈಟಿಗಳೂ ಉಳಿಯುವುದಿಲ್ಲ. ಎಲ್ಲಿ ನೋಡಿದರೂ ಸಾಲಕ್ಕಾಗಿ ಸರಕಾರದ ಅಧಿಕಾರಿಗಳ ಮನೆ ಬಾಗಿಲು ಕಾದು ಸಾಲ, ಸಾಲ ಎಂದು ಕೇಳುವ ಪರಿಸ್ಥಿತಿ ಉತ್ಪನ್ನವಾಗಿದೆ. ಅಲ್ಲದೆ ಸರಕಾರದವರು ನೀರಾವರಿಗಾಗಿ ಬಾವಿಗಳನ್ನು ತೆಗಸಿಕೊಡಬೇಕು ಅಲ್ಲದೆ ರೈತರಿಗೆ ತಗಾಯಿ ಸಾಲಗಳನ್ನು ಕೊಡುವಾಗ ತಹಕೂದೆಮಾಡಿ ಸರಿಯಾದ ಮತ್ತು ಯೋಗ್ಯ ರೀತಿಯಿಂದ ಸಾಲಗಳು ದೊರೆಯುವಂತೆ ಯೋಜನೆಗಳನ್ನು ಮಾಡಬೇಕೆಂದು ನನ್ನ ಸೂಚನೆ.

3-00 P.M.

ಮತ್ತೊಂದು ಸೂಚನೆ ಏನೆಂದರೆ, ಕೆರೆ ಬಾವಿಗಳಿಗೆ ಪ್ರಾಶಸ್ತ್ಯ ಕೊಟ್ಟು ನೀರನ್ನು ಒದಗಿಸುವುದು. ನಮ್ಮ ಭಾಗದ ಕೆಲವು ಹಳ್ಳಿಗಳಲ್ಲಿ ರೈತಾಪಿ ಜನರು ಮೂರು ನಾಲ್ಕು ಮೈಲಿಗಳಷ್ಟು ದೂರ ಹೋಗಿ ನೀರು ಹೊತ್ತು ತರಬೇಕಾಗಿದೆ. ಇದಕ್ಕಾಗಿ ಅವರು ಮುಂಜಾನೆ ನಾಲ್ಕು ಗಂಟೆಗೆ ಎದ್ದು ಬೆಳಿಗ್ಗೆ ಹತ್ತು ಗಂಟೆಯವರೆಗೆ ನೀರು ಹೊತ್ತು ತರುವ ಕೆಲಸವೇ ಆಗುತ್ತದೆ. ಇವರ ಕಷ್ಟವನ್ನು ನಿವಾರಣೆ ಮಾಡುವ ಸಲುವಾಗಿ ಕುಡಿಯುವ ನೀರಿನ ಬಾವಿಗಳ ವ್ಯವಸ್ಥೆಯನ್ನು ಮಾಡುವುದು ಅವಶ್ಯವಾಗಿದೆ. ಈ ರೀತಿ ನಾನು ಹೇಳಿದಂತೆ ತಗಾಯಿ ಸಾಲ ಕೊಡುವುದು ಮತ್ತು ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸುವುದು ಇವೆರಡು ತಾತ್ಪೂರಿತವಾಗಿಯಾದರೂ ಪರಿಹಾರವಾಗಿ ಬ್ಲಾಕು ಕಾಟನ್ ಸಾಯಿಲ್ ಏರಿಯಾದ ಜನಕ್ಕೆ ಅನುಕೂಲವಾಡಿ ಕೊಟ್ಟರೆ ಈ ಜನಕ್ಕೆ ಕಲ್ಯಾಣ ಮಾಡಿದಂತಾಗುತ್ತದೆ ಮತ್ತು ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕೆಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri B. P. KADAM (Karwar).—Sir, a number of Members have spoken on this issue. Thev have given a graphic picture of the scarcity conditions that exist in their respective areas. I sympathise with them and pray that there would be rain soon, if it has not come during the last three days.

In the coastal areas of the State, particularly in North Kanara District, we have what is known as " wet famine " Every year we have so much of rain that the fertility of the soil is washed out. The quantum of rain varies from 8 to 210 inches. During the years 1958, 1959 and 1961 the havoc caused by heavy rains was considerable. The late Dr. Karve who visited North Kanara said " every year there is crop in the area but every year there is a state of famine." The poverty is rampant. Government must look into the matter and find out how best the effect of the havoc of excessive rains can be minimised. There should be a plan to bund the river in the upper villages and the mountaneous areas. There should be a broadbased plan for minor and major irrigation on a large scale, From the reply given to my questions on the floor of the House it can be seen that there is practically no major irrigation work takan up. No explanation is forthcoming from Government. In 1961 over 2,000 houses were washed out but the relief given is very little. The entire crop in 18 villages were washed away. At certain places Rs. 200 were given to build houses. These houses constructed under the vigilance of the Government officers collapsed next year and a grant of Rs. 15 was given. This is the sort of rehabilitation work which went on there.

I wish to warn the Government that the poverty in the areas of North Kanara, specially the coastal taluks, is too severe and worse than in the areas where there is occasional famine. Government should look into the whole problem of the coastal area and take adequate steps.

† ಶ್ರೀ ಜೆ. ದೇವಯ್ಯ (ಮಂಡ್ಯ)—ಸ್ವಾಮೀ, ಅಭಾವದ ಪರಿಸ್ಥಿತಿಯ ಮೇಲೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಮೊದಲು ನಾನು ತಮ್ಮನ್ನು ವಂದಿಸಿ ಸರಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಲು ಆಸೆ ಪಡುತ್ತೇನೆ.

ನಮ್ಮ ಮಂಡ್ಯ ಡಿಸ್ಟ್ರಿಕ್ಟು ಹಾಗೂ ಮೈಸೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳು ಹಿಂದಿನ ರಾಜರುಗಳ ಕಾಲದಿಂದಲೂ—ಎಂದರೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಮತ್ತು ಮೈಸೂರು ಜಿಲ್ಲೆಯ ಕೆಲವು ಭಾಗಗಳು ನೂರಾರು ವರ್ಷಗಳಿಂದ ತೊಂದರೆಗೊಳಗಾಗುತ್ತಿದ್ದವು. ನಮ್ಮ ವಿಶ್ವೇಶ್ವರಯ್ಯನವರ ಕಾಲದಲ್ಲಿ ವಿಶ್ವೇಶ್ವರಯ್ಯ ನಾಲವನ್ನು ತೆಗೆದು ವಿಸ್ತಾರ ಮಾಡಿದ್ದಾರೆ. ಇದರಿಂದ

(ಶ್ರೀ ಜೆ. ದೇವಯ್ಯ)

ಸುಮಾರು ಒಂದು ಲಕ್ಷ ಎಕರೆಗಳಷ್ಟು ಭೂಮಿಗೆ ನೀರಾವರಿ ಸೌಕರ್ಯ ಪಡೆಯುವ ಒಂದು ಅವಕಾಶ ದೊರಕಿದೆ. ನಮ್ಮ ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಹಿಂದೆ ಏನು ಕೆಲಸಗಳಾಗಿದ್ದುವೋ ಅದಕ್ಕಿಂತ ಜಾಸ್ತಿಯಾದ ಕೆಲಸಗಳು ಈಚೆಗೆ ಆಗಿಲ್ಲ. ನಾಲಾ ಇಲ್ಲವೇ ಇರತಕ್ಕ ಕೆಲವು ಪ್ರದೇಶಗಳು ಬಹಳ ತೊಂದರೆಗೆ ಈಡಾಗಿವೆ. ನಾಗಮಂಗಲದ ಕಡೆ ಹಾಗೂ ಮಂಡ್ಯ ತಾಲ್ಲೂಕಿನ ಬಸರಾಳು ಹಾಗೂ ದುದ್ದದ ಹೋಬಳಿ, ಮಾಚೇನಹಳ್ಳಿ ಮತ್ತು ಶ್ರೀರಂಗಪಟ್ಟಣದ ಕೆಲವು ಭಾಗಗಳು ಬಹಳ ತೊಂದರೆಗೆ ಈಡಾಗಿವೆ. ಅಲ್ಲದೆ ವಿಶ್ವೇಶ್ವರಯ್ಯ ನಾಲಾದ ಕೆಳಗಡೆ ಇರುವ ಜಮೀನುಗಳಿಗೆ ನೀರು ಉಪಯೋಗ ಮಾಡಿಕೊಳ್ಳಲು ಆಗುತ್ತಿಲ್ಲ. ಹರಿಯುತ್ತಿರುವ ನೀರನ್ನು ಇಂಜನೀಯರಿಂಗು ಇಲಾಖೆಯವರು ಪಿಕಅಪ್‌ಗಳನ್ನು ಚಾನಲ್ಲುಗಳಿಂದ ನೀರು ಹಾಯಿಸುವುದಕ್ಕೋಸ್ಕರ ಸುಮಾರು ಎರಡು ಕೋಟಿ ರೂಪಾಯಿಗಳ ಎಸ್ಟಿಮೇಟು ತಯಾರು ಮಾಡಿ ಕಳುಹಿಸಿದ್ದಾರೆಂದು ನನಗೆ ತಿಳಿದು ಬಂದಿದೆ. ಇದನ್ನು ನಮ್ಮ ಮಾನ್ಯ ರೆವೆನ್ಯೂ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಹಳ್ಳಿಗಳಲ್ಲಿ ಅನ್ಯಾಯವಾಗಿ ಹರಿದು ಹೋಗುತ್ತಿರುವ ನೀರನ್ನು ಪಿಕಅಪ್‌ಗಳ ಮೂಲಕ ತರಲು ಅನುಕೂಲ ಮಾಡಿದರೆ ಇಲ್ಲಿನ ಜನಕ್ಕೆ ಬಹಳ ಅನುಕೂಲವಾಗುತ್ತದೆ.

ಇನ್ನೊಂದೆರಡು ಮುಖ್ಯ ವಿಷಯಗಳನ್ನು ಸರಕಾರದ ಗಮನಕ್ಕೆ ತರಬೇಕಾಗಿದೆ. ವಿಶ್ವೇಶ್ವರಯ್ಯ ನಾಲಾದ ಕೊನೆಯಲ್ಲಿರುವ ಹುಲಿಕೆರೆ ಮತ್ತು ಮಾಚಹಳ್ಳಿ ಎನ್ನುವ ಎರಡು ಗ್ರಾಮಗಳಿವೆ. ಈ ಎರಡು ಗ್ರಾಮಗಳ ಪಕ್ಕದಲ್ಲಿಯೂ ನೂರಡಿಯಷ್ಟು ತೋಡಿದರೂ ನೀರು ಸಿಕ್ಕುತ್ತಿಲ್ಲ. ಇಲ್ಲಿಗೆ ಪಂಪು ಸೆಟ್ಟುಗಳನ್ನು ಕೊಳ್ಳಲು ಸಾಲವಾಗಿ ಕೊಟ್ಟರೆ ತುಂಬಾ ಸಹಾಯವಾಗುತ್ತದೆ. ಈ ಭಾಗಕ್ಕೆ ಒಂದು ನೀರಾವರಿ ಪಂಪು ಸೆಟ್ಟು ಕೊಡುವುದು ಅವಶ್ಯಕ ಎಂದು ಹಿಂದೆ ಇದ್ದ ಮಾನ್ಯ ಮಂತ್ರಿಗಳಾಗಿದ್ದ ಶ್ರೀ ಪಾಟೀಲ್ ವೀರಣ್ಣಗೌಡರೂ ಹೇಳಿದ್ದರು. ಈಗಲಾದರೂ ಮಾನ್ಯ ರೆವೆನ್ಯೂ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ನಮ್ಮ ಭಾಗದ ಜನಕ್ಕೆ ಪಂಪು ಸೆಟ್ಟುಗಳನ್ನು ಕೊಟ್ಟು ಉಪಕಾರ ಮಾಡಬೇಕೆಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ದುದ್ದ ಕೆರೆ ಕೆಳಗೆ 300 ಎಕರೆಯಾಗುತ್ತದೆ. ದುದ್ದಕ್ಕೆ ಲಿಫ್ಟ್ ಇರ್ರಿಗೇಷನ್ ನೀರು ಕೊಡಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲಿ ಬಹಳ ಖುಷ್ಕಿ ಜಮೀನಿದೆ, ಅಲ್ಲಿ ಯಾವಾಗಲೂ ನೀರು ಸಪ್ಲೈ ಇಲ್ಲದೆ ಬಹಳ ತೊಂದರೆಗೀಡಾಗಿದೆ. ಬಸರಾಳ ಕೆಲವು ಭಾಗವನ್ನೂ, ದುದ್ದ ಹೋಬಳಿ ಕೆಲವು ಭಾಗವನ್ನೂ ಕಾಂಗಾರಿ ಕೆಲಸಗಳಿಗೆ ತೆಗೆದುಕೊಂಡಿದ್ದಾರೆ. ಕೆಲವು ಕಡೆ ದೈವ ಕೃಪಾಕಟಾಕ್ಷದಿಂದ ಫಸಲು ಚೆನ್ನಾಗಿದೆ. ಇನ್ನು ಕೆಲವು ಕಡೆ ಬೀಜವನ್ನೂ ಬಿತ್ತಿಲ್ಲ. ಅಂಥ ಸಣ್ಣ ಕೆರೆಗಳನ್ನೂ ಮಾಡುತ್ತಾ ಇಲ್ಲ. ಆ ಸ್ಥಳಗಳನ್ನು ಪರೀಕ್ಷೆ ಮಾಡಿ ಅಲ್ಲಿಯ ಜನರಿಗೆ ಸಹಾಯ ದೊರಕಿಸಿ ಕೊಡಬೇಕು.

ಒಟ್ಟಿನಲ್ಲಿ ಅನೇಕ ಕಡೆ ಪಿಕಪ್ಪು ಚಾನಲ್ಲುಗಳನ್ನು ಸರಕಾರದವರು ಮಾಡಿದ್ದಾರೆ. ಕಾಂಗ್ರೆಸ್ ಸರಕಾರ ಬಂದ ಮೇಲೆ ದುಡ್ಡು ಖರ್ಚು ಮಾಡಿಲ್ಲ ಎಂದು ಹೇಳುವುದಿಲ್ಲ; ಖರ್ಚು ಮಾಡಿದ್ದಾರೆ, ಆದರೆ ಎಷ್ಟು ನಾಲೆಗಳು, ಎಷ್ಟು ಪಿಕಪ್ಪು ಮಾಡಿದ್ದಾರೆ, ಅದರಿಂದ ಎಷ್ಟು ಎಕರೆ ನೀರಾವರಿಯಾಗಿದೆ ಎಂದು ತನಿಖೆ ಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿ. ನೀವು ಇಷ್ಟು ಖರ್ಚು ಮಾಡಿದ್ದರೂ ಒಳ್ಳೆಯ ಹೆಸರು ಬರಲಿಲ್ಲ, ಜನಗಳಿಗೆ ಪ್ರಯೋಜನವಾಗಲಿಲ್ಲ. ಕೋಟ್ಯಾನುಕೋಟಿ ರೂಪಾಯಿ ನೀರಾವರಿಗೆ ಖರ್ಚಾಗಿದೆ; ಈ 16 ವರ್ಷಗಳಿಂದ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೀರಲ್ಲ, ಎಷ್ಟು ಎಕರೆ ಆಬಾದಿಗೆ ಬಂತು? ಎಷ್ಟು ಫಸಲು ಬೆಳೆಯುತ್ತಾ ಇದ್ದಾರೆ? ಕಂಟ್ರಾಕ್ಟರುಗಳ ಮಾತಿಗೆ, ಪ್ರಭಾವಶಾಲಿಗಳ ಮಾತಿಗೆ ಪಿಕಪ್ಪುಗಳನ್ನು ಮಾಡಿದ್ದಾರೆ. ಈ ಪಿಕಪ್ಪುಗಳಿಂದ ಎಷ್ಟು ಎಕರೆ ಜಮೀನಿನಲ್ಲಿ ನೀರಾವರಿ ಆಗುತ್ತಾ ಇದೆ! ಈ ಪಿಕಪ್ಪುಗಳಿಗೋಸ್ಕರ ಮಂಡ್ಯ ತಾಲ್ಲೂಕಿನಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದೀರ.

[MR. DEPUTY SPEAKER in the Chair]

ಇದನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಒಂದು ಕಮಿಟಿ ಮಾಡಬೇಕು. ಬೇಕಾದರೆ ಒಬ್ಬ ರಿಟೈರ್ಡ್ ಚೀಫ್ ಇಂಜಿನಿಯರನ್ನು ಈ ಸಮಿತಿಗೆ ನೇಮಕ ಮಾಡಿ. ನಾನು ಅವರ ಜೊತೆ ಹೋಗಿ ಲೆಕ್ಕ ಮತ್ತು ವಿವರಗಳನ್ನು ಕೊಡುತ್ತೇನೆ. ದಾಕ್ಷಿಣ್ಯಕ್ಕೋಸ್ಕರ 10 ಎಕರೆಗೆಲ್ಲಾ ಪಿಕಪ್ಪುಗಳನ್ನು ಮಾಡಿದ್ದಾರೆ. ಅದರಲ್ಲಿ ಒಂದು ಎಕರೆಯನ್ನೂ ಮಾಡಿಲ್ಲ, ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ. ಅಂಥ ಸ್ಥಳಗಳನ್ನು ಸರಕಾರದವರು ಗಮನಕ್ಕೆ ತೆಗೆದುಕೊಳ್ಳಬೇಕು. ನಮ್ಮ ರೆವಿನ್ಯು ಮಂತ್ರಿಗಳು ನನ್ನ ಸಂಗಡ ಬಂದರೆ ತೋರಿಸುತ್ತೇನೆ. ಅವರೇ ಪರ್ಸನಲ್ಲಾಗಿ ಬಂದು

ನಾನು ಹೇಳುವುದು ಸುಳ್ಳೋ ನಿಜವೋ ಎಂಬುದನ್ನು ಪರಾಂಬರಿಸಬೇಕು. ನಮ್ಮ ಸಣ್ಣ ನೀರಾವರಿ ಉಪಮಂತ್ರಿಗಳೂ ಮಂಡ್ಯ ಡಿಸ್ಟ್ರಿಕ್ಟಿನ ಹಳ್ಳಿಗಳಿಗೆ ಬರಲಿಲ್ಲ. ಮುಖ್ಯವಾಗಿ ಅವರು ಬರಬೇಕು. ಎಲ್ಲಿ ನೀರಿದೆ ಎಲ್ಲಿ ನೀರಿಲ್ಲ, ಯಾವ ಸ್ಥಳದಲ್ಲಿ ಪಿಕಪ್ ಕೊಟ್ಟಿದ್ದಾರೆ, ಕೊಟ್ಟ ಕಡೆ ನೀರಾವರಿಯಾಗಿದೆಯೋ ಮುಂತಾದುದನ್ನೆಲ್ಲಾ ಒಂದು ಪರೀಕ್ಷಿಸಬೇಕು. ನಾನು ಹೇಳಿದ್ದನ್ನು ಪರಿಗಣಿಸಬೇಕು.—ಮಾನ್ಯ ರೆವಿನ್ಯೂ ಮಂತ್ರಿಗಳು ಮಂಡ್ಯ ಜಿಲ್ಲೆ ಕಡೆ ತಮ್ಮ ಕಣ್ಣನ್ನು ಬಿಡಬೇಕು. ಮತ್ತು ನಮ್ಮ ಜನಗಳಿಗೆ ಒಳ್ಳೆಯದನ್ನು ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಅಧ್ಯಕ್ಷರೆ, ಈಗ ಹಾಲಿ ನಮ್ಮ ಮುಂದಿರತಕ್ಕಂಥ ನಿರ್ಣಯವನ್ನು ಸ್ವಾಗತಿಸುತ್ತಾ ಮಲೆನಾಡಿನ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ಇಷ್ಟಪಡುತ್ತೇನೆ.

ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದವರು ಮಲೆನಾಡು ಸಮೃದ್ಧಿಯಾದ ಪ್ರದೇಶ, ಮೈಸೂರು ರಾಜ್ಯದಲ್ಲಿ ಕೋಲಾರ, ಚಿತ್ರದುರ್ಗ, ತುಮಕೂರು, ಬಳ್ಳಾರಿ ಬರಗಾಲಕ್ಕೆ ತುತ್ತಾಗಿವೆ ಎಂದು ಹೇಳಿದರು. ಅವರು ಮಲೆನಾಡಿನ ಪರಿಸ್ಥಿತಿಯನ್ನು ಅರಿಯದೆ ಒಂದು ಅಭಿಪ್ರಾಯ ಕೊಡುವುದು ಸರಿಯಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ.

ಸ್ವಾಮಿ, ಮಲೆನಾಡು ಪ್ರಕೃತಿಯ ವರಪ್ರಸಾದ ಎಂದು ಎಷ್ಟೋ ಕವಿಗಳು ಹೇಳಿದ್ದಾರೆ. ಆದರೆ ಇವತ್ತಿನ ಪರಿಸ್ಥಿತಿಯಲ್ಲಿ ಅಂಥ ವರ್ಣನೆ ಕೂಡ ಅಪರಾಧವಾಗುತ್ತದೆ; ಮಳೆ ಅಭಾವ ಇವತ್ತು ನಮ್ಮ ಮಲೆನಾಡಿನಲ್ಲಿಯೂ ಇದೆ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ ಎಲ್ಲಾ ಪ್ರದೇಶವೂ ಮಲೆನಾಡಲ್ಲ: ಅದರಲ್ಲಿ ಮಲೆನಾಡು ಮತ್ತು ಸೆಮಿ-ಮಲೆನಾಡು ಎಂದು ಎರಡು ಭಾಗ ಸೇರಿದೆ. ಈ ಎರಡು ಭಾಗಗಳಲ್ಲಿಯೂ ಕೂಡ ಬೆಳೆಗಳು ಮಳೆ ಇಲ್ಲದೆ ಈ ಸಾರಿ ಹೋಗಿವೆ. ಹಾಸನ ತಾಲ್ಲೂಕಿನಲ್ಲಿ ಈ ವರ್ಷ ಸುಮಾರು 80 ಸಾವಿರ ಮೂಟೆ ಆಲೂಗಡ್ಡೆ ಹಾಕಿ, 1 ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿದ್ದರು, ರೈತರು. ಈ 80 ಸಾವಿರ ಮೂಟೆ ಆಲೂಗಡ್ಡೆಯಲ್ಲಿ 4 ಕೋಟಿ ರೂಪಾಯಿ ಉತ್ಪತ್ತಿ ಬರಬೇಕಾಗಿದ್ದುದು, ಮಳೆ ಇಲ್ಲದೆ ಇದ್ದುದರಿಂದ, ಇವತ್ತು ಹಾಕಿದ ಬಂಡವಾಳದಲ್ಲಿ 1 ಕೋಟಿ ರೂಪಾಯಿ ಬರುವುದು ಕಷ್ಟವಾಗಿದೆ. ಇದಕ್ಕೆ ಒಂದನೆಯದು, ಮಳೆ ಹೋಗಿದ್ದು ಕಾರಣವಾದರೆ ಈ ಬೆಳೆಗೆ ರೋಗ ತಗಲಿದ್ದು ಇನ್ನೊಂದು ಕಾರಣ. ಮೂರನೆಯದಾಗಿ, ಸರಕಾರದವರು ಸರಿಯಾಗಿ ಒಂದು ಮಾರ್ಕೆಟ್ಟನ್ನು ಏರ್ಪಾಡು ಮಾಡದೆ ಬೆಲೆ ಕಡಮೆಯಾದುದು ಮತ್ತೊಂದು ಕಾರಣ. ಇಷ್ಟೊಂದು ಭಾರಿ ಪ್ರಮಾಣದಲ್ಲಿ ಈ ಒಂದು ಬೆಳೆಯನ್ನು ತೆಗೆಯುತ್ತಾ ಇದ್ದರೂ ಅದಕ್ಕೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಗಮನ ಕೊಡದೆ ಇದ್ದುದರಿಂದ ಈ ಬೆಳೆ ರೋಗಕ್ಕೆ ತುತ್ತಾಗುವುದಕ್ಕೆ ಕಾರಣವಾಯಿತು. ಇನ್ನು ಮುಂದಾದರೂ ವ್ಯವಸಾಯ ಇಲಾಖೆಯವರು ಈ ಪೈರಿನ ಬಗ್ಗೆ ಎಚ್ಚರಿಕೆ ವಹಿಸಬೇಕೆಂದು ಪ್ರಾರ್ಥಿಸುತ್ತೇನೆ.

[MR. SPEAKER in the Chair]

ನಮ್ಮ ಹಾಸನ ಜಿಲ್ಲೆಯಲ್ಲಿ ಸಣ್ಣ ಕೆರೆಗಳು ಜಾಸ್ತಿ ಇವೆ. ಹಾಸನ ಜಿಲ್ಲೆಯಲ್ಲಿ ಬೇಲೂರು ಸಕಲೇಶಪುರ, ಆಲೂರು—ಈ ಪ್ರದೇಶಗಳಲ್ಲಿ ನೀರಾವರಿ ಬಾವಿಗಳು ಬೇಕಾಗುವುದಿಲ್ಲ. ಅದು ಸರಕಾರದವರಿಗೆ ಗೊತ್ತಿದೆ. ನಮ್ಮಲ್ಲಿ ಏನಾದರೂ ನೀರಾವರಿ ಬಾವಿ ತೆಗೆಯಬೇಕಾದರೆ 13 ಸಾವಿರ ರೂಪಾಯಿ ಖರ್ಚಾಗುತ್ತದೆ; ಅದನ್ನು ಸರಕಾರ ಕೊಡುವುದಕ್ಕೆ ತಯಾರಿಲ್ಲ. ಆದರೆ ನಮ್ಮಲ್ಲಿ ಮೈನರ್ ಟ್ಯಾಂಕುಗಳು ಜಾಸ್ತಿ ಇವೆ. ಬೇಲೂರು ತಾಲ್ಲೂಕಿನಲ್ಲಿ 801, ಹಾಸನ ತಾಲ್ಲೂಕಿನಲ್ಲಿ 609, ಆಲೂರು ತಾಲ್ಲೂಕಿನಲ್ಲಿ 411, ಸಕಲೇಶಪುರದಲ್ಲಿ 388, ಅರಕಲಗೂಡಿನಲ್ಲಿ 386, ಹೊಳೆನರಸಿಪುರದಲ್ಲಿ 153, ಚನ್ನರಾಯಪಟ್ಟಣದಲ್ಲಿ 78 ಅರಸಿಕೆರೆಯಲ್ಲಿ 26 ಸಣ್ಣ ಕೆರೆಗಳಿವೆ. ಈ ಕೆರೆಗಳು ಮಲೆನಾಡು ಪ್ರದೇಶದಲ್ಲಿ ಜಾಸ್ತಿ ಇವೆ. ಮಲೆನಾಡು ಪ್ರದೇಶ ಸಮೃದ್ಧಿಯಾದದ್ದು, ಅಲ್ಲಿ ಮಳೆ ಬಹಳ ಜಾಸ್ತಿ ಎಂದು ಹೇಳಿದರು. ಸರಕಾರ ಈ ಸಣ್ಣ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಬಯಲು ಸೀಮೆಗೆ ಕೊಟ್ಟಿರತಕ್ಕಂಥ ಪ್ರಾಮುಖ್ಯತೆಯನ್ನು ಮಲೆನಾಡಿಗೆ ಕೊಟ್ಟಿಲ್ಲ; ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಹಾಸನ ಜಿಲ್ಲೆ ಸುಮಾರು 20 ಇಂಚುನಿಂದ 250 ಇಂಚುವರೆಗೆ ಮಳೆಯಾಗುವ ಪ್ರದೇಶವನ್ನು ಒಳಗೊಂಡಿದೆ. ಇವೊತ್ತು 250 ಇಂಚು ಮಳೆ ಬೀಳಬೇಕಾದಂಥ ಪ್ರದೇಶದಲ್ಲಿ 60 ಇಂಚು ಮಳೆ ಆಗಿದ್ದರೆ ಜಾಸ್ತಿ. ಮಲೆನಾಡಿನಲ್ಲಿ ಹೆಚ್ಚಿಗೆ ಮಳೆಯ ಆಧಾರದಿಂದಲೇ ಬೆಳೆ ತೆಗೆಯ ಬೇಕಾದಂಥ ಒಂದು ಪರಿಸ್ಥಿತಿ ಇರುತ್ತದೆ. ಈ ವರ್ಷ ಮಳೆ ಇಲ್ಲದೆ ಬೆಳೆ ಎಲ್ಲಾ ನಾಶವಾಗಿದೆ. ಸಣ್ಣ ಕೆರೆಗಳನ್ನು ರಿಪೇರಿ ಮಾಡಿಕೊಟ್ಟಿದ್ದ ಪಕ್ಷದಲ್ಲಿ ಚೆನ್ನಾಗಿ ಮಳೆ ಇಲ್ಲದಿದ್ದರೂ, ಕೆರೆಗಳ ನೀರನ್ನು ಉಪಯೋಗಿಸಿಕೊಂಡು ಬೆಳೆಯನ್ನು

(ಶ್ರೀ ಬಿ. ಎಚ್. ಲಕ್ಷ್ಮಣಯ್ಯ)

ತೆಗೆಯುವುದಕ್ಕೆ ಅನುಕೂಲವಾಗುತ್ತಿತ್ತು. ಇದನ್ನು ಮಾಡಿ ಕೊಡಬೇಕು. ಈ ಮಳೆ ಇಲ್ಲದ ದೆಶೆಯಿಂದ ಕಾಫಿ ಬೆಳೆ, ಏಲಕ್ಕಿ ಬೆಳೆ, ಬತ್ತದ ಬೆಳೆ ಎಲ್ಲಾ ಹೊರಟು ಹೋಗಿವೆ. ಆದ್ದರಿಂದ ಸರಕಾರದವರು ಮಲೆನಾಡು ಸಮೃದ್ಧಿ ಪ್ರದೇಶ ಎಂದು ಏನು ಇಂಪ್ರೆಷನ್ ಇಟ್ಟುಕೊಂಡಿದ್ದಾರೋ ಅದನ್ನು ಬಿಟ್ಟು ಸಣ್ಣ ಕೆರೆಗಳ ಮತ್ತು ಗೋಕಟ್ಟೆಗಳ ಕೆಲಸಗಳನ್ನು ತೆಗೆದುಕೊಳ್ಳಬೇಕು. ನಾನು ಈಗ ಏನು ಮೈನರ್ ಕೆರೆಗಳ ಅಂಕಿ ಅಂಶಗಳನ್ನು ಕೊಟ್ಟಿನೋ, ಅದಕ್ಕಿಂತ ಜಾಸ್ತಿ ಇವೆ. ಗೋಕಟ್ಟೆಗಳು ಆ ಪಟ್ಟಿಯಲ್ಲಿ ಸೇರಿಲ್ಲ. ಗೋಕಟ್ಟೆಗಳನ್ನು ಮತ್ತು ಸಣ್ಣ ಕೆರೆಗಳನ್ನು ರಿಪೇರಿ ಮಾಡಿಕೊಟ್ಟರೆ, ಮಲೆನಾಡು ಭಾಗಕ್ಕೆ ತಾವು ಅದಕ್ಕಂತ ಹೆಚ್ಚಿನ ಪ್ರೋತ್ಸಾಹ ಒದಗಿಸಬೇಕಾದ ಅಗತ್ಯವಿಲ್ಲ ಎಂದು ನಾನು ಹೇಳುತ್ತೇನೆ.

ಮಲೆನಾಡಿನಲ್ಲಿ ಸಣ್ಣ ಕೆರೆಗಳನ್ನು ಕಟ್ಟುವಾಗ ಬಯಲು ಸೀಮೆಯಲ್ಲಿ ಎಷ್ಟಕ್ಕೆ ಅಂದಾಜನ್ನು ತಯಾರು ಮಾಡುತ್ತಾರೆಯೋ ಅಷ್ಟಕ್ಕೇ ತಯಾರು ಮಾಡುತ್ತಾರೆ. ಮಲೆನಾಡು ಬೆಟ್ಟಗುಡ್ಡ ಪ್ರದೇಶವಾದುದರಿಂದ ಮಳೆಯ ನೀರು ಜೋರಾಗಿ ಹರಿಯುತ್ತದೆ. ಮಲೆನಾಡು ಕೆರೆಗಳನ್ನು ಬಯಲು ಸೀಮೆಯ ಕೆರೆಗಳಿಗೆ ಅಂದಾಜು ಮಾಡಿ ಕಟ್ಟುವ ಹಾಗೆ ಕಟ್ಟಿದರೆ ನೀರು ಜೋರಾಗಿ ಹರಿಯುವುದರಿಂದ ಒಂದೆರಡು ವರ್ಷ ಸಹ ಒಂದು ಹೊಸ ಕೆರೆ ಬಾಳುವುದು ಕಷ್ಟವಾಗುತ್ತದೆ. ಮಲೆನಾಡಿನ ಮಳೆಗೆ ಸಾಲ್ಕಾರು ವರ್ಷ ತಡೆಯಲು ಕೆರೆಗಳನ್ನು ಯಾವ ರೀತಿ ಕಟ್ಟಬೇಕೆನ್ನುವುದರ ಬಗ್ಗೆ ತಜ್ಞರ ಅಭಿಪ್ರಾಯವನ್ನು ಪಡೆದು, ಅಂದಾಜನ್ನು ತಯಾರ್ಮಾಡಿ ಕೆರೆಗಳನ್ನು ಕಟ್ಟಬೇಕು. ಹಾಗೇ ಕಟ್ಟಿದಲ್ಲಿ ಆ ಭಾಗಕ್ಕೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಹಾಸನ ಜಿಲ್ಲೆಯಲ್ಲಿ ಪ್ರಮುಖ್ಯವಾದ ಬೆಳೆಗಳು ಬತ್ತ ಮತ್ತು ರಾಗಿ. ಬಯಲು ಸೀಮೆಯಲ್ಲಿ ಮಳೆಯಿಲ್ಲದೆ ಇರುವುದರಿಂದ ರಾಗಿ ಬೆಳೆ ಹೋಯಿತು. ಮಲೆನಾಡಿನಲ್ಲಿ ಸಾಕಷ್ಟು ಆಶ್ರಯವಿಲ್ಲದೆ ಬತ್ತದ ಬೆಳೆಯೂ ಹೋಗಿದೆ—ಅಲ್ಲಿ ಮಳೆಯ ನೀರಿನಿಂದ ಬೆಳೆಯುತಕ್ಕದ್ದು ಬತ್ತ. ಈ ವರ್ಷ ಸಾಕಷ್ಟು ಮಳೆ ಇಲ್ಲದೆ ಇರುವುದರಿಂದ ಬತ್ತದ ಬೆಳೆ ಕೂಡ ಹೋಗಿದೆ. ಆದ್ದರಿಂದ ಸಣ್ಣ ಕೆರೆಗಳಿಗೆ ಆದಷ್ಟು ಹೆಚ್ಚಿನ ಮುತುವರ್ಜಿ ವಹಿಸಿ, ಆ ಬಗ್ಗೆ ಹೆಚ್ಚು ಹಣವನ್ನು ನೀಡಿ ಮಲೆನಾಡಿನ ಸಣ್ಣ ಕೆರೆಗಳನ್ನು ರಿಪೇರಿ ಮಾಡಿಸಬೇಕು ಮತ್ತು ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಇದರಿಂದ ಬತ್ತ, ರಾಗಿ, ಆಲುಗೆಡ್ಡೆ ಈ ಬೆಳೆಗಳನ್ನಿಡತಕ್ಕ ರೈತರಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಹಾಸನ ತಾಲ್ಲೂಕಿನಲ್ಲಿ ರಾಗಿ ಬೆಳೆ ಬೆಳೆಯುವವರು ಆಲೂಗೆಡ್ಡೆ commercial crop ಆಗಿರುವುದರಿಂದ ಅದರಿಂದ ಅಲ್ಪ ಸ್ವಲ್ಪ ದುಡ್ಡನ್ನು ಸಂಪಾದನೆ ಮಾಡಿ ಮುಂದೆ ರಾಗಿ ಬೆಳೆಯನ್ನು ತೆಗೆಯಬಹುದು ಎನ್ನುವ ದೃಷ್ಟಿಯಿಂದ ಎಲ್ಲರೂ ಆಲೂಗೆಡ್ಡೆ ಹಾಕಿದ್ದಾರೆ. ಆದರೆ ಮಳೆ ಹೋದುದರಿಂದ ಮತ್ತು ಸರ್ಕಾರದ ವ್ಯವಸಾಯ ಇಲಾಖೆಯವರು ಯಾವ ಕ್ರಮವನ್ನು ತೆಗೆದುಕೊಳ್ಳದೆ ಇರುವುದರಿಂದ, ರೋಗ ಜಾಸ್ತಿಯಾಗಿ ಆಲೂಗೆಡ್ಡೆ ಬೆಳೆಗೆ ನಷ್ಟವಾಗಿದೆ ಮತ್ತು ರಾಗಿ ಬೆಳೆ ಹಾಕುವುದಕ್ಕೆ ಮಳೆ ಇಲ್ಲದೆ ಹಾಸನ ತಾಲ್ಲೂಕು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ರೈತರಿಗೆ ಮುಂದೇನು ಗತಿ ಎನ್ನತಕ್ಕ ಯೋಚನೆಯುಂಟಾಗಿದೆ. ಅಂಥಾ ಕಡೆ land improvement loan ತಕಾವಿ ಸಾಲ ಅಥವಾ ಇನ್ನು ಯಾವುದಾದರೂ ಮುಖಾಂತರ ಸಾಲಗಳನ್ನು ಮಂಜೂರ್ಮಾಡಿ ಜನತೆಗೆ ಸರ್ಕಾರ ನೆರವಾಗಬೇಕು ಎಂದು ಪ್ರಾರ್ಥಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಕಳೆದ ಎರಡೂವರೆ ದಿವಸಗಳಿಂದ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ರಾಜ್ಯದ ಪರಿಸ್ಥಿತಿಯನ್ನು, ಮುಖ್ಯವಾಗಿ ಅಭಾವ ಪರಿಸ್ಥಿತಿಯನ್ನು ಒತ್ತಿ ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಮಾನ್ಯ ಹುಚ್ಚಮಾಸ್ತಿ ಗೌಡರು ಈ ನಿರ್ಣಯವನ್ನು ತಂದು ಆ ನಿರ್ಣಯದ ಮೂಲಕ ಚರ್ಚೆಗೆ ಅವಕಾಶ ಮಾಡಿ ಕೊಟ್ಟದ್ದಕ್ಕಾಗಿ ಅವರು ಅಭಿನಂದನಾರ್ಹರು ಎಂದು ನಾನು ತಿಳಿಸುತ್ತೇನೆ. ಈಗ ಚರ್ಚೆಯನ್ನು ನಾನು ಕೇಳಿದಮೇಲೆ ಈ ನಿರ್ಣಯ ಚರ್ಚೆಯಲ್ಲಿಯೇ ಪರ್ಯವಸಾನವಾಗುತ್ತದೆಯೇ, ಸರ್ಕಾರ ಆ ಮಾತುಗಳನ್ನು ಕಿವಿಯಮೇಲೆ ಹಾಕಿಕೊಳ್ಳುತ್ತದೆಯೇ, ಪರಿಸ್ಥಿತಿಯ ತೀವ್ರತೆಯನ್ನರಿತು ಕಾರ್ಯೋನ್ಮುಖವಾಗುತ್ತದೆಯೇ ಎನ್ನುವ ಸಂಶಯ ನನಗೆ ಬಂತು. ಸರ್ಕಾರದವರು ಕೇಳುತ್ತಿದ್ದಾರೆ ಮತ್ತು ಸರ್ಕಾರದವರು ಪರಿಸ್ಥಿತಿಯನ್ನು ನೋಡುತ್ತಿದ್ದಾರೆ. ಈಚೆಗೆ ಜಿಲ್ಲಾಧಿಕಾರಿಗಳ ಸಭೆ ಸೇರಿದಾಗ ಬಹುಶಃ ಈ ಮಳೆ ಬೆಳೆಯ ಪರಿಸ್ಥಿತಿಯನ್ನು ಅವರು ಅಂಕಿ ಸಂಖ್ಯೆಗಳಿಂದ ಸರ್ಕಾರದ ಮುಂದೆ ಇಟ್ಟು ಏನು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು ಎನ್ನುವ ವಿಷಯದ ಬಗ್ಗೆ ಚರ್ಚೆ ಮಾಡಿರಬಹುದು ಎಂದು ನಾನು ಭಾವಿಸುತ್ತೇನೆ.

ಇಲ್ಲಿ ನಾನು ಸ್ವಲ್ಪ ಹಿನ್ನೆಲೆಯನ್ನು ಹೇಳುವುದಾದರೆ ಚೀಣ ಆಕ್ರಮಣದನಂತರ ದೇಶದಲ್ಲಿ ಉಂಟಾಗಿರತಕ್ಕ ತುರ್ತು ಪರಿಸ್ಥಿತಿ ಇನ್ನೂ ಉಳಿದುಕೊಂಡೇ ಹೋಗುತ್ತಿದೆ. ಜೊತೆಗೆ ಈಗ ನಮ್ಮ ರಾಜ್ಯದಲ್ಲಿ ಮಳೆ ಬಾರದೆ ಅಭಾವ ಪರಿಸ್ಥಿತಿಯುಂಟಾಗಿದೆ. ಈ ಎರಡು ಪರಿಸ್ಥಿತಿಗಳ ಮಧ್ಯೇ ಸಿಕ್ಕಿರತಕ್ಕ ಜನರ ಸ್ಥಿತಿ ನಿಜವಾಗಿಯೂ ಕಂಗಾಲು ಪರಿಸ್ಥಿತಿ ಎಂದು ನಾನು ಭಾವಿಸುತ್ತೇನೆ. ಪರಿಸ್ಥಿತಿ ಹೀಗಿರುವಾಗ ಸರ್ಕಾರದ ಕರ್ತವ್ಯವೇನು, ಜನರ ಕರ್ತವ್ಯವೇನು, ಬದುಕಬೇಕಾದರೆ ಏನು ಉಪಾಯ ಹುಡುಕಬೇಕು ಎನ್ನುವುದು ಬಹಳ ಮುಖ್ಯವಾದ ವಿಷಯ. ಮಾನ್ಯ ದೇವೇಂದ್ರಪ್ಪನವರು ಹೇಳಿದ ಹಾಗೆ ಇಂದ್ರ ಮಳೆ ಕರೆಯುತ್ತಾನೆ. ಬಸವಣ್ಣ ಉಳುತ್ತಾನೆ, ಭೂತಾಯಿ ಬೆಳೆಯುತ್ತಾಳೆ ತೆರಿಗೆ ರಾಜಧಂಡವಯ್ಯ ಬೂದಿಬಸವಯ್ಯ. ಹೀಗೆ ಹೇಳುವುದು ಬೂದಿಬಸವಯ್ಯ. ವರುಣ, ಮರುತ, ಇವರನ್ನು ಪರ್ಜನ್ಯ ಜಪದ ಮೂಲಕ ಒಲಿಸಿಕೊಳ್ಳಲು ಪ್ರಯತ್ನಿಸುವುದು ಈ ಸಭೆಯ ಮೂಲಕ, ಸರ್ಕಾರದ ಮೂಲಕ ಆಗುವಂಥ ಕೆಲಸವಲ್ಲ. ಆಸ್ತಿಕರು ಆ ಒಂದು ಪದ್ಧತಿಯನ್ನು ನಡೆಸಿಕೊಂಡು ಹೋಗಬಹುದು.

ಸರ್ಕಾರಕ್ಕೆ ಇವತ್ತು ತುಂಬ ದೊಡ್ಡ ಜವಾಬ್ದಾರಿ ಇದೆ. ಎರಡು ಕೋಟಿ ಮುವ್ವತ್ತೈದು ಲಕ್ಷ ಜನರಿಗೆ ಅನ್ನ, ನೀರು, ಬಟ್ಟೆ, ಉದ್ಯೋಗ, ವಸತಿ ಇವುಗಳನ್ನು ಒದಗಿಸಿ ಕೊಡಲೇಬೇಕಾದಂಥ ಗುರುತರವಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಈ ಹೊಣೆಯನ್ನು ಅವರು ಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಈ ವರ್ಷ ತೆರಿಗೆಗಳು ತುರ್ತು ಪರಿಸ್ಥಿತಿಯ ಕಾರಣದಿಂದಾಗಿ, ಕೆಲವು ಸಂದರ್ಭಗಳಲ್ಲಿ ಒಂದಕ್ಕೆ ಎರಡಾದುದೂ ಉಂಟು. ಭೂಕಂದಾಯ ನಾಲ್ಕು ಕೋಟಿಯಿಂದ ಎಂಟು ಕೋಟಿ ಆಯಿತು. ಹಾಗೆಯೇ ಅನೇಕ ತೆರಿಗೆಗಳನ್ನು ನಾವು ದೇಶದ ರಕ್ಷಣೆಯ ಸಂಬಂಧದಲ್ಲಿ ಜನರ ಮೇಲೆ ಹೊಸದಾಗಿ ಈ ವರ್ಷ ಹೊರಿಸಬೇಕಾಯಿತು.

3-30 P.M.

ನಮ್ಮ ದೇಶದಲ್ಲಿ, ಮಾನ್ಯ ಹುಚ್ಚಮಾಸ್ತಿ ಗೌಡರು ಹೇಳಿದ ಹಾಗೆ, ನೂರಕ್ಕೆ 80 ಜನ ಭೂಮಿಯನ್ನು ಆಶ್ರಯಿಸಿಕೊಂಡು, ಭೂಮಿಯಿಂದ ಬಂದ ಬೆಳೆಯನ್ನು ಮಾರಾಟ ಮಾಡಿ, ಅದನ್ನೇ ಊಟ ಮಾಡಿ ಅವರ ಜೀವನವನ್ನು ನಡೆಸಿಕೊಂಡು ಹೋಗುತ್ತಾರೆ. ಡಾಕ್ಟರು ರಾಮಮನೋಹರ ಲೋಹಿಯಾ ಅವರು ಹೇಳಿದ ಹಾಗೆ ದೇಶದಲ್ಲಿರುವ 27 ಕೋಟಿ ಜನರ ದಿನದ ಆದಾಯ ಮೂರಾಣೆ ಎಂದು ಹೇಳಬಹುದು. ರೈತ ಜೋಳ, ರಾಗಿ ಬೆಳೆಯುತ್ತಾರೆ. ಮಳೆ ಬಂದರೆ ಬಿತ್ತಿದ ಬೀಜದಿಂದ ಕೈಗೆ ಬೆಳೆ ಸಿಕ್ಕರೆ ಅದನ್ನು ಮಾರಾಟ ಮಾಡಿ ಜೀವನ ಮಾಡಬೇಕು, ಅಷ್ಟು ಹೀನ ಪರಿಸ್ಥಿತಿ ಹಳ್ಳಿಗಳಲ್ಲಿ ರೈತರದ್ದಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿ ಎಷ್ಟೋ ಯೋಜನೆಗಳನ್ನು ಮಾಡಿದ್ದರೆ, ಕೆಲಸ ಮಾಡಲು ಮಾರ್ಗದರ್ಶನ ಮಾಡಿದ್ದರೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿತ್ತು. ತುಂಗಭದ್ರಾ ಭದ್ರಾ ಅಣೆಕಟ್ಟು ಕಟ್ಟಿ ದುಡ್ಡು ಖರ್ಚು ಮಾಡಿದ್ದಾರೆ. ನೀರು ಹೊಲದ ಮೇಲೆ ಹೋಗುವ ಹಾಗೆ ಮಾಡಿದ್ದಾರೆ, ಆದರೆ ನೀರು ಬಳಸಲು ಸಾಧ್ಯವಾಗಿಲ್ಲ. ಈ ಪರಿಸ್ಥಿತಿಯನ್ನು ನಾವು ವ್ಯಾಪಕ ದೃಷ್ಟಿಯಿಂದ ನೋಡಬೇಕು. ಮಾನ್ಯ ಸದಸ್ಯರು ಅನೇಕ ಒಳ್ಳೆ ಸಲಹೆಗಳನ್ನು ಕೊಟ್ಟಿದ್ದಾರೆ. ತಕಾವಿ ಸಾಲ, ಕೆರೆ ಬಾವಿ ಮಾಡುವುದು ಹೀಗೆ ಇನ್ನೂ ಅನೇಕ ಸಲಹೆಗಳನ್ನು ಮಾಡಿದ್ದಾರೆ. ತಮ್ಮ ಗಮನಕ್ಕೆ ಪುನಃ ಒತ್ತಾಯ ಪಡಿಸಿ ಹೇಳುವಂತಾಗಿದೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಸರಕಾರದ ಗಮನಕ್ಕೆ ಮತ್ತೊಂದು ವಿಷಯವನ್ನು ನಾನು ತರಬೇಕೆಂದಿದ್ದೇನೆ. ಇಂದು ನಾವು ಆಧುನಿಕ ಯುಗದಲ್ಲಿ ಇದ್ದೇವೆ. ಇದು ಸ್ಪುಟ್ನಿಕ್ ಯುಗ. ಮಾನವ ಪ್ರಕೃತಿಯ ಒಂದು ಅಂಶ ಅಂಗವಾದರೂ ಪ್ರಕೃತಿಯನ್ನು ತನ್ನ ಹತೋಟಿಗೆ ತರಲು ಸತತ ಹೋರಾಡುತ್ತಿದ್ದಾನೆ. ಆದರೂ ಕೂಡ ಅದಕ್ಕೆ ಪ್ರಕೃತಿಯ ಒಪ್ಪಿಗೆ ಬೇಕು. ಆಗಾಗ್ಗೆ ಭೂಕಂಪವಾಗುತ್ತದೆ. ನದಿಗಳು ಹೊರಸೂಸಿ ಹರಿದು ಪ್ರವಾಹಕ್ಕೆ ತುತ್ತಾಗುತ್ತಾರೆ. ಮಳೆ ಹೋಗಿ ಕ್ಷಾಮ ಉಂಟಾಗುತ್ತದೆ. ಅತಿ ವೃಷ್ಟಿ ಅನಾವೃಷ್ಟಿಗೆ ಜನ ತುತ್ತಾಗುತ್ತಾರೆ. ಪ್ರಕೃತಿಯ ದಯಾ ದಾಕ್ಷಿಣ್ಯದಲ್ಲಿ ಇಂದು ನಾವು ಬದುಕುತ್ತಿದ್ದೇವೆ. ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿ ಮುಖ್ಯವಾಗಿ ರೈತನ ಜೀವನ ಮಳೆ ನೀರಿನ ಮೇಲೆ ಅವಲಂಬಿಸಿದೆ. ಪ್ರಕೃತಿಯನ್ನು ಅವಲಂಬಿಸಿಕೊಂಡಿದ್ದೇವೆ. ಪರಿಸ್ಥಿತಿ ಹೀಗಿರುವಾಗ ಪರಿಹಾರ ದೃಷ್ಟಿಯಿಂದ ನೋಡುವಾಗ ಸರಕಾರದ ಮಟ್ಟಿಗೆ ಪರಿಹಾರದ ಕೆಲವು ತುರ್ತು ಕಾರ್ಯಗಳನ್ನು ತಿಳಿಸಬೇಕೆಂದಿದ್ದೇನೆ. ಮುಖ್ಯವಾಗಿ ಇಂಥ ಸನ್ನಿವೇಶದಲ್ಲಿ ಸರಕಾರ ಎಲ್ಲ ಆವಶ್ಯಕ ವಸ್ತುಗಳ ಬೆಲೆ ಹತೋಟಿಯಲ್ಲಿ ಹಿಡಿದು ಇಡಬೇಕು. ಇಂಥ ಸಂದರ್ಭದಲ್ಲಿ ಕಳ್ಳ ವ್ಯಾಪಾರ ಮಾಡುವವರು ಹೆಚ್ಚಾಗಿ ದುರುಪಯೋಗ ಪಡಿಸಿಕೊಂಡು ಲಾಭ ಪಡೆಯತಕ್ಕಂಥ ಜನ ಇದ್ದಾರೆ. ಜನರಲ್ಲಿ ಪ್ಯಾನಿಕ್ ಕ್ರಿಯೇಟ್ ಮಾಡಿ ಮಳೆ ಇಲ್ಲ ಬೆಳೆ ಇಲ್ಲ, ಎಂದು ಪ್ರಚಾರ ಮಾಡುತ್ತಾ ಇಂಥ ಜನ ದೇಶದಲ್ಲಿ ಕ್ಷೋಭೆ, ಹಾಹಾಕಾರ ಉಂಟು ಮಾಡುತ್ತಾರೆ ಇಂಥ ಅವಕಾಶ

(ಶ್ರೀ ಎಸ್. ಗೋಪಾಲ ಗೌಡ)

ವನ್ನು ದುರುಪಯೋಗ ಪಡಿಸಿಕೊಂಡು ಚೀನಿಯರೂ ಸಹ ಲಾಭ ಪಡೆಯುತ್ತಾರೆ. ಆದುದರಿಂದ ಇಂಥ ಸಂದರ್ಭದಲ್ಲಿ ಸರಕಾರ ಎಲ್ಲ ವಸ್ತುಗಳ ಬೆಲೆ ಹತೋಟಿಯಲ್ಲಿಡಲು ಸೂಕ್ತ ಕ್ರಮ, ತೀವ್ರ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳಬೇಕು. ಇದು ಇಡೀ ದೇಶಕ್ಕೇ ಸಂಬಂಧಪಟ್ಟ ವಿಷಯ ಒಂದು ರಾಜ್ಯದಲ್ಲಿ ಮಾತ್ರ ಬೆಲೆ ಹತೋಟಿಗೆ ತರುವ ವಿಷಯ ಇದು ಅಲ್ಲ, ಒಂದು ರಾಜ್ಯದಲ್ಲಿ ಹೇಗೆ ಹತೋಟಿಗೆ ತರುವುದು ಸಾಧ್ಯ ಎಂದು ಬೆಲೆಯ ವಿಷಯ ಬಂದಾಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಹೇಳಿದರು. ಇದನ್ನು ಎಲ್ಲಾ ರಾಜ್ಯಗಳೂ ಗಮನಿಸುವುದಲ್ಲದ ಕೇಂದ್ರ ಸರಕಾರವೂ ಹೆಚ್ಚಾಗಿ ಗಮನಿಸಬೇಕಾದ ವಿಷಯ ? ಕೇಂದ್ರ ಸರಕಾರ, ರಾಜ್ಯ ಸರಕಾರ ಒಟ್ಟಾಗಿ ಮೂಲ ಆವಶ್ಯಕ ವಸ್ತುಗಳ ನಿತ್ಯ ಬಳಕೆಗೆ ಬೇಕಾಗತಕ್ಕ ವಸ್ತುಗಳ ಬೆಲೆ ಏರದಂತೆ ಅಲ್ಲಲ್ಲಿ ಅಗ್ಗ ದರದ ಅಂಗಡಿಗಳನ್ನು ತೆರೆಯಬೇಕು. ಪ್ರತಿಯೊಂದು ಜಿಲ್ಲೆಯಲ್ಲಿ ಸಹಕಾರಿ ಸಂಘಗಳ ಮೂಲಕ ಇಂಥ ಅಗ್ಗದರದ ಅಂಗಡಿಗಳನ್ನು ತೆರೆದು ಆಹಾರ ಧಾನ್ಯಗಳನ್ನು ಸೂಕ್ತವಾದ ಬೆಲೆಗೆ ದೊರೆಯುವ ಹಾಗೆ ಮಾಡಿ ಹತೋಟಿಯಲ್ಲಿ ಇಡಬೇಕಾದುದು ಸರಕಾರದ ಮೊದಲನೇ ಕೆಲಸ ಎಂದು ನಾನು ತಿಳಿಯುತ್ತೇನೆ.

ಇನ್ನು ಜಾನುವಾರಗಳಿಗೆ ಮೇವು ಒದಗಿಸಬೇಕಾದುದು ಅಗತ್ಯ ಮೇವು ಇಲ್ಲದೆ ಇಂದು ದೇಶದಲ್ಲಿ ಸಹಸ್ರಾರು ಜಾನುವಾರಗಳು ಸಾಯುತ್ತಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದು 16 ವರ್ಷವಾದರೂ ನೀರಿನ ಅಭಾವ ಹೋಗಿಲ್ಲ, ಎಲ್ಲ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳ ವ್ಯವಸ್ಥೆ ಮಾಡಲು ಸಾಧ್ಯವಾಗಿಲ್ಲ. ಇನ್ನೂ ಸಹಸ್ರಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿ ಇಲ್ಲದೆ ಕೆರೆಯ ನೀರೋ ಕಟ್ಟೆ ನೀರೋ ಕುಡಿದು ಹಳ್ಳಿಯಲ್ಲಿ ಬದುಕತಕ್ಕಂಥ ಒಂದು ಹೀನ ಸ್ಥಿತಿ ಇದೆ. ಜನರಿಗೆ ಕುಡಿಯುವ ನೀರನ್ನು ಒದಗಿಸಬೇಕು, ಜಾನುವಾರಗಳಿಗೆ ಇನ್ನೂ ಹೆಚ್ಚಿನ ನಿಗಾ ಕೊಟ್ಟು ನೀರನ್ನು ಒದಗಿಸಬೇಕಾದುದು ಬಹಳ ಅಗತ್ಯವಾದುದು. ಜಾನುವಾರಗಳು ಮೂಕ ಪ್ರಾಣಿ. ಅವುಗಳಿಗೆ ನೀರು ಎಲ್ಲಿಂದ ಬರಬೇಕು ? ನೀರಿಲ್ಲದೆ ಜಾನುವಾರಗಳು ಸಣ್ಣಗೆ ಆಗಿ ಸಹಸ್ರಾರು ಸಾಯುತ್ತಿವೆ. ಈ ರೀತಿಯಾದರೆ ಹಳ್ಳಿಯ ಆರ್ಥಿಕ ವ್ಯವಸ್ಥೆ ಹಾಳಾಗಿ ಹೋಗುತ್ತದೆ. ಜಾನುವಾರಗಳಿಗೆ ನೀರು ಒದಗಿಸುವುದು ಮೇವು ಒದಗಿಸುವುದು ಈ ತುರ್ತು ಪರಿಸ್ಥಿತಿಯಲ್ಲಿ ಈ ಕೆಲಸವನ್ನು ಸರಕಾರ ಮಾಡಬೇಕು. ಇನ್ನು ಹಳ್ಳಿ ಯಲ್ಲಿ ಬೇಸಾಯ ಮಾಡುತ್ತ ಕೂಲಿ ಜನರು ಸಹಸ್ರಾರು, ಲಕ್ಷ ಸಂಖ್ಯೆಯಲ್ಲಿ ಇದ್ದಾರೆ. ಅಭಾವ ಪರಿಸ್ಥಿತಿಯಲ್ಲಿ ಅವರಿಗೆ ಕೆಲಸವಿರುವುದಿಲ್ಲ ; ಯಾರು ಕರೆಯುವುದಿಲ್ಲ. ಅಂಥವರು ಅನ್ನವಿಲ್ಲದೆ ದಿಕ್ಕಾಪಾಲು ಆಗುತ್ತಿದ್ದಾರೆ. ಆಹಾರವಿಲ್ಲದೆ ಸೊಪ್ಪು ತಿಂದು ಬದುಕುವದಕ್ಕೆ ಪ್ರಯತ್ನಿಸುವಾಗ್ಗೆ ಕಾಯಿಲೆ ಕಸಾರಿಕೆ ಬಿದ್ದು ಸಾಯುವ ಪರಿಸ್ಥಿತಿ ಉಂಟಾಗಿದೆ. ಮುಖ್ಯವಾಗಿ ಭೂಮಿ ಇಲ್ಲದ ಹರಿಜನರು ಇದ್ದಾರೆ ; ಹಳ್ಳಿಯಲ್ಲಿ ಅವರಿಗೆ ಉದ್ಯೋಗವಿಲ್ಲ. ಜಮೀನಿನಲ್ಲಿ ಸಿಕ್ಕತಕ್ಕಂಥ ಕೆಲಸವನ್ನು ನೆಚ್ಚಿಕೊಂಡು ಜೀವನ ಮಾಡುತ್ತಿರುತ್ತಾರೆ. ಅವರಿಗೆ ಕೂಲಿ ಸಿಕ್ಕುವುದಿಲ್ಲ. ಅಂಥವರಿಗೆ ಏನೂ ಕೆಲಸ ಸಿಕ್ಕುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಆದಷ್ಟು ಬೇಗ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ಗೋಪಾಲಗೌಡ.—ಒಟ್ಟಿನಲ್ಲಿ ಜನರಿಗೆ ನೆರವು ನೀಡಬೇಕು. ಅಭಾವ ಪರಿಸ್ಥಿತಿ ಉಂಟಾದ ಪ್ರದೇಶದಲ್ಲಿ ಜನ ಊರು ಬಿಟ್ಟು ಅಲೆದಾಡುತ್ತಿದ್ದಾರೆ. ಅಂಥವರ ಸಲುವಾಗಿ ಗಂಜೀ ಕೇಂದ್ರ ತೆರೆಯಬೇಕು. ಎರಡು ಹೊತ್ತು ಗಂಜಿ ಕುಡಿದು ಬದುಕುವ ಕಾಲ ಬರುತ್ತಿದೆ. ಇಂಥ ತುಟಾಗ್ರತೆಯ ಕಾಲದಲ್ಲಿ ಬೇರೆ ಮಾರ್ಗ ಇಲ್ಲದಿರುವಾಗ್ಗೆ ಇಂಥ ಜನರ ರಕ್ಷಣೆಯ ಭಾರ ಸರಕಾರ ಹೊರಬೇಕಾಗುತ್ತದೆ. ಇನ್ನು ದುಡಿದು ಜೀವನ ಮಾಡತಕ್ಕಂಥವರಿಗೆ ಉದ್ಯೋಗ ಒದಗಿಸಬೇಕು. ಆಯಾಯ ಊರಿನ ಜನರನ್ನೇ ಅಲ್ಲಿಯ ಕೆಲಸಕ್ಕೆ ಹಚ್ಚಬೇಕು ಬಾವಿ ತೋಡುವುದಕ್ಕೆ ನಾಲಾ, ಸಣ್ಣ ಪಿಕಪ್ಪ ಹಾಕುವುದಕ್ಕೆ ಕೆರೆ ಹೂಳು ತಗೆಯುವುದು, ಮನೆ ಕಟ್ಟುವುದಕ್ಕೆ ಬೇಕಾದ ಸಲಕರಣೆ ತಯಾರು ಮಾಡುವುದು ಮನೆ ಕಟ್ಟತಕ್ಕಂಥ ಕೆಲಸ ಗೋ ಕಟ್ಟೆ ಕೆಲಸ ಹಳ್ಳಿಗಳಲ್ಲಿ ಹಳ್ಳಿಯ ಜನರಿಗೆ ಅನುಕೂಲವಾಗುವಂಥ ಮುಂದೆ ಶಾಶ್ವತವಾಗಿ ಉಳಿಯತಕ್ಕಂಥ ಕೆಲಸಗಳಲ್ಲಿ ಸಂತ್ರಸ್ತ ಜನರನ್ನು ತೊಡಗಿಸಬೇಕು, ಅವರಿಗೆ ಕೂಲಿ ಕೊಡಬೇಕು ಮತ್ತು ಅಗ್ಗದರದಲ್ಲಿ ಆಹಾರ ಧಾನ್ಯ ಒದಗಿಸಬೇಕು. ಇಂಥ ಅಭಾವ ಪರಿಸ್ಥಿತಿಗೆ ತಡೆ ಹಾಕುವುದಕ್ಕೆ ಸರಕಾರ ಸಹಾಯ ಮಾಡಬೇಕು.

ಇನ್ನೊಂದು ವಿಷಯ ಬಹಳ ಮುಖ್ಯವಾದದ್ದು. ಈ ರೈತರಿಗೆ ಬೀಜ ಕೊಡುವುದು, ಮುಂಗಡ ಸಾಲ ಕೊಡುವುದು ಇದೆಲ್ಲಾ ಮಾಡಬೇಕಾದ್ದೇ. ಫಸಲು ಉಳಿಸುವುದಕ್ಕೆ ಸಹಾಯ ಮಾಡುವುದರ ಜೊತೆಗೆ ಅಭಾವ ಪ್ರದೇಶಗಳಲ್ಲಿ ಈಗಾಗಲೇ ಅನೇಕರು ಬೇಡಿಕೆಯನ್ನು ಸರ್ಕಾರದವರ ಮುಂದೆ ಇಟ್ಟಿದ್ದಾರೆ, ಕಂದಾಯವನ್ನು ಮಾಫಿ ಮಾಡಬೇಕೆಂದು ಹೇಳಿದ್ದಾರೆ. ಈ ಗೊಂದಲ ಸಮಯದಲ್ಲಿ ಏನಾಗುತ್ತದೆ ಎಂದರೆ ಪಹಣಿ ಬರೆಯುವಾಗ 6 ಆಣೆ ಎಂದು ಬರೆದಿರುತ್ತಾರೆ 6 ಆಣೆಗಿಂತ ಕಡಿಮೆ

ಯಾದರೆ ಮಾಫಿ ಮಾಡಬೇಕೆಂದು ಕಾನೂನು ಇರುತ್ತದೆ, ಸಹಾಯ ಮಾಡುತ್ತಾರೆ. ಆದ್ದರಿಂದ ಶ್ರೀಮಾನ್ ಕೃಷ್ಣಪ್ಪನವರು ಆ ಬರವಣಿಗೆಯ ಕಡೆಗೆ ಗಮನ ಕೊಡದೇ ಎಲ್ಲಿ ಅಭಾವ ಪರಿಸ್ಥಿತಿ ಇದೆ ಫಸಲು ಒಣಗಿ ಹೋಗಿ ಹಾಳಾಗುತ್ತಾ ಇದೆ, ಆ ಪ್ರದೇಶಗಳಲ್ಲಿ ಕಂದಾಯ ಮಾಫೀ ಮಾಡಬೇಕು ಮತ್ತು ಈ ಸರ್‌ಚಾರ್ಜ್ ಹಾಕಿದಗಳಿಗೆ ಒಳ್ಳೆಯದಲ್ಲಿ ಎಂದು ಕಾಣುತ್ತದೆ ಅದನ್ನು ವಸೂಲು ಮಾಡುವುದನ್ನು ಮುಂದಕ್ಕೆ ಹಾಕುವುದು ಒಳ್ಳೆಯದು ಎಂದು ಕಾಣುತ್ತದೆ. ಇನ್ನೂ ಕೆಟ್ಟ ಪರಿಸ್ಥಿತಿ ಬಂದರೆ ಇನ್ನೂ ಚೈನಾ ಆಕ್ರಮಣ ಮುಂದೊಡುತ್ತಾ ಬಂದರೆ ಅಂತಹ ಪರಿಸ್ಥಿತಿಯಲ್ಲಿ ಸರ್‌ಚಾರ್ಜನ್ನು ಒಂದಕ್ಕೆ ಎರಡರಷ್ಟು ಮಾಡಿರುವುದನ್ನು ತೀವ್ರವಾಗಿ ವಸೂಲು ಮಾಡುವುದಕ್ಕೆ ಹೋಗಬಹುದು. ನಮ್ಮ ರಾಜ್ಯದಲ್ಲಿ 15–20–30 ರೂಪಾಯಿ ಒಳಗೆ ಕಂದಾಯ ಕೊಟ್ಟುಕೊಂಡು ಬಂದಿರತಕ್ಕ ನಮ್ಮ ರೈತರಿಗೆ ಈ ಸಂದರ್ಭದಲ್ಲಿ ಪೂರ್ಣ ಕಂದಾಯವನ್ನು ಮಾಫಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಶಾಶ್ವತವಾದ ಪರಿಹಾರ ಎಂದು ಹೇಳಿ ಎಲ್ಲಾ ಮಾನ್ಯ ಸದಸ್ಯರೂ ಒತ್ತಾಯ ಪಡಿಸಿದ್ದಾರೆ ಮತ್ತು ಕೆಲವು ಮಾನ್ಯ ಸದಸ್ಯರು ನಾವು ಅನೇಕ ವರ್ಷಗಳಿಂದ ಈ ಪರಿಸ್ಥಿತಿಯಲ್ಲಿ ಇದ್ದೇವೆ ಎಂದು ಹೇಳಿದರು. ಇದು ಒಂದು ದೊಡ್ಡ ಸಮಸ್ಯೆ, ಆದ್ದರಿಂದ ಈ ಶಾಶ್ವತವಾದ ಕ್ಷಾಮ ಅಥವಾ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಮಾಡುತ್ತಿದ್ದಾರೆ ದೊಡ್ಡ ಯೋಜನೆಗಳು ಇನ್ನೂ ಫಲ ಕೊಟ್ಟಿಲ್ಲ ಉದಾಹರಣೆಗೆ ಭದ್ರಾ ಮತ್ತು ತುಂಗಭದ್ರಾ. ಸಣ್ಣ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿ ವರ್ಷಕ್ಕೆ 2 ಕೋಟಿ ರೂಪಾಯಿಗಳನ್ನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಕೊಟ್ಟು ಅವರ ಮೂಲಕ ಪಂಪ್ ಸೆಟ್ಟುಗಳನ್ನು ಕೊಡುತ್ತೇವೆ, ವಿದ್ಯುಚ್ಛಕ್ತಿ ಕೊಡುತ್ತೇವೆ ಎಂದು ಮಾಡಿದ್ದೀರಿ ಅದು ಇನ್ನೂ ಪೂರ್ತಿ ಸಫಲವಾಗಿಲ್ಲ ಅದರ ಬಗ್ಗೆ ಈಗಾಗಲೇ ಅನೇಕ ಸದಸ್ಯರು ಒತ್ತಾಯ ಮಾಡಿ ಆ ಕೆಲಸ ಬೇಗ ಆಗಬೇಕೆಂದು ಹೇಳಿದ್ದಾರೆ. ಎಲ್ಲಿಯ ತನಕ ನಮ್ಮ ದೇಶದ ಬಹು ಸಂಖ್ಯೆಯ ಜನರು ಈಗಿರುವ ರೀತಿಯಲ್ಲಿ ವ್ಯವಸಾಯವನ್ನೇ ತಮ್ಮ ಜೀವನಾಧಾರವಾಗಿ, ಕಸಬನ್ನಾಗಿ ಅವಲಂಬಿಸಿ ಕೊಂಡಿರುತ್ತಾರೋ ಮತ್ತು ಎಲ್ಲಿಯ ತನಕ ಮಳೆ ಬಂದು ಬೆಳೆ ಬೆಳೆಯತಕ್ಕ ವ್ಯವಸ್ಥೆಗೆ ಒಳಗಾಗಿರುತ್ತಾರೋ ಅಲ್ಲಿಯ ತನಕ ಈ ಕ್ಷಾಮ ಅಭಾವ ಪರಿಸ್ಥಿತಿಗಳು ಪದೇ ಪದೇ ಬರುತ್ತಲೇ ಇರುತ್ತವೆ. ಇದನ್ನು ಹೋಗಲಾಡಿಸಬೇಕಾದರೆ ನಾವು ಕೃತಕವಾದ ನೀರಿನ ಸರಬರಾಯನ್ನು ಮಾಡಿಕೊಳ್ಳಬೇಕು ಅದಕ್ಕನುಗುಣವಾಗಿ ನಮ್ಮ ಸಣ್ಣ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ರೈತನಿಗೆ ಆಗತಕ್ಕ ನಷ್ಟವನ್ನು ಯಾರು ಕಟ್ಟಿಕೊಡುವುದಕ್ಕೆ ಆಗುವುದಿಲ್ಲ ಆದ್ದರಿಂದ ಅಂತಹ ಒಂದು ಯೋಜನೆಯನ್ನು ಇವತ್ತು ನಾವು ಕ್ರಮೇಣ ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಮಳೆಗಾಲದಲ್ಲಿ ಹೊಳೆಗಳು ಹುಚ್ಚೆದ್ದು ದಡದ ಮೇಲೆ ಹರಿದು ಬರುತ್ತವೆ, ಕಲವು ಕಡೆ ಕಳೆದ ಮಳೆಗಾಲದಲ್ಲಿ ಪ್ರವಾಹ ಬಂದಾಗ ಅಪಾಯ ಸ್ಥಿತಿಯುಂಟಾಯಿತು. ಪ್ರತಿ ವರ್ಷವೂ ಹೊಳೆಗಳು ಮೇಲೆ ಬಂದು ಅನೇಕರು ಮನೆಗಳನ್ನು ಕಳೆದುಕೊಂಡಿರುತ್ತಾರೆ. ಅಂತಹ ಹುಚ್ಚು ಹೊಳೆಗಳ ಮರ್ಧನ ಮಾಡತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ವರದಾ ನದಿ ಇದೆ, ಅನೇಕ ಸಾರಿ ಹೇಳಿದ್ದೇವೆ. ಹೆಚ್ಚು ಹೆಚ್ಚಾಗಿ ಕೈಗಾರಿಕೀಕರಣ ಮಾಡಬೇಕು ಮತ್ತು ಒಂದು ವರ್ಷಕ್ಕೆ ಆಗುವಷ್ಟು ಯಾವಾಗಲೂ ನಮ್ಮಲ್ಲಿ ಬಫರ್ ಸ್ಟಾಕ್ ಆಗಿ, ಜೋಳ ಗೋಡೌನ್‌ಗಳಲ್ಲಿ ಇಟ್ಟುಕೊಂಡಿರಬೇಕು.

ಇನ್ನು ಮಲೆನಾಡಿನ ವಿಷಯದಲ್ಲಿ ಒಂದು ಮಾತನ್ನು ಹೇಳುವುದಾದರೆ ಮಲೆನಾಡಿನಲ್ಲಿ ತುಂಗ, ಭದ್ರಾನದಿ ಹರಿಯುತ್ತದೆ, ಶರಾವತಿ ಇದೆ ಇವುಗಳಿಂದ ಶಿವಮೊಗ್ಗ ಜಿಲ್ಲೆಯ ಜನರಿಗೆ ಎಷ್ಟು ಪ್ರಯೋಜನವಾಗಿದೆ ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಶಿವಮೊಗ್ಗ ಜಿಲ್ಲೆಯ ಸಂಪತ್ತನ್ನು ತೆಗೆದುಕೊಂಡು ಬೇರೆ ಕಡೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತಾ ಇದ್ದಾರೆ. ಈಗ ಹೊಸದಾಗಿ ತೀರ್ಥ ಹಳ್ಳಿಯಲ್ಲಿ ಅಣೆಕಟ್ಟು ಹಾಕಬೇಕೆಂದು ಸರ್ವೆ ನಡೆಯುತ್ತಾ ಇದೆ. ನನ್ನ ಕ್ಷೇತ್ರದಲ್ಲಿ ಶರಾವತಿಯಿಂದ ಹೊಸ ನಗರ ತಾಲ್ಲೂಕಿನ ಬಹು ಭಾಗ ಮುಳುಗಿ ಹೋಯಿತು. ತೀರ್ಥಹಳ್ಳಿಯಿಂದ ಇನ್ನು ಉಳಿದ ಎರಡು ತಾಲ್ಲೂಕುಗಳೂ ಮುಳುಗುವ ಪರಿಸ್ಥಿತಿ ಬರಬಹುದು. ಹೀಗಾಗಿ ಮಲೆನಾಡು ಪ್ರದೇಶದ ತೀರ್ಥಹಳ್ಳಿಯನ್ನು ಮುಳುಗಿಸಿ ಬಯಲು ಸೀಮೆಯಲ್ಲಿ ಬೆಳೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕೇ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಇನ್ನು ಕೊನೆಯದಾಗಿ ಸರ್ಕಾರದವರು ಈ ತರಹ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟದ್ದಾಕ್ಕಾಗಿ ಅವರಿಗೂ ಮತ್ತು ತಮಗೂ ಧನ್ಯರಾಗಿದ್ದೇವೆ; ರಾಜ್ಯದಲ್ಲಿ ಅಭಾವ ಪರಿಸ್ಥಿತಿಗೆ ಒಳಗಾಗಿರತಕ್ಕ ರೈತರೂ ಕೂಡ ಬಹಳ ಧನ್ಯರಾಗಿರುತ್ತಾರೆ. ಅವರ ಪರವಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಪರಿಸ್ಥಿತಿ ಕೆಟ್ಟು ಹೋದ ಮೇಲೆ ಕಾರ್ಯ ಮಾಡತಕ್ಕ ಪರಿಸ್ಥಿತಿ ಬರಬಾರದು ಈಗಿರತಕ್ಕ ಎಲ್ಲಾ ಪರಿಸ್ಥಿತಿಯನ್ನೂ ಸರ್ವೆ ಮಾಡಿಸಬೇಕು. ಶ್ರೀಮಾನ್ ಅವಲರೆಡ್ಡಿಯವರು ಹೇಳಿದಂತೆ ಅನೇಕ ಕಡೆ ನೀರು ಅಳೆಯುವುದಕ್ಕೆ ರೈನ್‌ಗೇಜ್ ಇರುವುದಿಲ್ಲ ಇದನ್ನೆಲ್ಲಾ ಸರ್ಕಾರದವರು

(ಶ್ರೀ ಎಸ್. ಗೋಪಾಲಗೌಡ)

ಸಿದ್ಧವಾಗಿಟ್ಟು ಕೊಂಡಿರಬೇಕು. ಒಟ್ಟಿನಲ್ಲಿ ಈ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ತಮ್ಮ ಆಗ್ರಹಕ್ಕೆ ತುತ್ತಾಗಬಾರದು ಶ್ರೀಮಾನ್ ಲಕ್ಕಪ್ಪನವರ ಸ್ಥಿತಿ ಏನಾಯಿತೋ ಅದು ಆಗಬಾರದು ಎಂದು ಹೇಳಿ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಆರ್. ಕೆಂಚಪ್ಪ (ಪಾವಗಡ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಹುಚ್ಚಮಾಸ್ತಿ ಗೌಡರು ತಂದಿರತಕ್ಕ ನಿರ್ಣಯವನ್ನು ಸ್ವಾಗತಿಸುತ್ತಾ ನಾನು ಹಲವು ಸಲಹೆಗಳನ್ನು ಸಭೆಯ ಮುಂದೆ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಸ್ವಾಮಿ, ಸರ್ವೋದಯವಾಗಬೇಕು, ಸರ್ವರ ಅಭಿವೃದ್ಧಿಯಾಗಬೇಕು ಸರ್ವರ ಪ್ರಗತಿಯಾಗಬೇಕು ಎಂದು ಹೇಳಿ ಅದನ್ನು ಸಾಧನೆ ಮಾಡಬೇಕೆಂದು ರೂಪಿಸಿಕೊಂಡಿರತಕ್ಕ ಸರ್ಕಾರ ದೇಶದಲ್ಲಿರತಕ್ಕ ಅನೇಕ ಭಾಗದ ಕ್ಷಾಮ ಪ್ರದೇಶಗಳನ್ನು ಮೊದಲಿನಿಂದಲೂ ಕಡೆಗಾಣಿಸಿದೆ ಎಂದರೆ ತಪ್ಪಾಗಲಾರದು ಎಂದು ನಾನು ಭಾವಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿ ಮಧುಗಿರಿ, ಪಾವಗಡ, ಸಿರಾ ಆಂಧ್ರ ಪ್ರದೇಶದ ರಾಯಲು ಸೀಮೆಯಿಂದ ಸುತ್ತಲೂ ಆವರಿಸಿಕೊಂಡು ಕ್ಷಾಮ ಪ್ರದೇಶ ಎಂದು ಘೋಷಿಸಲ್ಪಟ್ಟಿದೆ. ಆ ಪ್ರದೇಶದಲ್ಲಿ ಸರ್ಕಾರದವರು ಮೊದಲಿನಿಂದಲೂ ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದೇ ಅನಾದರಣೆ ಮಾಡಿದ್ದಾರೆ. ಪಾವಗಡ ತಾಲ್ಲೂಕಿನಲ್ಲಿ 1960-61 ಮತ್ತು 61-62ನೇ ಇಸವಿಯಲ್ಲಿ ಎಸ್ಟಿಮೇಟ್ ತಯಾರಾಗಿ ಬಜೆಟ್‌ನಲ್ಲಿ ಸೇರಿಸಿದ್ದ ಮಂಜೂರಾಗಬೇಕಾದ ಅನೇಕ ಕೆಲಸಗಳು ಹಣ ಖರ್ಚಾಗದೇ ಕೈ ಬಿಟ್ಟು ಹೋಗಿವೆ. ಸರ್ಕಾರದವರು ಎಲ್ಲಿ ಹೇರಳವಾಗಿ ಮಳೆ ಸುರಿದು ಜೀವ ನದಿಗಳು ಹರಿಯುತ್ತಾ ಇವೆಯೋ ಅಲ್ಲೇ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಿಸುತ್ತಾ ಇದ್ದಾರೆ. ಒಂದು ಸಂಸಾರವನ್ನು ಪೋಷಣೆ ಮಾಡಬೇಕಾದರೆ ಒಬ್ಬ ವ್ಯಕ್ತಿ ದುಡಿದು ಇಡೀ ಸಂಸಾರವನ್ನು ಪೋಷಣೆ ಮಾಡಬೇಕೆಂದರೆ ಅದು ದುರ್ಲಭ ಎಂದು ಭಾವಿಸುತ್ತೇನೆ. ಹಾಗೆಯೇ ಎಲ್ಲಾ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಾಣ ಮಾಡಿ ಇಡೀ ದೇಶಕ್ಕೆ ಅನ್ನ ಹಾಕುತ್ತೇವೆ ಎಂದರೆ ಅದು ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಕ್ಷಾಮ ಪ್ರದೇಶಗಳಿಗೆ ಹೋಗಿರತಕ್ಕ ನದಿಗಳು ಯಾವ ಯಾವುವು ಇವೆ ಅವುಗಳಿಂದ ಆ ಪ್ರದೇಶಗಳಿಗೆ ನೀರನ್ನು ತೆಗೆದುಕೊಂಡು ಹೋಗತಕ್ಕ ಕಾರ್ಯವನ್ನು ಸರ್ವೇ ಮಾಡಿಸಿ ಸಾಧ್ಯಾಸಾಧ್ಯಗಳನ್ನು ಕಂಡು ಹಿಡಿದು ಅನಂತರ ಸ್ವಲ್ಪ ಸ್ವಲ್ಪವಾಗಿ, ಸರ್ಕಾರದವರು ಭಗೀರಥ ಪ್ರಯತ್ನವನ್ನಾದರೂ ಮಾಡಿ ನಮ್ಮ ತಾಲ್ಲೂಕಿಗೆ ಎಲ್ಲಿಂದಲಾದರೂ ಸರಿಯೇ ನೀರನ್ನು ತಂದು ಒದಗಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಜನ ಒಂದು ತಂಬಿಗೆ ನೀರಿಗೆ 10 ರೂಪಾಯಿಗಳಾದರೂ ಚಿಂತೆಯಿಲ್ಲ—ನಾವು ಆ ಖರ್ಚುವೆಚ್ಚಗಳನ್ನೆಲ್ಲಾ ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ನೀರನ್ನು ತರಿಸಲು ನೀವು ಏನಾದರೂ ಏರ್ಪಾಡನ್ನು ಮಾಡಲೇಬೇಕೆಂದು ಒತ್ತಾಯ ಮಾಡಿ ಪೀಡಿಸುತ್ತಿದ್ದಾರೆ. ಈ ಜನರ ಆಶ ಆಕಾಂಕ್ಷೆಗಳನ್ನು ಈಡೇರಿಸಬೇಕಾದ್ದು ಸರ್ಕಾರದವರ ಆದ್ಯ ಕರ್ತವ್ಯ. ಸರ್ಕಾರದವರು ಈಗ ಆ ಲಿಬರಲೈಸ್ಡ್ ಮತ್ತು ನಾರ್ಮಲ್ ಸ್ಕೀಮುಗಳ ಬಗ್ಗೆ ಕೊಡುತ್ತಿರುವ ಹಣ ಸಾಲದು. ಅದನ್ನಿನ್ನೂ ಹೆಚ್ಚಿಸಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ರೈತರ ಜನರಿಗೆ ಒದಗಿಸಬೇಕಾಗಿರತಕ್ಕ ಪಂಪ್-ಸೆಟ್ಟುಗಳ ವಿಚಾರದಲ್ಲೂ, ಕೆರೆಗಳ ರಿಪೇರಿಯ ಕೆಲಸದಲ್ಲೂ, ಸರ್ಕಾರ ಬಹಳ ನಿಧಾನ ಮಾಡುತ್ತಿದೆ. ನಮ್ಮ ತಾಲ್ಲೂಕಿನ ಅನೇಕ ಅರ್ಜಿಗಳು ಸರ್ಕಾರದಲ್ಲಿ ಪೆಂಡಿಂಗ್ ಬಿದ್ದು, ಈವರೆಗೆ ನಮ್ಮ ತಾಲ್ಲೂಕಿಗೆ ಒಂದು ಪಂಪ್‌ಸೆಟ್ಟು ಸಹ ಮಂಜೂರಾಗಿಲ್ಲ ಎಂದು ಕೇಳುತ್ತೇನೆ. ನಮ್ಮಲ್ಲಿ ಎಪ್ಪತ್ತು ಎಂಬತ್ತು ಅಡಿ ಆಳ ತೆಗೆದರೂ ಬಾವಿಯಲ್ಲಿ ನೀರು ದೊರೆಯುವುದು ದುರ್ಲಭ. ಆ ನೀರನ್ನೆತ್ತಿ ವ್ಯವಸಾಯ ಮಾಡಲು ಸಾವಿರಾರು ರೂಪಾಯಿ ಬೆಲೆ ಬಾಳತಕ್ಕ ಎತ್ತುಗಳು ಬೇಕು. ಅಂಥ ಹಣವ ಸಾಮರ್ಥ್ಯವುಳ್ಳ ರೈತರು ನಮ್ಮಲ್ಲಿಲ್ಲ. ಅಂಥ ಎತ್ತುಗಳಾದರೂ ಕೂಡ ಕೇವಲ ಒಂದೆರಡು ತಿಂಗಳಲ್ಲೇ ಕಡೆಬಿದ್ದು ಹೋಗುತ್ತವೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ನಮ್ಮ ತಾಲ್ಲೂಕಿಗೆ ಪಂಪ್‌ಸೆಟ್‌ಗಳನ್ನೊದಗಿಸಿ ಕೊಟ್ಟು ಈಗಿರತಕ್ಕ ವಿದ್ಯುಚ್ಛಕ್ತಿ ಪೂರೈಕೆಯನ್ನು ಇನ್ನೂ ಹೆಚ್ಚು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಅಲ್ಲಿಗೆ ಸರಬರಾಯಿಯಾಗಿರತಕ್ಕ ವಿದ್ಯುಚ್ಛಕ್ತಿ ವೊಲ್ಟೇಜ್ ಕಡಿಮೆಯಾಗಿರುವುದರಿಂದ ಅನೇಕ ಪಂಪ್‌ಸೆಟ್‌ಗಳು ಮಟ್ಟು ಹೋಗಿ ರೈತರಿಗೆ ಅಪಾರ ನಷ್ಟ ಉಂಟಾಗಿವೆ. ಆದ್ದರಿಂದ ಅಲ್ಲಿಗೆ ಕೊಡತಕ್ಕ ಪವರ್ ಶಕ್ತಿಯನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಪಾವಗಡ ತಾಲ್ಲೂಕಿಗೆ ಲಿಫ್ಟ್ ಇರಿಗೇಷನ್ ಬಗ್ಗೆ ಎಂಟು ಲಕ್ಷ ರೂಪಾಯಿಗಳ ಸ್ಕೀಮ್ ಮಂಜೂರಾದ್ದು ಇಲ್ಲಿಯವರಗೂ ಕಾರ್ಯರೂಪಕ್ಕೆ ತರದೆ ಹಾಗೇ ನಿಂತು ಹೋಗಿದೆ. ಇದರಿಂದ ಅಲ್ಲಿಯ ಜನರ ಕಷ್ಟ ಕಾರ್ಪಣ್ಯಗಳನ್ನು ಊಹಿಸುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಜನರ ತೊಂದರೆಯೇನೆಂಬುದನ್ನು ಸಣ್ಣ ನೀರಾವರಿ ಯೋಜನೆಯ ಉಪ ಮಂತ್ರಿಗಳು ಸ್ಥಳಕ್ಕೆ ಬಂದು ಎಲ್ಲವನ್ನೂ

ಪದಾಂಬರಿಸಿ ತಿಳಿದುಕೊಂಡಿದ್ದಾರೆ. ಆದ್ದರಿಂದ ಅವರಿಗೆ ಆದಷ್ಟು ಬೇಗ ಅನುಕೂಲಗಳನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ನಂದೀದುರ್ಗದಲ್ಲಿ ಹುಟ್ಟಿ ಹರಿಯುತಕ್ಕ ಪಾಲಾರ್-ಉತ್ತರ ಪಿನಾಕಿನಿ ನದಿಗಳಿಗೆ ನಾವು ಯಾವ ಯೋಜನೆಯನ್ನೂ ಹಾಕಿಕೊಳ್ಳದಿರುವುದರಿಂದ ಆ ನೀರೆಲ್ಲ ಹರಿದು ಆಂಧ್ರ ಪ್ರದೇಶಕ್ಕೆ ತುಂಬಾ ಅನುಕೂಲವಾಗುತ್ತಿದೆ. ಈ ನದಿಗಳಿಗೆ ಅಣೆ ಕಟ್ಟನ್ನು ಹಾಕಿದರೆ ಪಾವಗಡ, ಗೌರೀಬಿದನೂರು ತಾಲ್ಲೂಕುಗಳಲ್ಲಿ ಸಾವಿರಾರು ಎಕರೆ ತರಿ ಸಾಗುವಳಿ ಆಗುತ್ತದೆ. ಅನೇಕರಿಗೆ ಅನುಕೂಲವಾಗುತ್ತದೆ. ಅದೇಕೆ ಸರ್ಕಾರ ಇಷ್ಟು ಅಜಾಗರೂ ಕತೆಯಿಂದಿದೆಯೋ ಅದು ನಮಗಂತೂ ಗೊತ್ತಾಗುತ್ತಿಲ್ಲ? ಇನ್ನು ನಾಗಲಮಡಕೆ ಹತ್ತಿರ ಒಂದು ನೀರಾವರಿ ಯೋಜನೆಯನ್ನು ನಿರ್ಮಿಸತಕ್ಕ ಬಗ್ಗೆ ಸರ್ವೆ ಎಸ್ಟಿಮೇಟುಗಳೆಲ್ಲ ಆದುವು. ಆದರೆ ಕೆಲಸ ಮಾತ್ರ ಏನು ಮುಂದುವರಿಯಲಿಲ್ಲ. ಮೇಲಾಗಿ ನಮ್ಮ ತಾಲ್ಲೂಕಿಗೆ ಯಗಚೀ ನದಿಯ ನೀರು ಸಹ ಬರುತ್ತದೆಂದು ಹೇಳುತ್ತಾರೆ. ಬೆಂಗಾಡು ಪ್ರದೇಶಗಳಾಗಿರತಕ್ಕ ಶಿರಾ ಪಾವಗಡ ಮತ್ತು ಮಧುಗಿರಿ ತಲ್ಲೂಕುಗಳಿಗೆ ಆ ಯಗಚೀ ನದಿ ನೀರನ್ನು ತರುವ ಪ್ರಯತ್ನವನ್ನು ಕೂಡಲೇ ಕೈಗೊಳ್ಳ ಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತೇನೆ ಇನ್ನು ನಮ್ಮ ತಾಲ್ಲೂಕಿನಲ್ಲಿ ರಿಪೇರಿಯಾಗತಕ್ಕ ನೂರಾರು ಮೈನರ್ ಟ್ಯಾಂಕುಗಳು ಹಾಗೇ ಬಿದ್ದಿವೆ. ಆ ರಿಪೇರಿ ಕಾರ್ಯವನ್ನು ಬೇಗ ಕೈಗೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹೀಗೆ ಈ ಕ್ಷಾಮಡಾಮರುಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲು ಸರ್ಕಾರದವರು ಈ ಕಾರ್ಯಗಳನೆಲ್ಲ ಜಾಗ್ರತೆ ಕೈಗೊಳ್ಳಬೇಕೆಂದು ಹೇಳಿ ನನಗಿಷ್ಟು ಮಾತನಾಡಲು ಅವಕಾಶವಿತ್ತ ಅಧ್ಯಕ್ಷರಿಗೆ ನನ್ನ ವಂದನೆ ಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಅಧ್ಯಕ್ಷ ಮಹಾಶಯರೇ ಇಲ್ಲಿಗೆ ಮೂರು ದಿವಸಗಳಿಂದಲೂ ಸುಮಾರು ಹನ್ನೆರಡು ಗಂಟೆಗಳಕಾಲಕ್ಕಿಂತ ಮೇಲ್ಪಟ್ಟು ಚರ್ಚೆ ನಡೆದು, ಅನೇಕ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ಈ ವಿಚಾರದಲ್ಲಿ ಅನೇಕ ಉತ್ತಮ ಹಾಗೂ ಉಪಯುಕ್ತವಾದ ಸಲಹೆಗಳನ್ನಿತ್ತಿದ್ದಾರೆ. ಈ ಚರ್ಚೆ ಯಾವಾಗ ಇಲ್ಲಿ ಪ್ರಾರಂಭವಾಯಿತೋ ಆಗಲೇ ಮಳೆ ಸಹ ಬೀಳಲು ಪ್ರಾರಂಭವಾಯಿತು. ಅದರೆ ಚರ್ಚೆ ಸಹ ಇಲ್ಲಿಯವರೆಗೂ ಬಹಳ ಶಾಂತರೀತಿಯಿಂದ ನಡೆದುಕೊಂಡು ಬಂದಿತು. ಇಲ್ಲಿ ಆದ ಭಾಷಣಕ್ಕೂ ಅತ್ತ ಮಳೆ ಹೆಚ್ಚಾಗಿ ಬಿದ್ದಿದ್ದಕ್ಕೂ ಒಂದು ಶಾಂತಿ ವಾತವಾರಣ ಉಂಟಾಗಿ ಸದಸ್ಯರು ಸರ್ಕಾರಕ್ಕೆ ಬಹಳ ಉಪಯುಕ್ತ ವಾದ ಸಲಹೆಗಳನಿತ್ತಿದ್ದಾರೆ. ಹೊಟ್ಟೆ ಹಸಿದ ಮನುಷ್ಯ ಆತುರದಲ್ಲಿ ಮಾತನಾಡುವಂತೆ ಸದಸ್ಯರು ಗಳ್ಯಾರೂ ಮಾತನಾಡದೆ ಬಹಳ ಶಾಂತ ಚಿತ್ತರಾಗಿ ಸರ್ಕಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯತನಕ ಚರ್ಚೆ ಆದ ವಿಷಯವಾದರೂ ಸಾಮಾನ್ಯವಾಗಿ ಎಲ್ಲರಿಗೂ ದಿನವಹಿ ಅನುಭವದಲ್ಲಿ ಕಾಣತಕ್ಕಂಥ ವಿಚಾರಗಳನ್ನೇ ಒಳಗೊಂಡಂಥಾದ್ದಾಗಿರುವುದರಿಂದ ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಅನುಕೂಲವಾಯಿತು. ಈ ಸಭೆಯಲ್ಲಿ ನೂರಕ್ಕೆ ತೊಂಬತ್ತರಷ್ಟು ಮಂದಿ ರೈತರನ್ನು ಪ್ರತಿನಿಧಿಸುವಂಥ ಸದಸ್ಯರಿರುತ್ತಾರೆ. ಇಲ್ಲವೇ ಇವರು ಸ್ವತಃ ವ್ಯವಸಾಯ ಗಾರರೇ ಆಗಿರುತ್ತಾರೆ. ಆದ್ದರಿಂದ ಈವರೆಗೆ ಚರ್ಚೆಯಾದಂಥ ವಿಚಾರವೇನಿದೆ ಇದರ ಬಗ್ಗೆ ಒಂದು ಅಧ್ಯಯನ ಮಾಡಿಕೊಂಡು ಬಂದು ಮಾತನಾಡತಕ್ಕ ಅಗತ್ಯವಿಲ್ಲ. ಆದರೆ ಈ ವರ್ಷದ ಅಭಾವ ಪರಿಸ್ಥಿತಿ ಹೇಗೆ ಉಂಟಾಯಿತು ಎಂದರೆ ವರ್ಷದ ಪ್ರಾರಂಭದಲ್ಲಿ ಮಳೆ ಬರಬೇಕಾದ್ದು ಬಾರದೆ ನಿಧಾನವಾಯಿತು. ಮೈಸೂರು ರಾಜ್ಯದಲ್ಲಿ ಮುಂಗಾರಿ ಮಳೆ ಬಹಳ ಹಿಂದೆಯೇ ಪ್ರಾರಂಭವಾಗ ಬೇಕಾಗಿತ್ತು. ಯುಗಾದಿ ಆದ ಒಂದು ವಾರದ ಮೇಲೆ ಸಾಮಾನ್ಯ ರೇವತಿ ಮಳೆ ಬೀಳತಕ್ಕದ್ದು ವಾಡಿಕೆ. ಆಗ ಮೈಸೂರು ತಾಲ್ಲೂಕಿನಲ್ಲಿರತಕ್ಕ ಜನ ಜೋಳದ ಬಿತ್ತನೆ ಮಾಡುತ್ತಿದ್ದರು. ಆದರೆ ಈಗ ಅದು ಆಗಸ್ಟ್ ತಿಂಗಳಾಖೈರಿನಲ್ಲಿ ಆಗುತ್ತಿದೆ. ಹೀಗೆ ಉತ್ತರ ಕರ್ಣಾಟಕದಲ್ಲೂ ಕಾರೀಫ್ ಬೆಳೆ ಅಕ್ಟೋಬರ್, ಸೆಪ್ಟಂಬರಿನಲ್ಲಿ ನಡೆಯುತ್ತಿದೆ. ಯಾವುದಕ್ಕೆ ಆಗಲಿ ಮಳೆ ಕಾಲಕ್ಕೆ ಸರಿಯಾಗಿ ಬರಬೇಕು. ಆದರೆ ರೈತರಿಗೆ ಮಳೆ ಬಾರದಿದ್ದರೂ ಅನರ್ಥವಾಗುತ್ತದೆ, ಜಾಸ್ತಿ ಮಳೆ ಬಂದರೂ ಅನರ್ಥವಾಗುತ್ತದೆ. ಪೂರ್ವಕಾಲದಿಂದಲೂ ಇದು ಹೀಗೆ ನಡೆದುಕೊಂಡು ಬರುತ್ತಿದೆ. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ, ನಮ್ಮ ಚೀಫ್‌ಮಿನಿಷ್ಟರವರು ಜನ್ಮ ತಾಳಿರುವ ಜಿಲ್ಲೆಯ ವಿಚಾರವನ್ನು ತೆಗದುಕೊಳ್ಳೋಣ.

4 P.M.

ನಮ್ಮ ಅರ್ಥಿಕ ಮಂತ್ರಿಗಳು ಅಭಾವದ ತವರೂರಾದ ಬಿಜಾಪುರ ಜಿಲ್ಲೆಯಲ್ಲಿ ಹುಟ್ಟಿದವರು. ಶ್ರೀಮಾನ್ ಕಂಠಿಯವರೂ ಸಹ ಅಲ್ಲೇ ಹುಟ್ಟಿದವರು, ನಾನು ಮತ್ತು ಶ್ರೀಮಾನ್ ನಾರಾಯಣಗೌಡರು ಸಹ ಅಭಾವ ಪ್ರದೇಶದಿಂದ ಬಂದವರು. ಆಂದರೆ ಒಟ್ಟಿನಲ್ಲಿ ಮಂತ್ರಿ ಮಂಡಲದ ಎಲ್ಲಾ ಸದಸ್ಯರೂ ಕೂಡ ಅಭಾವದ ಪ್ರದೇಶದಲ್ಲೇ ಹುಟ್ಟಿ ಬಂದಿರತಕ್ಕವರು. ಶ್ರೀಮಾನ್ ನಾಗಪ್ಪ ಆಳ್ವರವರೂ ಸಹ

(ಶ್ರೀ ಎಂ. ವಿ. ಕೃಷ್ಣಪ್ಪ)

ಔಷಧಿ ಕೊಡುವ ಡಾಕ್ಟರಾಗಿದ್ದರೂ ಅಭಾವದ ವಿಷಯವನ್ನು ಸಾಕಷ್ಟು ಅರಿತವರಾಗಿದ್ದಾರೆ. ಮಂತ್ರಿಮಂಡಲದಲ್ಲಿರುವವರೆಲ್ಲರಿಗೂ ಅಭಾವದ ಪರಿಸ್ಥಿತಿಗಳೆಲ್ಲವು ಬಹಳ ಚೆನ್ನಾಗಿ ಗೊತ್ತಿದೆ. ಅಲ್ಲದೆ ಇಲ್ಲಿರುವ ಮೆಂಬರುಗಳು ನಮಗಿಂತಲೂ ಅನುಭವಸ್ಥರಾದ ಜನರಾಗಿದ್ದಾರೆ. ಕೆಲವರು ಹಿಂದೆ ಇದ್ದ ಅಸೆಂಬ್ಲಿ ಮತ್ತು ಕೌನ್ಸಿಲ್ಲಿನಲ್ಲಿಯೂ ಮೆಂಬರಾಗಿದ್ದವರು. ಅವರಿಗೆ ಅಭಾವದ ಪರಿಸ್ಥಿತಿ ಮತ್ತು ಕ್ಷಾಮ ಡಾಮರದ ಸ್ಥಿತಿಗಳ ಅನುಭವವನ್ನು ಪಡೆದವರು ಅನೇಕರಿದ್ದಾರೆ. ಕ್ಷಾಮ ಬಂದಾಗ ತೊಂದರೆ ಜನಕ್ಕೆ ಹೆಚ್ಚಾಗಿ ಆಗುತ್ತದೆ ಎನ್ನುವುದೂ ಸರಕಾರಕ್ಕೂ ಗೊತ್ತಿದೆ ನಿಮಗೂ ಗೊತ್ತಿದೆ. ಆಗಲೂ ಈ ರೀತಿ ಪದೇ ಪದೇ ಅಭಾವ ಪರಿಸ್ಥಿತಿ ಬರುತ್ತಿದ್ದರೂ ಇದಕ್ಕೆ ತಕ್ಕಂತಹ ಶಾಶ್ವತವಾದ ಪರಿಹಾರದ ವಿಷಯವನ್ನು ಅನೇಕರು ಆಗ ಯೋಚನೆ ಮಾಡಿರಲಿಲ್ಲ. ಸ್ವಾತಂತ್ರ್ಯ ಬಂದು 16 ವರ್ಷಗಳಾದರೂ ಶಾಶ್ವತವಾದ ಪರಿಹಾರ ಕ್ರಮಗಳನ್ನು 7-8 ವರ್ಷಗಳ ಮುಂದೆಯೇ ಸರಕಾರ ಮಾಡಬಹುದಾಗಿತ್ತು. ಸರಕಾರಕ್ಕೆ ಹೆದರಿಕೆ ಏನಿರಲಿಲ್ಲ. ಕ್ಷಾಮ ಬಂದಾಗ್ಗೆ ತಾತ್ಕಾಲಿಕವಾಗಿ ಗಂಜಿ ಕೇಂದ್ರಗಳನ್ನು ತೆರೆಯುವುದು, ರಸ್ತೆ ಕಾಮಗಾರಿಗಳನ್ನು ಮಾಡಿಸುವುದು ಮತ್ತು ಮಳೆ ಇಲ್ಲದ ಪ್ರದೇಶಗಳಲ್ಲಿ ಈ ರೀತಿಯಾದ ಕೆಲಸಗಳನ್ನು ಮಾಡಿಕೊಂಡು ಹೋಗಿ ಕೆಲವು ಕಡೆಗಳಲ್ಲಿ ಕಂದಾಯವನ್ನೂ ರಿಮಿಷನ್ನು ಮಾಡಿಕೊಡಲಾಗುತ್ತಿತ್ತು. ಇದಕ್ಕಿಂತ ಹೆಚ್ಚಿನ ಬದಲಾವಣೆ ಮಾಡಿ ಕೆಲಸ ನಡೆದಿಲ್ಲ. ಆಗಿನ ಸರಕಾರಗಳು ಸ್ವಲ್ಪ ಪ್ರಯತ್ನ ಪಟ್ಟಿದ್ದರೆ ಇದನ್ನು ತಪ್ಪೆಗಟ್ಟಬಹುದಾಗಿತ್ತು. ಅದರಲ್ಲೂ ಈ ವರ್ಷ ರೈತ ಸ್ವಾಭಾವಿಕವಾಗಿ ಬಹಳ ಕಷ್ಟದಲ್ಲಿದ್ದಾನೆಂಬುದು ನಮಗೂ ಗೊತ್ತಿದೆ. ಈ ವರ್ಷದ ಕ್ಷಾಮದ ಜೊತೆಯಲ್ಲಿ ಎಮರ್ಜನ್ಸಿ ಬಂದಿದೆ. ಸುಮಾರಾಗಿ ರೈತರಿಂದ ರೆವೆನ್ಯೂ ಕಂದಾಯವಾಗಿ ನಾಲ್ಕು ಕೋಟಿ ಯವರೆಗೆ ಕೊಟ್ಟಿದ್ದಾರೆ ಇದರ ಜೊತೆಗೆ ರಾಷ್ಟ್ರದ ರಕ್ಷಣೆಗೋಸ್ಕರ ಸುಮಾರು ಮೂರೂವರೆ, ನಾಲ್ಕು ಕೋಟಿಯಷ್ಟು ಹಣವನ್ನು ರೈತರಿಂದ ವಸೂಲು ಮಾಡಿದ್ದೇವೆ. ಅಲ್ಲದೆ ನಾವು ಸರ್ ಚಾರ್ಜು ಹಾಕಿರುವುದರಿಂದ ಅದು ಒಂದಕ್ಕೆ ಡಬ್ಬಲ್ ಕಂದಾಯದಂತೆ ಬೇರೆ ವಸೂಲು ಆಯಿತು. ಈ ಸರ್ ಚಾರ್ಜ್ ಎಲೆಕ್ಷನ್ನು ಅದೇ ವರ್ಷದಲ್ಲೇ ಇದರ ವಸೂಲಿ ನಡೆಯಬೇಕಾಗಿತ್ತು. ಅವರೆ ಭಾರತ ದೇಶದ ರಕ್ಷಣಾ ದೃಷ್ಟಿಯಿಂದ, ರಕ್ಷಣೆಯ ಹಣ ಒಂದು ಕಡೆ, ಕಂದಾಯ ಒಂದು ಕಡೆ, ದ್ವಿಗುಣವಾದ ಕಂದಾಯ ಒಂದು ಕಡೆ ಅಲ್ಲದೆ ಕಂದಾಯದ ಬಾಕಿ ಸರ್ ಚಾರ್ಜು ವಸೂಲಿಯನ್ನು ಕಡ್ಡಾಯವಾಗಿ ಶೇಕಡಾ 50 ರಷ್ಟು ರೈತರಿಂದ ವಸೂಲು ಮಾಡುವುದು ದೈವವಶಾತ್ ಈ ವರ್ಷದಲ್ಲಿ ಆಗಲಿಲ್ಲ ಈ ಎಲ್ಲಾ ದೃಷ್ಟಿಗಳಿಂದ ರೈತನ ಆರ್ಥಿಕ ಮಟ್ಟವು ಕೂಡ ಯಾವಾಗಲೂ ಸರಿಯಾಗಿರುವುದಿಲ್ಲ. ನೂರಕ್ಕೆ ತೊಂಬತ್ತು ಜನ ವರ್ಷದೊಳಗೆ ಸ್ವಲ್ಪ ಬೆಳೆ ಮಾಡುತ್ತಾರೆ. He can just make both ends meet. ಒಂದು ವರ್ಷ ಬೆಳೆ ಹೋದರೆ He collapses. ಈ ರೀತಿ ಅವರ ಸ್ಥಿತಿ ಇದೆ. ಬರಗಾಲಗಳಲ್ಲಿ ಮಳೆಯಾಗದಿರುವುದರಿಂದ ಬಹು ಮಟ್ಟಿಗೆ ಇದರ ತೊಂದರೆ ಜನಕ್ಕೆ ತಗಲುತ್ತಿದೆ. ಏನೋ ದೈವವಶಾತ್ ತಿರುಪತಿ ವೆಂಕಟರಮಣನ ಕೃಪೆಯಿಂದ ಮೊನ್ನೆ ಸೋಮವಾರದಿಂದ ಅಷ್ಟು ಮಳೆ ಬರುತ್ತಿದೆ. ಹತ್ತಾರು ಮಳೆ ಇಲ್ಲಿಯವರೆಗೆ ಬರಬೇಕಾಗಿತ್ತು. ಇದರಿಂದ ಜನಕ್ಕೆ ಕಷ್ಟವಾಗಿವೆ, ನಿಜ. ನಮ್ಮ ಅನುಭವದಿಂದ ಹೇಳುವುದಾದರೆ ಇಷ್ಟು ದಿನ ಹೋಗಿದ್ದ ಮಳೆ ಖಂಡಿತವಾಗಿಯೂ ಬರಲೇ ಬೇಕು. ಶನಿವಾರದಿಂದ ಬರುತ್ತಿರುವ ಮಳೆ ಸಂಸ್ಥಾನದ ಅನೇಕ ಕಡೆಗಳಲ್ಲಿ ಚೆನ್ನಾಗಿ ಬಂದಿದೆ ಎಂದು ಈಗ ಹತ್ತು ನಿಮಿಷಗಳಿಗೆ ಮುನ್ನ ಟೆಲಿಫೋನು ವರದಿಗಳ ಮೂಲಕ ಅನೇಕ ಜಿಲ್ಲಾಧಿಕಾರಿಗಳು ನನಗೆ ತಿಳಿಸಿದಾರೆ. ಮತ್ತು ಪ್ರತಿ ಜಿಲ್ಲಾಧಿಕಾರಿಗಳೂ ಫೋನಿನ ಮೂಲಕ ಅಂಕಿ ಅಂಶಗಳನ್ನೂ ಕೊಟ್ಟಿದ್ದಾರೆ. ಇದರಿಂದ ಏನೋ ಈ ವರ್ಷದಲ್ಲಿ ಕೆರೆಗಳು ಮುಂದೆ ಚೆನ್ನಾಗಿ ತುಂಬಿ ಗದ್ದೆ ಬೆಳೆಯಾದರೆ ಈ ವರ್ಷ ನಾರ್ಮಲ್ ಇಯರ್ ಎಂದು ತೆಗೆದುಕೊಳ್ಳಬಹುದು, ಅಷ್ಟು ಹೆಚ್ಚಾಗಿ ಮಳೆಯ ಅಭಾವವಿಂದ ಕೂಡಿದ ವರ್ಷವಲ್ಲ ಎಂದು ಹೇಳಬಹುದು. ಹಿಂದೆ ಕೇಂದ್ರ ಸರಕಾರದವರು A cycle of five years' analysis ಎನ್ನುವಂತಹ ಒಂದು ಅನಾಲಿಸಸ್ ಎಂದು ಮಾಡಿದ್ದರು. ಅದರಂತೆ ಒಂದು ವರ್ಷದಲ್ಲಿ ಬಹಳ ಚೆನ್ನಾಗಿ ಮಳೆ ಬೀಳುವುದ , ಇನ್ನೊಂದು ವರ್ಷದಲ್ಲಿ Neither good nor bad ಸರಿಸಮಾನವಾಗಿ ಮಳೆ ಬೀಳುವುದು, ಇನ್ನೊಂದು ಅಥವಾ ಎರಡು ವರ್ಷಗಳಲ್ಲಿ Definitely bad. ಎಂದರೆ ಮಳೆ ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಬಾರದೆ ಹೋದರೆ ಹೋಯಿತು. ಒಂದು ವರ್ಷ ಮಳೆ ಬಂದರೆ ಬೆಳೆಯೂ ಬಹಳ ಚೆನ್ನಾಗಿ ಬರುತ್ತದೆ. ಇನ್ನೊಂದು ವರ್ಷದಲ್ಲಿ ಸಾಧಾರಣವಾಗಿರುತ್ತದೆ. ಮಳೆ ಬಂದು ಕೆರೆಗಳು ತುಂಬದೇ ಹೋದರೆ Neither good not bad ಎಂದು ಹೇಳಬೇಕಾಗುತ್ತದೆ. ಮೈಸೂರಿನ ಮಟ್ಟಿಗೆ ಹೇಳಬೇಕಾದರೆ ಇದು ಕೆಟ್ಟವರ್ಷ ಎಂದು ಹೇಳಬಹುದು. ಹಿಂದುಸ್ತಾನದಲ್ಲೇ ನೋಡುವುದಾದರೆ ಒಂದು ರಾಜ್ಯದಲ್ಲಿ ಅಭಾವವಿದ್ದರೆ ಇನ್ನೊಂದು ರಾಜ್ಯದಲ್ಲಿ ಅಭಾವವಿರುವುದಿಲ್ಲ ಎನ್ನುವುದು ಓವರಾಲ್ ಪೊಸಿಷನ್ನು

ನೋಡುವಾಗ ಗೊತ್ತಾಗುತ್ತದೆ. ಮೈಸೂರು ಸಂಸ್ಥಾನದ ಸ್ಥಿತಿಯನ್ನು ತೆಗೆದುಕೊಳ್ಳುವುದಾದರೆ ಈ ವರ್ಷ ಮೊದಲು ಜನವರಿಯಲ್ಲಿ ಮಳೆ ಬಂತು, ಅದರಿಂದ ಮುಂದೆ ಸ್ವಲ್ಪ ರಾಗಿ ಫಸಲು ಬಂತು. ಹಿಂದೆ ಒಂದೂರಿನಲ್ಲಿ ಒಬ್ಬ ಹೊಸ ರಾಜ ಅಧಿಕಾರಕ್ಕೆ ಬಂದನಂತೆ. ಆಗ ಊರಿನಲ್ಲೂ ರೈತರಿಗೆ ಕ್ಷಾಮ ಬಂದು ಮಳೆ ಹೋಗಿದೆ, ಇದಕ್ಕಾಗಿ ರಿಲೀಫ್ ವರ್ಕುಗಳು ಇತ್ಯಾದಿಗಳನ್ನು ಷುರು ಮಾಡಬೇಕೆಂದು ಜನ ಬಂದು ಆ ರಾಜನಿಗೆ ಹೇಳಿದರಂತೆ. ಆ ಹೊಸ ರಾಜ ಮಂತ್ರಿಯನ್ನು ಏನು ಪರಿಹಾರದ ಕೆಲಸಗಳನ್ನು ಮಾಡಬೇಕು ಎಂದು ಕೇಳಿದನಂತೆ. ಅದಕ್ಕೆ ಮಂತ್ರಿ ಹೇಳಿದ 'ನನ್ನ ಉತ್ತರ ನಿಮ್ಮ ಹಸ್ತದಲ್ಲಿದೆ. ತಮ್ಮ ಚಿತ್ತ' ಎಂದನಂತೆ. ಎಂದರೆ ಉತ್ತರ ಮಳೆ, ಹಸ್ತದಲ್ಲಿ, ಅದರ ಮೇಲೆ ಚಿತ್ತ ಮಳೆ ಹೀಗೆ ಇವು ಮೂರು ಸರಕಾರಿ ಮಳೆಗಳು ಎಂದು ಹೇಳುತ್ತಾರೆ. ಕಂದಾಯ ಮಂತ್ರಿಗಳಾಗಿರುವವರಿಗೂ ಇದು ಗೊತ್ತು. ಮತ್ತೆ ಎಲ್ಲರಿಗೂ ಇದು ಗೊತ್ತಿರುವ ವಿಚಾರ. ಹಾಗೆ ಹಿಂದೆ ಒಬ್ಬ ರಾಜನಿಗೆ ಅವನ ಮಂತ್ರಿ ಕೊಟ್ಟ ಉತ್ತರ ಹೇಗಿತ್ತು ಎಂದರೆ 'ನನ್ನ ಉತ್ತರ ನಿಮ್ಮ ಹಸ್ತದಲ್ಲಿದೆ. ತಮ್ಮ ಚಿತ್ತ' ಎಂದನಂತೆ ಮಳೆ ಬಂದೇ ಬರುತ್ತದೆ ಎಂದರೆ ಉತ್ತರ, ಹಸ್ತ, ಚಿತ್ತ ಮಳೆಗಳು ಬಂದೇ ಬರುತ್ತವೆ. ಮಳೆ ಬರಲಿಲ್ಲ ಎಂದು ಸರಕಾರದವರು ನೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದರೂ ಅದರಿಂದ ಅಭಾವದ ಪರಿಸ್ಥಿಯೇನೂ ಕಡಿಮೆ ಮಾಡಿದಂತಾಗುವುದಿಲ್ಲ ಎನ್ನುವುದು ಸರಕಾರಕ್ಕೂ ಗೊತ್ತಿದೆ. ಒಟ್ಟಿನಲ್ಲಿ ಈ ವರ್ಷ ಮುಂದಾದರೂ ಮಳೆ ಚೆನ್ನಾಗಿ ಆದರೆ It will be a normal year. ಎಂದು ಹೇಳಬಹುದು. ಸಾಮಾನ್ಯವಾಗಿ ಅಭಾವದ ಕಾಲದಲ್ಲಿ ನೀವು ಏನೇನು ಪರಿಹಾರದ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಹೇಳುತ್ತ, ಕೆಲವು ಶಾಶ್ವತವಾದ ಪರಿಹಾರ ಕ್ರಮಗಳನ್ನೂ ಮಾಡಬೇಕೆಂದು ಸರಕಾರವನ್ನು ಕೇಳಿದ್ದಾರೆ. ನಾನಾಗಲೇ ಹೇಳಿದ ಹಾಗೆ ಕ್ಷಾಮ ಸ್ವಾತಂತ್ರ್ಯ ಬಂದಮೇಲೆ ಹಿಂದೆ ಬಂಗಾಳದಲ್ಲಿ ಬಂದಂತಹ ಕ್ಷಾಮದಂತೆ ಬಂದಿಲ್ಲ. ಬಂಗಾಳದ ಕ್ಷಾಮ ಹಿಂದೆ ಬಂದಾಗ ಹಿಂದೂಸ್ತಾನದಲ್ಲೆಲ್ಲಾ ಬಹಳ ದೊಡ್ಡದಾಗಿ ಬಂದಿತ್ತು. ಆ ಒಂದು ಕ್ಷಾಮದಿಂದಲೇ ಸುಮಾರು 50 ಲಕ್ಷ ಜನಗಳು ಬೀದಿಗಳಲ್ಲಿ ಸತ್ತು ಬಿದ್ದಿದ್ದರು. ಇಂತಹ ಭಯಂಕರ ಕ್ಷಾಮ ಬಂದಾಗ ನಾನು ಡೆಲ್ಲಿಯಲ್ಲಿದ್ದೆ. ಕಲ್ಕತ್ತಾ ನಗರದ ಬೀದಿ ಬೀದಿಗಳಲ್ಲಿ ಕ್ಷಾಮದಿಂದಾಗಿ 50 ಲಕ್ಷ ಜನ ಹುಳಗಳಂತೆ ಸತ್ತು ಬಿದ್ದಿದ್ದರು. ಆಗ ದೆಹಲಿಯಲ್ಲಿದ್ದದ್ದು ಕಾಂಗ್ರೆಸ್ಸು ಸರಕಾರವಲ್ಲ; ಅರ್ಥಿಕ ಕಾಂಗ್ರೆಸ್ಸು ಸರಕಾರಕ್ಕೆ ಹಿಂದೆ ಇದ್ದ ಬ್ರಿಟಿಷರ ಸರಕಾರ. ಹೊಟ್ಟೆಗೆ ಅನ್ನವಿಲ್ಲದೆ, ನೀರಿಲ್ಲದೆ ಬೀದಿಗಳಲ್ಲಿ ಸತ್ತರು. ಇಂಗ್ಲಿಷು ಸರಕಾರ ಬಂದರೆ ಸುಭಿಕ್ಷ ಬರುವುದಿಲ್ಲ. ನಾವು ಲಗ್ನಪತ್ರಿಕೆ ಕೊಟ್ಟು ಅವರನ್ನು ಮೂರು ತಿಂಗಳು ಕಾಲ ಬಂದು ರಾಜ್ಯಭಾರ ಮಾಡಿ ಎಂದು ಕರೆದರೂ ಅವರು ಬರುವುದಿಲ್ಲ. ಅವರು ಹೋಗುವಾಗಲೇ ಕಂಟ್ರೋಲು, ಕಬ್ಬಿಣದ ಅಭಾವ ಇತ್ಯಾದಿಗಳನ್ನು ಬಿಟ್ಟು ಹೊದರು, ಈಗಿನ ಕಾಲದಲ್ಲಿ ಅತ್ತೆಯ ಮಾತನ್ನೇ ಸೊಸೆ ಕೇಳುವುದಿಲ್ಲ. ಹಾಗಿದೆ ಪರಿಸ್ಥಿತಿ ನಮ್ಮ ಊರಿನಲ್ಲಿ ಒಬ್ಬ ಹಜಾಮ ಇದ್ದಾನೆ. ನಾನು ಊರಿಗೆ ಹೋದಾಗ ಅವನೊಂದಿಗೆ ಸ್ವಲ್ಪ ಸಲಿಗೆಯಿಂದಲೇ ಮಾತನಾಡುವುದು ಅದರಿಂದ ಅವನೂ ಸಲಿಗೆಯನ್ನೇ ತೆಗೆದುಕೊಂಡು ನನಗೆ ಹೇಳುತ್ತಾನೆ ಹೆಂಡ ಎನ್ನುವ ಮಹಾಲಕ್ಷ್ಮಿಯನ್ನು ತೆಗೆದುಕೊಂಡು ಹೋಗಿಬಿಟ್ಟಿರಿ ಅದರಿಂದಾಗಿ ನಿಮಗೆ ಮಳೆ ಎಲ್ಲಿಂದ ಬರುತ್ತದೆ ಎಂದು ಆ ನಾಯಿಂದ ಹೇಳುತ್ತಾನೆ. ಎಂದರೆ ಅವನಿಗೆ ಹೆಂಡದ ಮಳೆ ಬೇಕಾಗಿತ್ತು. ಹಾಗೆ ಮಳೆ ಯಾವಾಗ ಚೆನ್ನಾಗಿ ಬರುತ್ತದೆಯೋ ಆಗ ಬೆಳೆಯೂ ಚೆನ್ನಾಗಿ ಬರುತ್ತದೆ.

ಒಬೊಬ್ಬರ ಅಭಿಪ್ರಾಯದಲ್ಲಿ ಒಂದೊಂದು ಕಾರಣವಿರುತ್ತದೆ. ನಮ್ಮ ನಾಯಿಂದನ ಅಭಿಪ್ರಾಯದಲ್ಲಿ ಮಳೆ ಯಾವುದೋ ಕಾರಣಕ್ಕಾಗಿ ಹೋಯಿತು. ಶ್ರೀ ಚನ್ನಬೈರೆಗೌಡರು ಕಾಂಗ್ರೆಸ್ ಸರಕಾರ ಬಂದು ಅಭಾವ ಬಂದಿತು ಎಂದು ಭಾಷಣ ಮಾಡಿದರು. ಇದು ಸೈಂಟಿಫಿಕ್ ಏಜ್, ಈ ಸೈಂಟಿಫಿಕ್ ಯುಗದಲ್ಲಿ ಕೆಲವರುಗಳು ಸ್ವಲ್ಪ ಹೆಚ್ಚು ಕಡಮೆ ನಿಜವಾದ ಕಾರಣಗಳನ್ನು ಕಂಡು ಹಿಡಿದಿದ್ದಾರೆ. ಹೆಚ್ಚಾಗಿ ಕಾಡುಗಳನ್ನು ದೇಶವೆಲ್ಲ ಬೆಳೆಯುತ್ತಾ ಇಲ್ಲ, ಕಾಡುಗಳು ನಾಶವಾಗುತ್ತಿವೆ, ಅದರಿಂದ ರೇನ್‌ಫಾಲ್ ಡಿಸ್ಟ್ರಿಬ್ಯೂಟ್ ಆಗುತ್ತಾ ಇಲ್ಲವೆಂಬ ಕಾರಣವನ್ನು ಹೇಳುತ್ತಿದ್ದಾರೆ. ಆದರೆ ಹಿಂದೆ ಕಾಡುಗಳು ಇದ್ದರೂ ವಿಪರೀತ ಅಭಾವ ಬಂದಿತ್ತು ಧಾತ್ರ ಮತ್ತು ಖರ ಸಂವತ್ಸರಗಳಲ್ಲಿ ಕೋಟ್ಯಾಂತರ ಜನರು ಹೊಟ್ಟೆಗಿಲ್ಲದೆ ಸತ್ತುಹೋದರು. ಬಂಗಾಳದಲ್ಲಿ ಜನ ಹೊಟ್ಟೆಗಿಲ್ಲದೆ ಸತ್ತರು ಬ್ರಿಟಿಷ್ ಜನರು ಈ ದೇಶ ಆಳುತ್ತಿದ್ದಾಗ; ಸ್ವಾತಂತ್ರ್ಯ ಬಂದಮೇಲೆ ಅದು ಆಗಲಿಲ್ಲ, ಅದು ಆಗುವುದಕ್ಕೂ ಬಿಡುವುದಿಲ್ಲ. ಸ್ವಾತಂತ್ರ್ಯ ಬಂದಮೇಲೆ ಹೊಟ್ಟೆಗೆ ಅನ್ನ ಇಲ್ಲ ಎಂದು ಸತ್ತರು ಎನ್ನುವ ಮಾತು ಉತ್ಪ್ರೇಕ್ಷೆಯಿಂದ ಹೇಳುವ ಮಾತು. ಕೂಲಿಕೆಲಸ ಸಿಕ್ಕದೆ ಇರಬಹುದು. ಆಹಾರದ ಕೊರತೆ ಇಲ್ಲ, ಕ್ಷಾಮ ದೇಶದಲ್ಲಿ ಬರುವುದಿಲ್ಲ. ಉದಾಹರಣೆಗೆ ಹೇಳುವುವಾದರೆ ಮೂರು ದಿನದಿಂದ ಎಷ್ಟೋ ಭಾಷಣಗಳನ್ನು ಇಲ್ಲಿ ಕೇಳಿದೆ. ಯಾರು ಆಹಾರ ಅಭಾವವಿದೆಯೆಂದು ಒಂದು ಪದ ಹೇಳಲಿಲ್ಲ, ಈ ಫುಡ್ ಡಿಬೇಟು, 12 ಗಂಟೆಕಾಲ, ಮೂರು ದಿನ ನಡೆದಿದೆ. 50 ಮಾನ್ಯ ಸದಸ್ಯರು ಮಾತನಾಡಿದರು. ಆಹಾರದ ಅಭಾವವಿದೆ, ಹೊಟ್ಟೆಗೆ ಅನ್ನವಿಲ್ಲದೆ ಜನ ಗಂಜಿ ಕಾಸಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಕುಡಿದರು, ಗೆಡ್ಡೆ ಗೆಣಸು ತಿನ್ನುತ್ತಿದ್ದಾರೆ ಎಂದು ಒಬ್ಬರೂ ಹೇಳಲಿಲ್ಲ. ಸ್ವಾತಂತ್ರ್ಯ ಬರುವುದಕೆ ಮುಂಚೆ ಹೇಳುತ್ತಾ ಇದ್ದರು, ಈಗ ಇಲ್ಲ. ಈಗ ಕಂಟ್ರೋಲುಗಳಿಲ್ಲ ಕೂಪನ್ ಸಿಸ್ಟಮ್ ಇಲ್ಲ, ಹೊಟ್ಟೆಗೆ ಅನ್ನವಿಲ್ಲದೆ ಸಾಯುವವರೂ ಇಲ್ಲ.

ಅಭಾವ ನಿವಾರಿಸಲು ಶಾಶ್ವತ ಕಾರ್ಯಕ್ಕೆ ಗಮನ ಕೊಡಬೇಕೆಂದು ಆಜ್ಞೆ ಬಂದಿದೆ ಆದ್ದರಿಂದ ಈಗ ನಮ್ಮಲ್ಲಿ ಗಂಜಿ ಕೇಂದ್ರ ಸ್ಥಾಪನೆ ಮಾಡುವುದನ್ನೂ, ರಸ್ತೆ ಕಾಮಗಾರಿಗಳನ್ನೂ ನಿಲ್ಲಿಸಿದ್ದೇವೆ. ಕ್ಷಾಮ ಬಂದ ತಕ್ಷಣ ಜಿಲ್ಲಾಧಿಕಾರಿಗಳಿಗೆ ನಾವು ಏನು ಕ ಮ ತೆಗೆದುಕೊಳ್ಳಬೇಕೆಂದು ನಾವು ಬರೆ ಯುವ ಹಾಗೆ ಇಲ್ಲ. ವರ್ಷದ ಪ್ರಾರಂಭದಲ್ಲಿಯೇ ಬಜೆಟ್ಟಿನಲ್ಲಿ ಅಭಾವ ಪರಿಸ್ಥಿತಿಯನ್ನು ಎದುರಿ ಸಲು 35ಲಕ್ಷ ರೂಪಾಯಿಯನ್ನು ತೆಗೆದು ಇಟ್ಟುಬಿಟ್ಟಿದ್ದೇವೆ. ಆ ಡಿವ್ಯಾಂಡಿನಲ್ಲಿರುವ ಹಣವನ್ನು ಎಲ್ಲಾ ಡಿವಿಜನ್ನುಗಳಿಗೆ ಹಂಚಿದ್ದೇವೆ. ಮಳೆ ಹೋದರೆ ಕೆಲಸವಿಲ್ಲದೆ ಹೋದರೆ ರಿಲೀಫ್ ಕೆಲಸಗ ಳನ್ನು ಪ್ರಾರಂಭಮಾಡಬೇಕೆಂದು 35 ಲಕ್ಷ ರೂಪಾಯಿಯನ್ನು ವರ್ಷದ ಪ್ರಾರಂಭದಲ್ಲಿಯೇ ತೆಗೆದು ಡಿವಿಜನಲ್ ಕಮಿಷನರಿಗೆ ಕೊಟ್ಟಿದ್ದೇವೆ. ಇನ್ನು ಒಂದು 35 ಲಕ್ಷ ರೂಪಾಯಿಗಳನ್ನು ತಗಾವಿ ಸಾಲಕ್ಕೆ ಕೊಟ್ಟಿದ್ದೇವೆ. ಇದಲ್ಲದೆ ಕೋ-ಆಪರೇಟಿವ್ ಮಿನಿಸ್ಟರು ಷಾರ್ಟ್‌ಟರ್ಮ್‌ಲೋನ್, ಮಿಡಿಯಂ ಟರ್ಮ್ ಲೋನ್, ಲಾಂಗ್ ಟರ್ಮ್ ಲೋನ್ ಮುಂತಾದ ಬೇರೆ ಲೋನುಗಳನ್ನು ಕೊಡುತ್ತಾರೆ; ಆದರೆ ಜೊತೆಗೆ ಕ್ಷಾಮ ಕಾಲದಲ್ಲಿ ಕೊಡಲು 35 ಲಕ್ಷ ರೂಪಾಯಿಯನ್ನು ವರ್ಷದ ಪ್ರಾರಂಭದಲ್ಲಿಯೇ ಬಜೆಟ್ಟಿನಲ್ಲಿ ತೆಗೆದಿಟ್ಟು ತಗಾವಿ ಸಾಲಕ್ಕಾಗಿ ಎಲ್ಲಾ ಡಿವಿಜನ್ನಿಗೂ ಹಂಚಿದ್ದೇವೆ. ಹೀಗೆ ಒಟ್ಟು 70 ಲಕ್ಷ ರೂಪಾಯಿಗಳನ್ನು ಅಕಸ್ಮಾತ್ತಾಗಿ ಒದಗಿದ ತುರ್ತು ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಎಲ್ಲಾ ಡಿವಿಜನ್ನುಗಳಿಗೂ ಕೊಟ್ಟಿದ್ದೇವೆ. ಅಲ್ಲಲ್ಲೇ ಏನಾದರೂ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿ ಬಂದರೆ, ಸರಕಾರಕ್ಕೆ ಅವರು ಬರೆದು ಸರಕಾರದ ಇನ್‌ಸ್ಟ್ರಕ್ಷ ನ್‌ಗೆ ಕಾಯಬೇಕಾದ ಪ್ರಮೇಯವಿಲ್ಲ ಎಲ್ಲಿಯೂ ಕೆಲಸ ನಿಧಾನವಾಗಬಾರದೆಂದು ಈ ತರಹ ಮಾಡಿದೆ, ಡಿವಿಜನಲ್ ಕಮಿಷನರುಗಳಿಗೇ ಶಾಶ್ವತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರ ಕೊಟ್ಟಿದೆ we have given complete powers to the local officers.

ಮೈಸೂರಿನಲ್ಲಿ ಸ್ವಲ್ಪ ಕಡೆ ಈ ಕೆಲಸ ಪ್ರಾರಂಭವಾಗಿದೆ. ಅಲ್ಲಿ ಬೆಳೆ ಲಕ್ಷಣವಾಗಿ ಪ್ರಾರಂಭ ದಲ್ಲಿ ಬಂದಿತು. ಆದರೆ ಕ್ರಮೇಣ 4-5 ತಾಲ್ಲೂಕುಗಳಲ್ಲಿ ಒಣಗಿಬಿಟ್ಟು, ಪಾಪ, ರೈತರಿಗೆ ತುಂಬ ತೊಂದರೆಯಾಯಿತು. ಆದ್ದರಿಂದ ಅಲ್ಲಿ ಪರಿಹಾರ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ ನಿನ್ನೆ ದಿವಸ ಶ್ರೀ ಗೋಪಾಲಗೌಡರು ಹೇಳಿದಂತೆ ಎಲ್ಲಾ ಡಿವಿಜನಲ್ ಕಮಿಷನರುಗಳ ಜಿಲ್ಲಾಧಿಕಾರಿಗಳ ಕಾನ್‌ಫರೆನ್ಸ್ ನಡೆಸಿತು ; ಅವಾಗ ತಮ್ಮ ತಮ್ಮ ಭಾಗಗಳ ಪರಿಸ್ಥಿತಿಯನ್ನು ಸವಿಸ್ತಾರವಾಗಿ ಕೊಟ್ಟರು. ಅದರ ಮೇಲೆ ಏನೇನು ಮಾಡಬೇಕೆಂದು ಒಂದು ಕಾರ್ಯಪಟ್ಟಿಯನ್ನು ಹಾಕಿಕೊಂಡಿ ದ್ದೇವೆ. ಇನ್ನು ಮುಂದೆ ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಪರ್ಮನೆಂಟ್ ರಿಲೀಫ್ ಮೆಜರ್ಸ್‌ನ್ನು ವರ್ಷದ ಪ್ರಾರಂಭದಲ್ಲಿಯೇ ತೆಗೆದುಕೊಂಡಿದ್ದೇವೆ. ಬಾವಿಗಳಿಗೋಸ್ಕರವಾಗಿ ಬಜೆಟ್ಟಿನಲ್ಲಿ ಒಂದೂಮುಕ್ಕಾಲು ಕೋಟಿ ರೂಪಾಯಿಯನ್ನು ತೆಗೆದಿಟ್ಟಿ ದ್ದೇವೆ. ಒಂದು ರಸ್ತೆ ಕೆಲಸಕ್ಕೆ ಹಣ ಕೊಡುವುದಕ್ಕಿಂತಲೂ ಬಾವಿ ತೋಡುವುದಕ್ಕೆ, ಲೋನು 500ರೂಪಾಯಿವರೆಗೆ ಸಬ್‌ಸಿಡಿ ಕೊಡುವುದು ಉತ್ತಮ. ರೈತರಿಗೆ 3ಸಾವಿರ ರೂಪಾಯಿ ಕೊಟ್ಟರೆ, 3 ಸಾವಿರ ರೂಪಾಯಿಯಲ್ಲಿ ಬಾವಿ ಆಗುವುದಿಲ್ಲ. 7 ಸಾವಿರ ರೂಪಾಯಿ ಬೇಕಾಗು ತ್ತದೆ. ಆದರೆ ಸರಕಾರದವರು 3 ಸಾವಿರ ರೂಪಾಯಿ ಕೊಟ್ಟರೆ, ರೈತ ಸಾಲವೋ ಸೋಲವೋ, ಒಡವೆ ಮಾರಿ ಏನೋ ಮಾಡಿ, ಬಾಕಿ ಮಾಡೋ ನಾಲ್ಕು ಸಾವಿರ ರೂಪಾಯಿ ಒಟ್ಟು ಹಾಕಿ ಬಾವಿ ತೋಡಿಸುತ್ತಾನೆ. ಈ ಒಂದೂಮುಕ್ಕಾಲು ಕೋಟಿ ರೈತರಿಗೆ ದೊರೆಯುತ್ತದೆ, ಮತ್ತು 00 ಸ್ಥಳಗಳಲ್ಲಿ ಬಾವಿಗಳು ಆಗುತ್ತವೆ. ಬಾವಿಗಳು ಆಗುವುದರಿಂದ ಶಾಶ್ವತವಾದ ಪರಿಹಾರವಾಗು ತ್ತದೆ. It is really an insurance against famine. ಬಾವಿಗಳಿಗೆ ಒಂದು ಪ್ರಾಮು ಖ್ಯತೆಯನ್ನು ಮೈಸೂರು ರಾಜ್ಯದಲ್ಲಿ ಕೊಟ್ಟಿದ್ದೇವೆಂದು ಬಹಳ ಒತ್ತಿ ಒತ್ತಿ ಹೇಳಬಹುದು. ಎಲ್ಲಾ ಕಡೆಯಲ್ಲಿಯೂ ಬಾವಿ ಆಗುವುದಿಲ್ಲ. ಆದ್ದರಿಂದ ಒಂದು ಬುದ್ಧಿ ಇಲ್ಲದ ಕೆಲಸ ಮಾಡಬಾರದು. ಎಲ್ಲೆಲ್ಲಿ ಸಬ್ ಸಾಯಿಲ್ ವಾಟರ್ ಇದೆಯೋ ಅಲ್ಲೆಲ್ಲಾ ಸಾಧ್ಯವಾದಷ್ಟು ಬಾವಿಗಳನ್ನು ತೋಡಿಸಿ, ಪಂಪು ಸೆಟ್ಟುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಟೆಂಪೊರರಿ ಮೆಜರ್ಸ್ ಸಾಲದು, ಪರ್ಮನೆಂಟ್ ಮೆಜರ್ಸ್ ಜಾರಿಗೆಕೊಡಲು, ಕೇಂದ್ರದ ನೆರವು ಕೇಳಬೇಕು, ಹಾಗೆ ಕೇಳಬೇಕಾದರೆ ಸರಿಯಾದ ಸ್ಟ್ಯಾಟಿಸ್ಟಿಕ್ಸ್ ಸಿದ್ಧಪಡಿಸಿಕೊಂಡು ಕೇಳ ಬೇಕೆಂದು, ಈ ಸ್ಟ್ಯಾಟಿಸ್ಟಿಕ್ಸ್ ಸಂಗ್ರಹಣೆಗೇ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ನೇಮಕ ಮಾಡಿ ದ್ದೇವೆ. ಬರ ಬರ ಎಂದು ಎಷ್ಟು ವರ್ಷಗಳಿಂದ ಹೇಳುತ್ತಿದ್ದೇವೆ. ಆದರೆ ಆ ಬಗ್ಗೆ ಏನೇನು ಕೆಲಸ

ವಾಗಿದೆ, ಮುಂದೆ ಏನು ಉತ್ತೇಜನ ಕೊಡಬೇಕು. ಏನು ಕೆಲಸವಾಗಬೇಕು ಎಂಬುದರ ಬಗ್ಗೆ ಸರಿಯಾದ ಸ್ಟ್ಯಾಟಿಸ್ಟಿಕ್ಸ್ ಇರಲಿಲ್ಲ. ಎಲ್ಲಾ ಬೇಕಾದಷ್ಟು ಭಾಷಣದಲ್ಲಿ ಹೇಳುತ್ತೇವೆ, ಆದರೆ ಎಷ್ಟು ಬಾವಿಗಳು, ಕೆರೆಗಳು ಆಗಬೇಕು, ಎಂಬ ಬಗ್ಗೆ ನ್ಯಾಯವಾದ ಸ್ಟ್ಯಾಟಿಸ್ಟಿಕ್ಸ್ ಇರುವುದಿಲ್ಲ. ಈ ಬಗ್ಗೆ ಹಿಂದಿನ ಸರಕಾರಗಳು ಸ್ಟ್ಯಾಟಿಸ್ಟಿಕ್ಸ್ ಕಲೆಕ್ಟ್ ಮಾಡಿರಲಿಲ್ಲ. ಈ ಅಂಶ ಮನಸ್ಸಿಗೆ ಬಂದ ತಕ್ಷಣ ಈ ಸರ್ಕಾರ ಒಂದೂವರೆ ವರ್ಷದ ಕೆಳಗೆ ಒಬ್ಬ ಐ.ಎ.ಎಸ್. ಅಫೀಸರನ್ನು ಸ್ಪೆಷಲ್ ಅಫೀಸರಾಗಿ ಈ ಕೆಲಸಕ್ಕೆ ನೇಮಕ ಮಾಡಿತು. ಇಡೀ ಭಾರತದಲ್ಲಿ ಮೈಸೂರೇ ಮೊದಲು ಈ ಸ್ಪೆಷಲ್ ಆಫೀಸರ್ ಇನ್‌ಚಾರ್ಜ್ ಆಫ್ ಇಂಟಿಗ್ರೇಟೆಡ್ ಪ್ಲಾನ್ ನೇಮಕ ಮಾಡಿ ಯೋಜನೆ ತಯಾರಿಸಿದ್ದು. ಸ್ಕೇರ್ಸಿಟಿ ಏರಿಯಾಗಳು ಅಭಿವೃದ್ಧಿಯಾಗಬೇಕಾದರೆ, ಅದಕ್ಕೆ ಬಹಳ ಮುಖಗಳಿವೆ; 3–4 ಮುಖ್ಯ ಮುಖಗಳಿವೆ. ಸುಮ್ಮನೆ ಒಂದು ಮುಖದಲ್ಲಿ ಅಭಿವೃದ್ಧಿಯಾದರೆ ಸಾಲದು ; ಸರ್ವತೋಮುಖವಾದ ಅಭಿವೃದ್ಧಿಯಾಗಬೇಕು. ಬೆಳೆಯುವುದಕ್ಕೆ ನೀರು ಒಂದು ಬೇಕು ; ಆಮೇಲೆ ಪ್ರೊಸೆಸಿಂಗ್, ಆಮೇಲೆ ಅಗ್ರೋ ಎಕಾನಮಿ, ಪ್ರಿಸರ್ವೇಶನ್, ಅಫಾರೆಸ್ಟೇಷನ್, ಕಾಂಟೂರ್ ಬಂಡಿಗ್ ಇವುಗಳ ಸಮಗ್ರ ವಿವರ ಬೇಕು. ಅಂದರೆ ಸರ್ವತೋಮುಖವಾದ ಒಂದು ಇಂಟೆಗ್ರೇಟೆಡ್ ಪ್ಲಾನ್ ವರ್ಕ್ ಮಾಡಬೇಕಾಯಿತು. ಯಾವ ಯಾವ ಪ್ಲಾನಿಗೆ ಎಷ್ಟೆಷ್ಟು ಖರ್ಚು ಮಾಡಬೇಕೆಂಬ ಬಗ್ಗೆ dependable statistics ಬೇಕು so that we can convince the Centre. ಇದಕ್ಕೋಸ್ಕರ ರೆವಿನ್ಯೂ ಇಲಾಖೆಯಲ್ಲಿ ಶ್ರೀ ವಿಶ್ವನಾಥನ್ ಎಂಬ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದೆವು. ಅವರು ಒಂದು ದೊಡ್ಡ ವರದಿ ತಯಾರಿಸಿದ್ದಾರೆ. ಅವರು ಒಂದು ಸಭೆ ಏರ್ಪಡಿಸಿ ಮಾನ್ಯ ಸದಸ್ಯರುಗಳನ್ನು ಅದಕ್ಕೆ ಕರೆದು, ತಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡರು. ಈಗ ಒಂದು ಇಂಟೇಗ್ರೇಟೆಡ್ ಡೆವಲಪ್‌ಮೆಂಟ್ ಪ್ಲಾನ್ ತಯಾರಾಗಿದೆ. ಆ ಪ್ಲಾನಿಗೆ 40 ಕೋಟಿ ರೂಪಾಯಿ ಅಂದಾಜಾಗಿದೆ. Scarcity areaಗಳಲ್ಲಿ ಒಂದೊಂದು ಪ್ಲಾನಿಗೆ ಎಷ್ಟೆಷ್ಟು ಕೋಟಿ ರೂಪಾಯಿ ಬೇಕಾಗುವುದು ಎಂದು dependable statistics ಕಲೆಕ್ಟ್ ಮಾಡಿದ ಕಳೆದವರ್ಷ ಕೇಂದ್ರ ಸರ್ಕಾರಕ್ಕೆ ಒಂದು ಜನರಲ್ ರಿಪೋರ್ಟನ್ನು ಕಳುಹಿಸಿದ್ದೇವೆ. This scheme costs Rs 40 crores. This is over and above the Five-Year Plan. ಬಾವಿಗಳು, ಮೈನರ್ ವರ್ಕ್ಸ್, ಅಫಾರೆಸ್ಟೇಷನ್, ಇತ್ಯಾದಿಗಳಿಗೆ 40 ಕೋಟಿ ರೂಪಾಯಿಗಳ ಸಮಗ್ರ ಯೋಜನೆಯನ್ನು ತಯಾರಿಸಿದ್ದೇವೆ. ಹೋದ ವರ್ಷ ಒಂದು ಇಂಟಿರೀಮ್ ರಿಪೋರ್ಟ್‌ಅನ್ನು ಕೇಂದ್ರಕ್ಕೆ ಕಳುಹಿಸಿ, ಒಪ್ಪಬೇಕೆಂದು ಒತ್ತಾಯ ಮಾಡಿದ್ದೆವು. ಇದರಮೇಲೆ ಕೇಂದ್ರ ಸರ್ಕಾರದವರು ಕಳೆದ ವರ್ಷ $3\frac{1}{4}$ ಕೋಟಿರೂಪಾಯಿ ಕೊಟ್ಟಿದ್ದರು. 40 ಕೋಟಿ ರೂಪಾಯಿ ಕೊಡಲಿಲ್ಲ, ಆದರೆ ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಕೇಂದ್ರವನ್ನು ಒಪ್ಪಿಸುತ್ತೇನೆ ಎಂಬ ಭರವಸೆ ಇಟ್ಟುಕೊಂಡಿದ್ದಾರೆ. Food and Agriculture Ministryಯವರು ಈ $3\frac{1}{4}$ ಕೋಟ ರೂಪಾಯಿನಲ್ಲಿ additional funds ಆಗಿ, ಯೋಜನೆಯ ವ್ಯಾಪ್ತಿಗೆ ಒಳ ಪಡೆದಂತೆ ಕೊಟ್ಟರು. ಇದನ್ನು ಮದ್ರಾಸಿನಲ್ಲಿ ಡಿಸೆಂಬರಿನಲ್ಲಿ ನಡೆದ ಮೀಟಿಂಗಿನಲ್ಲಿ ಶ್ರೀಮಾನ್ ಪಾಟೀಲರು ಮಂಜೂರು ಮಾಡಿದರು. ಈ $3\frac{1}{4}$ ಕೋಟಿ ರೂಪಾಯಿಯಲ್ಲಿ $1\frac{1}{4}$ಕೋಟಿ ರೂಪಾಯಿ ಬಾವಿಗಳಿಗೋಸ್ಕರ, ಒಂದು ಕೋಟಿ ರೂಪಾಯಿ minor irrigationಗೋಸ್ಕರ, ಒಂದು ಕೋಟಿ ರೂಪಾಯಿ, irrigation pump setsಗೆ ವೆಚ್ಚ ಮಾಡಿದ್ದೇವೆ.

ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಶಾಖೆಯ ಉಪ ಮಂತ್ರಿಗಳು ಮೈಸೂರಿಗೆ ಮೈನರ್ ಇರಿಗೇಷನ್‌ಗಾಗಿ ಎರಡುಕೋಟಿ ರೂಪಾಯಿಗಳ additional funds ಕೊಡುತ್ತೇವೆಂದು ಹೇಳಿದ್ದಾರೆ. ಅದು ಇಷ್ಟರಲ್ಲಿಯೇ ಬರುತ್ತದೆ. ಅದನ್ನು ಮೈನರ್ ಇರಿಗೇಷನ್ನಿಗೆ ಉಪಯೋಗಿಸಬೇಕು ಎಂದು ಇದ್ದೇವೆ. ಸಾಮಾನ್ಯವಾಗಿ ಸಣ್ಣಪುಟ್ಟ ಕೆರೆಗಳು, ಬಾವಿಗಳು, ಪಂಪುಸೆಟ್ಟುಗಳು ಇಷ್ಟಕ್ಕೆಮಾತ್ರ ಆ ಹಣವನ್ನು ಉಪಯೋಗಿಸಬೇಕೆಂದಿದ್ದೇವೆ. ಹೋದವರ್ಷ $3\frac{1}{4}$ ಕೋಟಿ ರೂಪಾಯಿ, ಈ ವರ್ಷ ಎರಡು ಕೋಟಿ ರೂಪಾಯಿ ಒಟ್ಟು ಐದೂಕಾಲು ಕೋಟಿ ರೂಪಾಯಿ ಕೊಟ್ಟಿದ್ದಾರೆ. ಇದು integrated plan ತಯಾರಿಸಿ ಕೇಂದ್ರಕ್ಕೆ ಕಳಿಸಿರುವುದರ ಪರಿಣಾಮವಾಗಿ ಬಂದಿದೆ. ಬೇರೆ ಯಾವ ಸರ್ಕಾರಗಳೂ ಈ ರೀತಿಯ ಪ್ಲಾನ್ ತಯಾರಿಸಿ ಕೇಂದ್ರಕ್ಕೆ ಕಳಿಸಿಲ್ಲ. ಮಹಾರಾಷ್ಟ್ರದಲ್ಲಿ ಎಷ್ಟು ಬಾವಿ ಆಗಬೇಕು, ಎಷ್ಟು ಕೆರೆಗಳಿವೆ ಎಂದರೆ ಒಂದೂ ಅಲ್ಲಿ ಸಿಕ್ಕುವುದಿಲ್ಲ, ಆಂಧ್ರದಲ್ಲಿಯೂ ಸಿಕ್ಕುವುದಿಲ್ಲ. ಆ ದೃಷ್ಟಿಯಿಂದ ಈ ಪ್ಲಾನಿಂಗ್ ಯುಗದಲ್ಲಿ facts and figures ಕೊಡದೆ ಇದ್ದರೆ ಕೇಂದ್ರ ಸರ್ಕಾರದವರು ಹಣವನ್ನು ಕೊಡಲು ಒಪ್ಪಿಕೊಳ್ಳುವುದಿಲ್ಲ. ಮೈಸೂರಿನಲ್ಲಿಮಾತ್ರ ಇಷ್ಟು statistics ಸಂಗ್ರಹಮಾಡಿ ಒಂದು ರಿಪೋರ್ಟ್ ಮಾಡಿದ್ದೇವೆ. It will be very helpful for the future generation also. The Committee took so much time to compile the statistics and collect the relevant data. Without these things we cannot ask even a single pie from the centre. ಇದೆಲ್ಲ ಆಗುವುದ

(ಶ್ರೀ ಎಂ. ವಿ. ಕೃಷ್ಣಪ್ಪ)

ರಿಂದ ದೇಶದಲ್ಲಿ ಕ್ಷಾಮಡಾಮರುಗಳು ಬರುವುದನ್ನು ನಿಲ್ಲಿಸುವುದಕ್ಕಾಗದೇ ಇದ್ದರೂ ಅದನ್ನು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಈ integrated plan ತಯಾರಿಸಿದೆ. ತಾವೆಲ್ಲರೂ ದೇಶದ ಹಿತದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳ ಕೈ ಭದ್ರಮಾಡಿದರೆ ಅದರಿಂದ ಹೆಚ್ಚಿನ ಹಣ ನಮಗೆ ಸಿಕ್ಕಬಹುದು ಎನ್ನುವುದರಲ್ಲಿ ಅನುಮಾನವಿಲ್ಲ. ಬಹುಶಃ ಈ ಯೋಜನೆಯನ್ನು ಮಾನ್ಯ ಸಭೆಯ ಮುಂದೆ ಇಟ್ಟು ಚರ್ಚೆಯಾಗಿದ್ದರೆ ಚೆನ್ನಾಗಿತ್ತೋ ಏನೋ. ಇದು ತಯಾರಾಗುವುದು ಸ್ವಲ್ಪ ನಿಧಾನವಾಯಿತು. ಇದು ಪೂರ್ತಿಯಾದಮೇಲೆ ಎಲ್ಲ ಸದಸ್ಯರಿಗೂ ಅದರ ಕಾಪಿಯನ್ನು ಕಳಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಹಿಂದೆ ಬಾವಿಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಮೂರು ಸಾವಿರ ರೂಪಾಯಿ ಸಾಲ ಮತ್ತು 500 ರೂಪಾಯಿ ಸಬ್ಸಿಡಿ ಕೊಡುತ್ತಿದ್ದೇವೆ. ಅದೂ ಸಾಕಾಗುವುದಿಲ್ಲ. ಕೇಂದ್ರಕ್ಕೆ enhanced loan ಕೊಡಬೇಕೆಂದು ಕೇಳಿದರೆ ಅವರೂ ಒಪ್ಪಬಹುದು. ಹೆಚ್ಚು ಹಣ ಕೊಡಲು ಒಪ್ಪಬೇಕಾದವರೂ, ಕೊಡಬೇಕಾದವರೂ ಅವರು. ಆಂಧ್ರದಲ್ಲಿ 750 ರೂಪಾಯಿ ಸಬ್ಸಿಡಿ ಕೊಡುತ್ತಾರೆ ಎಂದು ಕೆಲವರು ಹೇಳಿದರು. ಅಲ್ಲಿ 750 ರೂಪಾಯಿಗಳ ಸಬ್ಸಿಡಿ ಕೊಡುತ್ತಾರೆ, ನಿಜ. ಆದರೆ ಅವರು ಸಾಲವನ್ನು ಕೊಡುವುದಿಲ್ಲ. ಈ ಹಣ ಯಾರಿಗೆ ಸಿಕ್ಕುತ್ತದೆಂದರೆ ಯಾರಿಗೆ ನಾಲ್ಕಾರುಸಾವಿರ ರೂಪಾಯಿ ಖರ್ಚುಮಾಡಿ ಬಾವಿ ತೆಗೆಸುವುದಕ್ಕೆ ಶಕ್ತಿಯಿರುತ್ತದೆಯೋ ಅವರಿಗೆ ಮಾತ್ರ ಸಿಕ್ಕುತ್ತದೆ. ಸಾಮಾನ್ಯ ರೈತನಿಗೆ, ಬಡವನಿಗೆ ಏನೂ ಬರುವುದಿಲ್ಲ. ಆ ದೃಷ್ಟಿಯಿಂದ ಸಬ್ಸಿಡಿ ಕಡಿಮೆ ಇದ್ದರೂ loan portion ಜಾಸ್ತಿ ಇಟ್ಟಿರುವುದರಿಂದ ಹೆಚ್ಚು ಅನುಕೂಲವಾಗುತ್ತದೆ. ಮೊದಲು ಹಾಕಿದ ಪ್ಲಾನ್ ಪ್ರಕಾರ ನಾವು ಎಷ್ಟು ಬಾವಿಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅದಕ್ಕಿಂತ ಹೆಚ್ಚಾಗಿ ತೆಗೆದುಕೊಂಡಿದ್ದೇವೆ. ಅದೇರೀತಿ ಪಂಪು ಸೆಟ್‌ಗಳ ವಿಚಾರದಲ್ಲಿ ಹಾಕಿದ ಪ್ಲಾನ್‌ಗಿಂತ ಸರ್ವಿಸ್‌ಕೊಟ್ಟದ್ದು ಹೆಚ್ಚಾಗಿದೆ. 'ಬರಗಾಲದಲ್ಲಿ ಬಾವಿ ಇದ್ದವನು ಬದುಕಿದ!' ಎಂದು ಹೇಳಬಹುದು. ಇದಕ್ಕೆ ಯಾರೋ 'ಬಾಯಿ ಇದ್ದವನು ಬದುಕಿದ' ಎಂದು ಮಾಡಿದ್ದಾರೆ' ಇದು ಸರಿಯಿಲ್ಲ. ಬಾವಿ ಇದ್ದರೆ ಅದು ಬರಗಾಲದಲ್ಲಿ ದುಕಿಸುತ್ತದೆ. ಅಂಥ ಬಾವಿಗಳು ಈ ದೇಶದಲ್ಲಿ ಹೆಚ್ಚಾಗಿ ಆದರೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಬಾವಿಗಳನ್ನು ತೆಗೆದು ಪಂಪ್‌ಸೆಟ್‌ಗಳನ್ನು ಕೊಡುವುದಕ್ಕೆ ಹೆಚ್ಚು ಗಮನ ಕೊಡುತ್ತಿದ್ದೇವೆ.

ಸಣ್ಣ ನೀರಾವರಿ ಕೆಲಸಗಳು ಮೈಸೂರು ದೇಶದಲ್ಲಿ ಬಹಳವಾಗಿ ಆಗಬೇಕು. ಇದರಿಂದ ಒಂದೊಂದು ಹನಿ ನೀರನ್ನೂ preserve ಮಾಡಿಕೊಂಡಹಾಗೆ ಆಗುತ್ತದೆ. ಹೀಗೆ preserve ಮಾಡುವ ನೀರಿನಿಂದ subsoil water level ಜಾಸ್ತಿಯಾಗುತ್ತದೆ. ಇದರಿಂದ lift irrigationಗೆ ಅನುಕೂಲವಾಗುತ್ತದೆ. ಇದು ಎಲ್ಲ ಕಡೆಯೂ ಆಗಬೇಕು. ಅಭಾವವೆನ್ನುವುದು ಮಲೆನಾಡಿಗೆ ಇಲ್ಲ, ಮೈದಾನಕ್ಕೆಮಾತ್ರ ಎಂದು ಯಾರೂ ತಿಳಿಯಬಾರದು. ಮಲೆನಾಡಿನಲ್ಲಿಯೂ ಅಭಾವ ಪರಿಸ್ಥಿತಿ ಬರುತ್ತದೆ. ಮಂಡ್ಯ ಜಿಲ್ಲೆ ಎಂದಮಾತ್ರಕ್ಕೆ ಸಮೃದ್ಧಿಯಾದ ಜಿಲ್ಲೆ ಎಂದು ಯಾರೂ ತಿಳಿಯಬಾರದು. ಕೃಷ್ಣರಾಜಪೇಟೆ, ನಾಗಮಂಗಲ, ಮಳವಳ್ಳಿ, ಮದ್ದೂರಿನ ಅರ್ಧಭಾಗ, ಶ್ರೀರಂಗಪಟ್ಟಣದ ದಿಣ್ಣೆ ಪ್ರದೇಶ ಇಲ್ಲಿ ನೀರಿಲ್ಲದೆ ಬೆಳೆಗಳು ಒಣಗುತ್ತಿರುತ್ತವೆ. ಆ ಪ್ರದೇಶದಲ್ಲಿ ಅಭಾವ ಅಲ್ಲಲ್ಲಿ ಇದೆ ಎಂದು map out ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಪ್ಲಾನ್ ತಯಾರಾಗಿದೆ ಎಂದು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

ಉತ್ತರ ಕರ್ನಾಟಕದಲ್ಲಿ ಮಳೆ ಚೆನ್ನಾಗಿ ಆಗಿದೆ, ಧಾರವಾಡ ಜಿಲ್ಲೆಯ ಕೆಲವು ಭಾಗಗಳು, ಬೆಳಗಾಂ ಜಿಲ್ಲೆಯ ರಾಯಬಾಗ್ ತಾಲ್ಲೂಕ್, ಈ ಎರಡು ಪ್ರದೇಶಗಳನ್ನು ಬಿಟ್ಟರೆ. ಬಿಜಾಪುರ ಜಿಲ್ಲೆಯಲ್ಲಿಯೂ ಇದುವರೆಗೂ ಚೆನ್ನಾಗಿ ಮಳೆ ಬಂದಿದೆ, ಇನ್ನುಮುಂದೆ ಏನಾಗುತ್ತದೆಯೋ ಗೊತ್ತಿಲ್ಲ. ಹೈದರಾಬಾದ್ ಭಾಗದಲ್ಲಿಯೂ ಮಳೆ ಹೆಚ್ಚಾಗಿಯೇ ಆಗಿದೆ. ಉತ್ತರ ಭಾಗಕ್ಕಿಂತ ದಕ್ಷಿಣ ಮೈಸೂರಿನಲ್ಲಿಯೇ ಅಭಾವ ಪರಿಸ್ಥಿತಿ ಹೆಚ್ಚಾಗಿದೆ ಎಂದು ಕಂಡುಬಂದಿದೆ. ಇನ್ನುಮುಂದೆ ಆಗುವ ಮಳೆಗಳು ಚೆನ್ನಾಗಿ ಆಗಿ ಪರಿಸ್ಥಿತಿ ಸುಧಾರಿಸುತ್ತದೆ ಎಂದು ಭಾವಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—There are two points to be considered. Whether the mover of the resolution wants to exercise his right of reply to the Debate. But the time-factor should also be taken into consideration.

Sri K. LAKKAPPA.—I rise to a point of order. When the Minister has given the reply, is it right for an hon'ble Member who has moved a motion to reply again ?

Mr. SPEAKER.—Sri Lakkappa is still a young man. (*Laughter*). That is my difficulty. Young men are always difficult of correction. Whoever can call the Revenue Minister's "reply" as a reply to the motion? He only intervened to explain Government's position.

(*Sri K. Lakkappa rose*).

Mr. SPEAKER.—Let the hon'ble member read the Rules again and come and meet me tomorrow. (*Laughter*).

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ನಿರ್ಣಯದಮೇಲೆ ಮಂತ್ರಿಗಳೂ ಸೇರಿ 53 ಜನ ಭಾಗವಹಿಸಿದ್ದಾರೆ. 16 ಡಿಸ್ಟ್ರಿಕ್ಟಿನಿಂದ ಬಂದಿರತಕ್ಕ ಪ್ರತಿನಿಧಿಗಳು ಭಾಗವಹಿಸಿದ್ದಾರೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ 40 ಕೋಟಿ ರೂಪಾಯಿ ಯೋಜನೆ, ಈಗಿರುವಂತೆ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಪ್ರಕಾರ ಹಣವನ್ನು ಒದಗಿಸುತ್ತ ಹೋದರೆ, ಮುಗಿಯಲು 20 ವರ್ಷ ಬೇಕಾಗುತ್ತದೆ. ಆದುದರಿಂದ ಈ ಯೋಜನೆಯನ್ನು ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲೇ ಮುಗಿಸಿ ಅಭಾವಸ್ಥಿತಿ ಮತ್ತೆ ಬಾರದಹಾಗೆ ಮಾಡಬೇಕು ಶಾಶ್ವತವಾದ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮಾತ್ರ ಹೇಳಿ ಈ ನಿರ್ಣಯಕ್ಕೆ ಎಲ್ಲರೂ ಬೆಂಬಲವನ್ನು ನೀಡಿದ್ದಕ್ಕಾಗಿ ನಾನು ಅವರೆಲ್ಲರಿಗೂ ಆಭಾರಿಯಾಗಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—As I can gather from the Debate, the opinion on the motion seems to be unanimous. I do not think there is any need to put it to the vote of the House.

(*The House assented*)

THE MYSORE FAMINE RELIEF FUND BILL, 1962.

Motion to consider.

Sri M. V. KRISHNAPPA (Minister for Revenue).—Sir, I beg t. move;

"That the Mysore Famine Relief Fund Bill, 1962, be taken into consideration."

Mr. SPEAKER.—Motion moved :

"That the Mysore Famine Relief Fund Bill, 1962 be taken into consideration."

I think, there is nothing for the Hon'ble Minister to say about this.

4-30 P.M.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು II).—ಮಾನ್ಯ ಅಧ್ಯಕ್ಷರೇ, ಈ ಕ್ಷಾಮ ನಿವಾರಣ ಮಸೂದೆಯ ಬಗ್ಗೆ ಮಾತನಾಡುವಾಗ ಬಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ನಾನು ಬಯಸುತ್ತೇನೆ. ಮೊದಲನೇಯದು ಏನೆಂದರೆ, ಶ್ರೀಮಾನ್ ಹುಚ್ಚಮಾಸ್ತೀಗೌಡರು ತಂದಿದ್ದ ನಿರ್ಣಯದ ಮೇಲೆ ಅವರು ಮತ್ತು ಮಾನ್ಯ ಮಂತ್ರಿಗಳು ಕೊಟ್ಟಿರುವ ವಿವರಕ್ಕೆ ಈ ಬಿಲ್ಲು ಕೂಡ ಸಾಧಕವಾಗಿ ಬಂದಿದೆ. ಆ ನಿರ್ಣಯದ ಬಗ್ಗೆ ಒಳ್ಳೇ ಚರ್ಚೆ ಮಾಡಿದ್ದಾರೆ. ಸಾಧಾರಣವಾಗಿ 50 ಜನ ಸದಸ್ಯರು ಮಾತನಾಡಿದ್ದಾರೆ. ಸರಿಯಾಗಿ ಕೆಲಸ ಮಾಡಿ ಇನ್ನು ಮುಂದೆ ದೇಶದಲ್ಲಿ ಬರಗಾಲ ಬಾರದ ಹಾಗೆ ಕೆಲಸ ಮಾಡಲಿಕ್ಕೆ ಅನುಕೂಲವಾದರೆ ಅದು ಒಳ್ಳೆಯದು. ಅದೇ ಹೊತ್ತಿಗೆ ಇದರ ಬಗ್ಗೆ ಕೇಂದ್ರ ಸರಕಾರದ ಗಮನ ಸೆಳೆಯಬೇಕು. ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಮೈಸೂರು ರಾಜ್ಯದಲ್ಲಿ ಬರಗಾಲ ಹೋಗಿಲ್ಲ. ಕ್ಷಾಮ ಡಾಮರುಗಳು ಇದ್ದೇ ಇವೆ. ಈ ಕಡೆ